ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 2 ಶನಿವಾರ 2022

ಸಂಪುಟ: 43 | ಸಂಚಿಕೆ: 343 | ಪುಟಗಳು: 12 | ₹4

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523,
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಶುಭಾಶಯಗಳು

ನಾಡಿನ ಸಮಸ್ತ ಜನತೆಗೆ ಚಾಂದ್ರಮಾನ ಯುಗಾದಿ ಶುಭಾಶಯಗಳು

ಬಿಡುವು

ಚಾಂದ್ರಮಾನ ಯುಗಾದಿ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 3.4.2022ರ ಭಾನುವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ವ್ಯವಸ್ಥಾಪಕರು

ಶಿವಕುಮಾರ ಸ್ವಾಮಿಗಳ ಹಾದಿಯಲ್ಲಿ ಮೋದಿ

● ಗೃಹ ಸಚಿವ ಅಮಿತ್ ಶಾ ಪ್ರತಿಪಾದನೆ ● ದೇಶಾದ್ಯಂತ ಶ್ರೀಗಳ ಸೇವಾ ಶ್ರೇಷ್ಠತೆಗಳಾದ ಅನ್ನ, ಅಕ್ಷರ, ವಸತಿ ವಿಸ್ತರಣೆಗೆ ನರೇಂದ್ರ ಮೋದಿ ಅವಿರತ ಪ್ರಯತ್ನ ● ಸಿದ್ಧಗಂಗೆಯಲ್ಲಿ ಶ್ರೀಗಳ ಜಯಂತಿ ಕಾರ್ಯಕ್ರಮದಲ್ಲಿ ಮಹಾಚೇತನಕ್ಕೆ ಅಮಿತ್ ಷಾ ನಮನ



ತುಮಕೂರಿನ ಸಿದ್ಧಗಂಗಾ ಮಠದಲ್ಲಿ ಶುಕ್ರವಾರ ತ್ರಿವಿಧ ದಾಸೋಹಿ ಡಾ.ಶಿವಕುಮಾರ ಸ್ವಾಮೀಜಿಗಳ 115ನೇ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಉದ್ಘಾಟಿಸಿದರು.

ತುಮಕೂರು, ಏ. 1– ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ತ್ರಿವಿಧ ದಾಸೋಹಿ ಡಾ. ಶಿವಕುಮಾರ ಸ್ವಾಮೀಜಿ ಅವರು ತೋರಿಸಿದ ಹಾದಿಯಲ್ಲಿ ಸಾಗುತ್ತಿದ್ದು, ಉಚಿತ ಅನ್ನ, ಶಿಕ್ಷಣ ಮತ್ತು ವಸತಿ ಸೌಲಭ್ಯವನ್ನು ನೀಡುತ್ತಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ತ್ರಿವಿಧ ದಾಸೋಹಿ ಡಾ.ಶಿವಕುಮಾರ ಸ್ವಾಮೀಜಿಗಳ 115ನೇ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, 88 ವರ್ಷಗಳ ಕಾಲ ಅವಿರತ ಸೇವೆ ಸಲ್ಲಿಸಿ 111ನೇ ವಯಸ್ಸಿನಲ್ಲಿ, 2019ರಲ್ಲಿ ಲಿಂಗೈಕ್ಯರಾದ ಶ್ರೀಗಳ ಸೇವೆಯನ್ನು ಶ್ಲಾಘಿಸಿದರು.

ಪ್ರತಿದಿನ 10 ಸಾವಿರ ಮಕ್ಕಳಿಗೆ ಆಹಾರ ನೀಡುವುದು, ಅವರಿಗೆ ಉಚಿತ ಶಿಕ್ಷಣ ಮತ್ತು ಆಶ್ರಯ ನೀಡುವುದು 'ಕರ್ಮಯೋಗಿ'ಯಿಂದ ಮಾತ್ರ ಸಾಧ್ಯ ಎಂದ ಅವರು, 12ನೇ ಶತಮಾನದ ಸಮಾಜ ಸುಧಾರಕ ಬಸವೇಶ್ವರರ ಬೋಧನೆಯನ್ನು ಶ್ರೀಗಳು ಜಾರಿಗೆ ತಂದರು. ಅಲ್ಲದೆ ಮಠವನ್ನು ಜನರ ಉನ್ನತಿಯ ಕೇಂದ್ರವನ್ನಾಗಿ ಮಾಡಿದರು ಎಂದು ಹೇಳಿದರು. ಈ ಮಠದಲ್ಲಿ ಯಾರೂ ಹಸಿವಿನಿಂದ ಇರುವುದಿಲ್ಲ. ಸಮಾಜದ ಜಾತಿ–ಮತ ಭೇದವಿಲ್ಲದೇ 10 ಸಾವಿರ ಮಕ್ಕಳು ಪ್ರತಿದಿನ ಆಹಾರ, ಶಿಕ್ಷಣ ಮತ್ತು ವಸತಿ ಪಡೆಯುತ್ತಿದ್ದಾರೆ. ಅದೇ ರೀತಿ ● 7ನೇ ಪುಟಕ್ಕೆ

ಮಧ್ಯಾಹ್ನದ ಬಿಸಿಯೂಟ ಯೋಜನೆಗೆ ಡಾ.ಶಿವಕುಮಾರ ಸ್ವಾಮೀಜಿ ಹೆಸರು: ಸಿಎಂ ಬೊಮ್ಮಾಯಿ ಘೋಷಣೆ ▶ 6

ಪಠ್ಯಪುಸ್ತಕದಲ್ಲಿ ಶ್ರೀಗಳ ಜೀವನ ಚರಿತ್ರೆ ಸೇರ್ಪಡೆಗೆ ಬಿಎಸ್‌ವೈ ಮನವಿ ▶ 6



ಅಪೆಕ್ಸ್ ಬ್ಯಾಂಕ್‌ಗಳೊಂದಿಗೆ ಡಿಸಿಸಿ ಬ್ಯಾಂಕ್ ವಿಲೀನಗೊಳಿಸಿದರೆ ಸಹಕಾರ ಕ್ಷೇತ್ರಕ್ಕೆ ಮಾರಕ

- ರಾಜ್ಯದ ಸಹಕಾರ ಮಹಾ ಮಂಡಳದ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರ ಆತಂಕ
- ಸಹಕಾರ ವಲಯ ಎರಡು ಹಂತಕ್ಕೆ ಸೀಮಿತಗೊಳ್ಳಬಾರದು
- ಗುಜರಾತ್ ಮಹಾರಾಷ್ಟ್ರ ನಮಗೆ ಮಾದರಿಯಾಗಬೇಕೇ ಹೊರತು ಕೇರಳವಲ್ಲ

ಬೆಂಗಳೂರು, ಏ.1–ರಾಜ್ಯದ ಅಪೆಕ್ಸ್ ಬ್ಯಾಂಕ್‌ಗಳೊಂದಿಗೆ ಜಿಲ್ಲಾ ಸಹಕಾರ ಕೇಂದ್ರ (ಡಿಸಿಸಿ) ಬ್ಯಾಂಕ್‌ಗಳನ್ನು ವಿಲೀನಗೊಳಿಸಬಾರದು. ಹಾಗೊಂದು ವೇಳೆ ರಾಜ್ಯ ಸರ್ಕಾರ ವಿಲೀನಗೊಳಿಸಿದರೆ ಸಹಕಾರ ಕ್ಷೇತ್ರಕ್ಕೆ ಮಾರಕವಾಗಲಿದೆ ಎಂದು ರಾಜ್ಯ ಸಹಕಾರ ಮಹಾಮಂಡಳ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.



ಬೆಂಗಳೂರಿನ ಮಹಾಮಂಡಳದ ಕಚೇರಿಯಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ರಾಜ್ಯದ ಎಲ್ಲಾ 21 ಡಿಸಿಸಿ ಬ್ಯಾಂಕ್‌ಗಳು ಲಾಭದಾಯಕವಾಗಿದ್ದು, ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಹೀಗಾಗಿ ಅವುಗಳ ವಿಲೀನದಿಂದಾಗುವ ದುಷ್ಪರಿಣಾಮಗಳ ಬಗ್ಗೆ ಕೇಂದ್ರ ಸಹಕಾರ ಸಚಿವರಿಗೆ ರಾಜ್ಯ ಸರ್ಕಾರ ಮನವರಿಕೆ ಮಾಡಬೇಕು ಎಂದರು.

ಸಹಕಾರ ವಲಯದಲ್ಲಿ ಈಗಿರುವ ಮೂರು ಹಂತದ ವ್ಯವಹಾರ ಮುಂದುವರೆಯಬೇಕು. ಯಾವುದೇ ಕಾರಣಕ್ಕೂ ಎರಡು ಹಂತಕ್ಕೆ ಸೀಮಿತಗೊಳಿಸಬಾರದು.

ಡಿಸಿಸಿ ಬ್ಯಾಂಕ್‌ಗಳು ಕೃಷಿ, ಸ್ವಸಹಾಯ ಸಂಘ, ಪಶುಸಂಗೋಪನೆ, ಚಿನ್ನಾಭರಣ ಸೇರಿದಂತೆ ವಿವಿಧ ರೀತಿಯ ಸಾಲಗಳನ್ನು ಗ್ರಾಹಕರಿಗೆ, ರೈತರಿಗೆ ನೀಡುತ್ತಿವೆ. ರೈತರ ಅಭ್ಯುದಯಕ್ಕೆ ಶ್ರಮಿಸುತ್ತಿರುವ ಈ ಬ್ಯಾಂಕ್‌ಗಳಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರ ಉತ್ತೇಜನ ನೀಡಿ ಮತ್ತಷ್ಟು ಬಲಿಷ್ಠಗೊಳಿಸಬೇಕು ಎಂದು ಹೇಳಿದರು.

ಗುಜರಾತ್, ಮಹಾರಾಷ್ಟ್ರ ರಾಜ್ಯಗಳು ನಮಗೆ ಮಾದರಿಯಾಗಬೇಕೇ ಹೊರತು ಕೇರಳ ಮಾದರಿಯಲ್ಲ. 1969ರಲ್ಲಿ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿ ಅವರು ಬ್ಯಾಂಕ್‌ಗಳ ರಾಷ್ಟ್ರೀಕರಣ ಮಾಡಿದರು. 1969–70ರಿಂದ ಬ್ಯಾಂಕ್‌ಗಳು ಸಹಕಾರ ಸಂಘಗಳ ಮೂಲಕ ರೈತರಿಗೆ ಮತ್ತು ಬಡವರು ಸೇರಿದಂತೆ ವಿವಿಧ ವರ್ಗಗಳಿಗೆ ಸಾಲ ನೀಡುತ್ತಿದ್ದವು. 1975–76ರಲ್ಲಿ ಸಹಕಾರ ಸಂಘಗಳ ಮೂಲಕ ರೈತರಿಗೆ ನೀಡುತ್ತಿದ್ದ ಸಾಲವನ್ನು ನಿಲ್ಲಿಸಿದ್ದ ಕಾರಣ ಎಲ್ಲ ಸಹಕಾರ ಸಂಘಗಳು ಮತ್ತೆ ಜಿಲ್ಲಾ ಸಹಕಾರ ಸಂಘಗಳ ಮೊರೆ ಹೋಗಬೇಕಾಯಿತು. ಅಂದಿನಿಂದ ಡಿಸಿಸಿ ಬ್ಯಾಂಕ್‌ಗಳ ಮೂಲಕ ಸಾಲ ನೀಡಲಾಗುತ್ತಿದೆ. ಡಿಸಿಸಿ ಬ್ಯಾಂಕ್‌ಗಳನ್ನು ಸಮರ್ಥ ಬ್ಯಾಂಕ್‌ಗಳನ್ನಾಗಿ ಮಾಡಬೇಕೇ ಹೊರತು ವಿಲೀನಗೊಳಿಸುವ ಮೂಲಕ ದುರ್ಬಲ ಬ್ಯಾಂಕ್‌ಗಳನ್ನಾಗಿ ಮಾಡಬಾರದು ಎಂದರು.

ಕೇಂದ್ರ ಸರ್ಕಾರ ವಾಣಿಜ್ಯ ಬ್ಯಾಂಕ್‌ಗಳಿಗೆ ಬಂಡವಾಳ ಸೇರ್ಪಡೆ ಮಾಡುವಂತೆ, ಸಂಕಷ್ಟದಲ್ಲಿರುವ ಡಿಸಿಸಿ ಬ್ಯಾಂಕ್‌ಗಳಿಗೆ ರಾಜ್ಯ ಸರ್ಕಾರ ಬಂಡವಾಳ ಸೇರ್ಪಡೆ ಮಾಡಬೇಕೆಂದು ಸಲಹೆ ನೀಡಿದರು.


ಬಡ್ಡಿ ಸಹಾಯ ವರ್ಷದಿಂದ ವರ್ಷಕ್ಕೆ ಕಡಿಮೆಯಾದರೂ ಯಾವುದೇ ಡಿಸಿಸಿ ಬ್ಯಾಂಕ್‌ಗಳು ನಷ್ಟಕ್ಕೆ ಒಳಗಾಗಿಲ್ಲ. ಸರ್ಕಾರ ಶೇ.7.10 ಬಡ್ಡಿ ಸಹಾಯಧನವನ್ನು ನೀಡಬೇಕು ಎಂದು ಒತ್ತಾಯಿಸಿದರು. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸುಸ್ತಿಯಾದರೆ ಕೇಂದ್ರ ಸರ್ಕಾರ ಬ್ಯಾಂಕ್‌ಗಳಿಗೆ ಪ್ಯಾಕೇಜ್ ನೀಡುತ್ತದೆ. ಡಿಸಿಸಿ ಬ್ಯಾಂಕಿನಲ್ಲಿ ರೈತ ಸುಸ್ತಿಗೊಂಡರೆ ಪ್ಯಾಕೇಜ್ ನೀಡುವುದಿಲ್ಲ ಎಂದರು.



ಶುಕ್ರವಾರ ತಮ್ಮ 47ನೇ ವರ್ಷದ ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ನಿರ್ದೇಶಕ ಎಸ್.ಕುಮಾರ್ ಅವರನ್ನು ಸಿದ್ಧಲಿಂಗಪುರ ಜಿಪಂ ಉಸ್ತುವಾರಿ ಮಂಜುಗೌಡ ಹಾಗೂ ಅಭಿಮಾನಿಗಳು ಅಭಿನಂದಿಸಿ, ಶುಭಾಶಯ ಕೋರಿದರು.

ಡಾ.ಯೋಗಣ್ಣರ ಕೃತಿಗೆ ಸಾಹಿತ್ಯ ಅಕಾಡೆಮಿ ಪುರಸ್ಕಾರ

ಮೈಸೂರು, ಏ.1–ಖ್ಯಾತ ವೈದ್ಯ ಸಾಹಿತಿ ಡಾ. ಎಸ್.ಪಿ. ಯೋಗಣ್ಣರ ಆಧ್ಯಾತ್ಮಿಕ ಆರೋಗ್ಯ ದರ್ಶನ ಕೃತಿಯು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನಕ್ಕೆ ಆಯ್ಕೆಯಾಗಿದೆ.



ಮೈಸೂರಿನ ರಾಮಕೃಷ್ಣ ನಗರದ ಸುಯೋಗ ಆಸ್ಪತ್ರೆಯ ಅಧ್ಯಕ್ಷರೂ ಆದ ಡಾ.ಯೋಗಣ್ಣನವರು ಕಳೆದ 40 ದಶಕಗಳಿಗೂ ಹೆಚ್ಚು ಕಾಲ ಕನ್ನಡ ವೈದ್ಯಕೀಯ ಸಾಹಿತ್ಯ ಕೃಷಿ ಮಾಡಿದ್ದಾರೆ. ಈಗಾಗಲೇ ಇವರು ಸಮಗ್ರ ಆರೋಗ್ಯ ದರ್ಶನ, ಹೃದಯಾಘಾತ, ದುಶ್ಚಟಗಳು ಮತ್ತು ಪರಿಣಾಮಗಳು, ಪ್ರಧಾನ ರೋಗಗಳು, ನಾನ್ಯಾರು, ಸಕ್ಕರೆ ಕಾಯಿಲೆ–ಪ್ರಶ್ನೋತ್ತರ, ಲೈಂಗಿಕ ಶಾಸ್ತ್ರ, ಅಭ್ಯಾಸಗಳು ಮತ್ತು ಆರೋಗ್ಯ ಹೀಗೆ ನಲವತ್ತಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಇವರ ಅನೇಕ ಲೇಖನಗಳು ನಾಡಿನ ಹೆಸರಾಂತ ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ.

ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವೈದ್ಯ ವಿಜ್ಞಾನ ವಿಷಯ ವಿಶ್ವಕೋಶದ ಗೌರವ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದು, ಈ ಗ್ರಂಥವು ಪ್ರಕಟಣೆಯ ಹಂತದಲ್ಲಿದೆ. ಐಎಂಎ ಕನ್ನಡ ವೈದ್ಯ ಬರಹಗಾರರ ಬಳಗದ ಪ್ರಥಮ ಸಮ್ಮೇಳನದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿರುವ ಇವರು ಕನ್ನಡ ಪುಸ್ತಕ ಪ್ರಾಧಿಕಾರ ಕೊಡಮಾಡುವ ಡಾ. ಅನುಪಮ ನಿರಂಜನ ಕನ್ನಡ ವೈದ್ಯವಿಜ್ಞಾನ ಸಾಹಿತ್ಯ ಪ್ರಶಸ್ತಿಗೂ ಪಾತ್ರರಾಗಿದ್ದಾರೆ. ಐಎಂಎ ಕೊಡಮಾಡುವ ಶ್ರೇಷ್ಠ ವೈದ್ಯಸಾಹಿತ್ಯ ಪ್ರಶಸ್ತಿಯು ಇವರಿಗೆ ಲಭಿಸಿದೆ.

ಇಂದು ಯುಗಾದಿ ವಿಶೇಷ ಪೂಜೆ

ಮೈಸೂರು,ಏ.1–ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಚಾಂದ್ರಮಾನ ಯುಗಾದಿ ಪ್ರಯುಕ್ತ ಏ.2ರಂದು ಪಂಚಾಮೃತ, ವಿಶೇಷ ನವನೀತ ಅಲಂಕಾರ ಮಹಾಮಂಗಳಾರತಿ ಹಾಗೂ ಲೋಕ ಕಲ್ಯಾಣಾರ್ಥ ಶನಿಶಾಂತಿ, ಮೃತ್ಯುಂಜಯ ಹೋಮ ಹಾಗೂ ಶನಿಶಾಂತಿ ಹೋಮ ಹಮ್ಮಿಕೊಳ್ಳಲಾಗಿದೆ. ಬೆಳಗ್ಗೆ 9ರಿಂದ 10ರವರೆಗೆ ಸಂಕಲ್ಪ, ಮಧ್ಯಾಹ್ನ 12 ಗಂಟೆಗೆ ಪೂರ್ಣಾಹುತಿ, ಮಹಾ ಮಂಗಳಾರತಿ ತೀರ್ಥ ಪ್ರಸಾದ ವಿನಿಯೋಗ, ಸಂಜೆ 5.30ಕ್ಕೆ ವಿಶ್ವಕ್ಸೇನಾರಾಧನೆ, ಪಂಚಾಂಗ ಶ್ರವಣ ಏರ್ಪಡಿಸಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಲು ಕೋರಲಾಗಿದೆ. ಮಾಹಿತಿಗಾಗಿ ಮೊ. 09342112477 ಸಂಪರ್ಕಿಸಬಹುದು.

ಕರ್ನಾಟಕ ಸಾಹಿತ್ಯ ಅಕಾಡೆಮಿ ವಾರ್ಷಿಕ ಪ್ರಶಸ್ತಿ ಪ್ರಕಟ

ಕೊಡಗಿನ ಅಬ್ದುಲ್ ರಷೀದ್‌ಗೆ ಸಾಹಿತ್ಯ ಶ್ರೀ ಪ್ರಶಸ್ತಿ

ಮೈಸೂರು, ಏ.1– ಕರ್ನಾಟಕ ಸಾಹಿತ್ಯ ಅಕಾಡೆಮಿಯ 2021ನೇ ಸಾಲಿನ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದ್ದು, ಐವರು ಹಿರಿಯ ಸಾಹಿತಿಗಳಿಗೆ ವರ್ಷದ ಗೌರವ ಪ್ರಶಸ್ತಿ, 10 ಮಂದಿ ಸಾಹಿತಿಗಳಿಗೆ 'ಸಾಹಿತ್ಯ ಶ್ರೀ' ಪ್ರಶಸ್ತಿ, 19 ಕೃತಿಗಳಿಗೆ ಬಹುಮಾನ ಮತ್ತು 10 ಕೃತಿಗಳಿಗೆ ದತ್ತಿ ಬಹುಮಾನಗಳನ್ನು ಪ್ರಕಟಿಸಲಾಗಿದೆ.



ಅಬ್ದುಲ್ ರಶೀದ್

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ. ಬಿ.ವಿ.ವಸಂತಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸರ್ವ ಸದಸ್ಯರ ಸಭೆಯಲ್ಲಿ 50 ಸಾವಿರ ರೂ. ನಗದು, ಪ್ರಶಸ್ತಿ ಫಲಕ ಒಳಗೊಂಡ ವರ್ಷದ ಗೌರವ ಪ್ರಶಸ್ತಿಯನ್ನು ಹಿರಿಯ ಸಾಹಿತಿಗಳಾದ ಜಿನದತ್ತ ದೇಸಾಯಿ, ಡಾ.ನಾ.ಮೊಗಸಾಲೆ, ಡಾ.ಸರಸ್ವತಿ ಚಿಮ್ಮಲಗಿ, ಪ್ರೊ. ಬಸವರಾಜ ಕಲ್ಗುಡಿ, ಎಲ್ಲಪ್ಪ ಕೆ.ಕೆ.ಪುರ ಅವರಿಗೆ ನೀಡಲು ತೀರ್ಮಾನಿಸಲಾಯಿತು.

25 ಸಾವಿರ ನಗದು ಹಾಗೂ ಫಲಕ ಒಳಗೊಂಡ 'ಸಾಹಿತ್ಯ ಶ್ರೀ' ಪ್ರಶಸ್ತಿಗೆ ಸೃಜನಶೀಲ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆಗೈದ ಐವರು, ಸೃಜನೇತರ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆಗೈದ ಮೂವರು, ಸಾಹಿತ್ಯ ಪರಿಚಾರಕರಿಗೆ ಮತ್ತು ಹೊರನಾಡ ಸಾಧಕರಿಗೆ ತಲಾ 1 ಪ್ರಶಸ್ತಿಯಂತೆ 10 ಮಂದಿಗೆ ಪ್ರಶಸ್ತಿ ನೀಡಲು ತೀರ್ಮಾನಿಸಲಾಗಿದ್ದು, ಡಾ.ಚಂದ್ರಕಲಾ ಬಿದರಿ, ಪ್ರೊ.ಎಂ.ಎನ್.ವೆಂಕಟೇಶ್, ಡಾ.ಚನ್ನಬಸವಯ್ಯ ಹಿರೇಮಠ, ಡಾ.ಮ.ರಾಮಕೃಷ್ಣ, ಅಬ್ದುಲ್ ರಷೀದ್, ಡಾ.ವೈ.ಎಂ.ಭಜಂತ್ರಿ, ಜೋಗಿ(ಗಿರೀಶ್ ರಾವ್ ಅತ್ವಾರ್), ಮೈಸೂರು ಕೃಷ್ಣಮೂರ್ತಿ, ಗಣೇಶ್ ಅಮೀನಗಡ ಮತ್ತು ಆಲೂರು ದೊಡ್ಡನಿಂಗಪ್ಪ 'ಸಾಹಿತ್ಯ ಶ್ರೀ' ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಆರನಕಟ್ಟೆ ರಂಗನಾಥ ಅವರ 'ಕಾರುಣ್ಯದ ಮೋಹಕ ನವಿಲುಗಳೆ', ಮಂಜುಳಾ ಹಿರೇಮಠ ಅವರ 'ಗಾಯಗೊಂಡವ ರಿಗೆ', ಹೆಚ್.ಟಿ.ಪೋತೆ ಅವರ 'ಬಯಲೆಂಬೊ ಬಯಲು', ಎಸ್.ಸುರೇಂದ್ರನಾಥ್ ಅವರ 'ಬಂಡಲ್ ಕಥೆಗಳು', ಮಂಗಳಾ ಟಿ.ಎಸ್. ಅವರ 'ಆರೋಹಿ', ಎನ್.ರಾಮನಾಥ್ ಅವರ 'ನಿದ್ರಾಂಗನೆಯ ಸೆಳವಿನಲ್ಲಿ', ಭಾರತೀ ಬಿ.ವಿ. ಅವರ 'ನಕ್ಷತ್ರಗಳ ಸುತ್ತ ನಾಡಿನಲ್ಲಿ', ಕೃಷ್ಣ ಕೊಲ್ಹಾರ ಕುಲಕರ್ಣಿ ಅವರ 'ಗ್ರಾಮ ಸ್ವರಾಜ್ಯ ಸಾಕಾರಗೊಳಿಸಿದ ರಾಮಪ್ಪ ದಾಲಪ್ಪ ಬಿದರಿ', ಬಸವರಾಜ ಸಬರದ ಅವರ 'ಹೈದರಾಬಾದ್ ಕರ್ನಾಟಕದ ಆಧುನಿಕ ಸಾಹಿತ್ಯ ಮೀಮಾಂಸೆ', ಕೆ.ರವೀಂದ್ರನಾಥ್ ಅವರ 'ಲಿಂಗಣ್ಣ ಕವಿಯ ವರವಮ್ಮ ರತ್ನಾಕರ', ವೈ.ಜಿ.ಭಗವತಿ ಅವರ 'ಮತ್ತೆ ಹೊಸ ಗೆಳೆಯರು', ಡಾ. ಎಸ್.ಪಿ. ಯೋಗಣ್ಣ ಅವರ 'ಆಧ್ಯಾತ್ಮಿಕ ಆರೋಗ್ಯ ದರ್ಶನ', ಎಂ.ಎಂ. ಗುಪ್ತಾ ಅವರ 'ಗಾಂಧೀಯ ಅರ್ಥಶಾಸ್ತ್ರ', ಪಿ.ತಿಪ್ಪೇಸ್ವಾಮಿ ಚಳ್ಳೇಕೆರೆ ಅವರ ಮ್ಯಾಸಬೇಡರ ಮೌಖಿಕ ಕಥನಗಳು', ಕೇಶವ ಮಳಗಿ ಅವರ 'ದೈವಿಕ ಹೂವಿನ ಸುಗಂಧ', ಸುಧಾಕರನ್ ರಾಮಂತಳಿ ಅವರ 'ಶಿವಂಡೆ ಕಡುಂತುಡಿ', ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ 'ಪದ ಸೋಪಾನ', ಸಿದ್ದಲಿಂಗಯ್ಯ ಹೊಲತಾಳು ಅವರ 'ಸುವರ್ಣಮುಖಿ', ಎಸ್.ಬಿ.ಬಸೆಟ್ಟಿ ಅವರ 'ಭಾರತದ ರಾಷ್ಟ್ರಧ್ವಜ: ವಿಕಾಸ ಹಾಗೂ ಸಂಹಿತೆ' ಕೃತಿಗಳು 25 ಸಾವಿರ ರೂ. ಬಹುಮಾನ ಹಾಗೂ ಫಲಕಕ್ಕೆ ಆಯ್ಕೆಯಾಗಿವೆ.

ಚಿ.ಶ್ರೀನಿವಾಸರಾಜು ದತ್ತಿ ನಿಧಿಗೆ ಕಾವ್ಯ–ಹಸ್ತಪ್ರತಿ ಪ್ರಕಾರದಲ್ಲಿ ಪದ್ಮಜಾ ಜಯತೀರ್ಥ ಉಮರ್ಜಿ ಅವರ 'ಬೆಳದಿಂಗಳ ಚೆಲುವು', ಚದುರಂಗ ದತ್ತಿ ನಿಧಿಗೆ ಕಾದಂಬರಿ ಪ್ರಕಾರದಲ್ಲಿ ಎಂ.ಎಸ್. ವೇದಾ ಅವರ 'ದೊಡ್ಡತಾಯಿ', ವಿ.ಸೀತಾರಾಮಯ್ಯ ಸೋದರಿ ಇಂದಿರಾ ದತ್ತಿ ನಿಧಿಗೆ ಲಲಿತ ಪ್ರಬಂಧ ಪ್ರಕಾರದಲ್ಲಿ ಆರತಿ ಘಟಿಕರ್ ಅವರ 'ವಠಾರ ಮೀಮಾಂಸೆ', ಸಿಂಪಿ ಲಿಂಗಣ್ಣ ದತ್ತಿ ನಿಧಿಗೆ ಜೀವನ ಚರಿತ್ರೆ ಪ್ರಕಾರದಲ್ಲಿ ಪುರುಷೋತ್ತಮ ಬಿಳಿಮಲೆ ಅವರ 'ಕಾಗೆ ಮುಟ್ಟಿದ ನೀರು', ಪಿ.ಶ್ರೀನಿವಾಸರಾವ್ ದತ್ತಿ ನಿಧಿಗೆ ಸಾಹಿತ್ಯ ವಿಮರ್ಶೆ ಪ್ರಕಾರದಲ್ಲಿ ತಾರಿಣಿ ಶುಭದಾಯಿನಿ ಅವರ 'ಕುವೆಂಪು ಸ್ತ್ರೀ ಸಂವೇದನೆ', ಎಲ್.ಗುಂಡಪ್ಪ ಮತ್ತು ಶಾರದಮ್ಮ ದತ್ತಿ ನಿಧಿಗೆ ಅನುವಾದ–1 ಪ್ರಕಾರದಲ್ಲಿ ಪದ್ಮರಾಜ ದಂಡಾವತಿ ಅವರ 'ಸೀತಾ', ಮಧುರ ಚೆನ್ನ ದತ್ತಿ ನಿಧಿಗೆ ಲೇಖಕರ ಮೊದಲ ಸ್ವತಂತ್ರ ಕೃತಿ ಪ್ರಕಾರದಲ್ಲಿ ಕುಶ್ವಂತ್ ಕೋಳಿಬೈಲು ಅವರ 'ಕೂರ್ಗ್ ರೆಜಿಮೆಂಟ್', ಅಮೆರಿಕನ್ನಡ ದತ್ತಿ ನಿಧಿಗೆ ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದ ಪ್ರಕಾರದಲ್ಲಿ ಕೆ.ಎಂ.ಶ್ರೀನಿವಾಸಗೌಡ ಮತ್ತು ಜಿ.ಕೆ. ಶ್ರೀಕಂಠಮೂರ್ತಿ ಅವರ 'ದಿ ಬ್ರೈಡ್ ಇನ್ ದಿ ರೈನಿ ಮೌಂಟನ್ಸ್', ಬಿ.ವಿ.ವೀರಭದ್ರಪ್ಪ ದತ್ತಿ ನಿಧಿಗೆ ವೈಚಾರಿಕ/ಅಂಕಣ ಬರಹ ಪ್ರಕಾರದಲ್ಲಿ ನಡಹಳ್ಳಿ ವಸಂತ ಅವರ 'ಸಮರಸದ ದಾಂಪತ್ಯ', ಶ್ರೀಮತಿ ಜಲಜಾ ಶ್ರೀಪತಿ ಆಚಾರ್ಯ ಗಂಗೂರ್ ದತ್ತಿ ನಿಧಿಗೆ ದಾಸ ಸಾಹಿತ್ಯ ಪ್ರಕಾರದಲ್ಲಿ ಶ್ರೀನಿವಾಸ ಸಿರನೂರಕರ್ ಅವರ 'ಪುರಂ ದರ ದಾಸರ ಬಂಡಾಯ ಪ್ರಜ್ಞೆ' ಕೃತಿಗಳು ಆಯ್ಕೆಯಾಗಿವೆ.



ಮೈಸೂರಿನ ಶಕ್ತಿನಗರದ ಪಾರ್ಕ್‌ನಲ್ಲಿ ಜಿಮ್ ನಿರ್ಮಾಣ ಕಾಮಗಾರಿಗೆ ಕಾರ್ಪೋರೇಟರ್ ಸಾತ್ವಿಕ್ ಸಂದೇಶ್ ಸ್ವಾಮಿ ಗುದ್ದಲಿಪೂಜೆ ನೆರವೇರಿಸಿದರು. ಈ ವೇಳೆ ಮುಖಂಡರಾದ ಶ್ರೀಕಂಠ ಮೂರ್ತಿ, ಮಂಜು ಸಿ.ಗೌಡ, ರೇಣುಕಾ ರಾಜು, ಮಮತಾ ಚಂದ್ರಶೇಖರ್, ವೆಂಕಟೇಶ, ಮಹಾಂತಣ್ಣ, ಕೆಂಪೇಗೌಡ, ಮಹಾಬಲರಾಜ್, ಸತೀಶ್, ಸ್ವಾಮಿ, ಶಿವು, ಸ್ಥಳೀಯ ನಿವಾಸಿಗಳು ಇದ್ದರು.

ಶ್ರೀ ಹಿಂಗುಲಾಂಬಿಕಾ ಮಾತಾ ಜಯಂತಿ ಆಚರಣೆ

ಮೈಸೂರು,ಏ.1(ಆರ್‌ಕೆಬಿ)– ಶ್ರೀ ಹಿಂಗುಲಾಂಬಿಕಾ ಮಾತೆಯ ಜಯಂತ್ಯುತ್ಸವ ಅಂಗವಾಗಿ ಮೈಸೂರಿನ ಅಶೋಕ ರಸ್ತೆ ದಕ್ಷಿಣ ಕ್ರಾಸ್‌ನಲ್ಲಿರುವ ಭಾವಸಾರ ಕ್ಷತ್ರಿಯ ಸಮುದಾಯದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ವಿಶೇಷ ಪೂಜಾ ಕಾರ್ಯಕ್ರಮ ನಡೆಯಿತು.



ಈ ಸಂದರ್ಭದಲ್ಲಿ ಮಾತನಾಡಿದ ಭಾವಸಾರ ಕ್ಷತ್ರಿಯ ಮಂಡಳಿ ಅಧ್ಯಕ್ಷ ಆರ್.ವಿ.ಶಿವಾಜಿರಾವ್ ರಂಪೂರೆ ಅವರು ಭಾವಸಾರ ಕ್ಷತ್ರಿಯ ಸಮುದಾಯದ ರಕ್ಷಣೆಯಲ್ಲಿ ಶ್ರೀ ಹಿಂಗುಲಾಂಬಿಕಾ ಮಾತಾ ಕೃಪೆ ಬಗ್ಗೆ ವಿವರಿಸಿದರು.

ಈ ಸಂದರ್ಭದಲ್ಲಿ ಮಂಡಳಿ ಕಾರ್ಯದರ್ಶಿ ರಾಕೇಶ್ ನಾಯಕ್, ನಿರ್ದೇಶಕರಾದ ನಾಗರಾಜ ಪತಂಗೆ, ಸುಭಾಷ್ ಪತಂಗೆ, ಶಶಿಕುಮಾರ್ ಮಹೇಂದ್ರಕರ್, ಜೈಕುಮಾರ್ ಲಾಳಿಗೆ, ಭಾವಸಾರ ಕ್ಷತ್ರಿಯ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ ದಯಾಶಂಕರ್ ಲಾಲೆ, ಮುಖಂಡರಾದ ಚೈತನ್ಯಕುಮಾರ್ ಹಿರಾಸ್ಕರ್, ಸತ್ಯನಾರಾಯಣ್ ಸುಲಾಖೆ, ರಾಜೇಶ್ ಕುತ್ನಿಕರ್, ಗೋಪಾಲಕೃಷ್ಣರಾವ್ ಕುತ್ನಿಕರ್, ವಾಸುದೇವರಾವ್ ಕುತ್ನಿಕರ್, ಬಾಲಾಜಿ ರೇಳೇಕರ್, ಮಂಜುನಾಥ್ ಲಾಳಿಗೆ, ಹರೀಶ್ ಗುಜ್ಜಾರ್, ಅರುಣ್ ಶೇರ್ಕರ್ ಇನ್ನಿತರರು ಉಪಸ್ಥಿತರಿದ್ದರು.

ಮುಡಾ ಬಜೆಟ್‌ನಲ್ಲಿ ದಳವಾಯಿ ಕೆರೆ, ದೇವಿಕೆರೆ, ಗೊಬ್ಬಳಿ ಕೆರೆಗೆ ಹಣ ಮೀಸಲಿಡಲು ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಒತ್ತಾಯ

ಮೈಸೂರು, ಏ.1(ಆರ್‌ಕೆಬಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಬಜೆಟ್‌ನಲ್ಲಿ ದಳವಾಯಿ ಕೆರೆ, ದೇವಿ ಕೆರೆ ಹಾಗೂ ಗೊಬ್ಬಳಿ ಕೆರೆಗಳಿಗೆ ವಿಶೇಷ ಆದ್ಯತೆ ನೀಡಿ ಹಣ ಮೀಸಲಿಡಬೇಕು ಎಂದು ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಒತ್ತಾಯಿಸಿದರು.



ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾ ಬಜೆಟ್‌ನಲ್ಲಿ ರಸ್ತೆ, ನೀರು ಸೇರಿದಂತೆ ಸಾಕಷ್ಟು ವಿಚಾರಗಳಿಗೆ ಹಣ ಮೀಸಲಿಡಲಾಗಿದೆ. ಆದರೆ, ಜೆ.ಪಿ.ನಗರ ಸಮೀಪದ ದಳವಾಯಿ ಕೆರೆ, ಚಾಮುಂಡಿಬೆಟ್ಟದ ದೇವಿಕೆರೆ, ತಪ್ಪಲಿನ ಗೊಬ್ಬಳಿ ಕೆರೆ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಬೇಕು. ನಗರದ ಬಹುತೇಕ ತ್ಯಾಜ್ಯ ನೀರು ದಳವಾಯಿ ಕೆರೆ ಸೇರಿ ಕಲುಷಿಗೊಂಡಿದೆ ಎಂದು ಹೇಳಿದರು.

ನಿರ್ಲಕ್ಷ್ಯಕ್ಕೊಳಗಾಗಿರುವ ಚಾಮುಂಡಿಬೆಟ್ಟದ ತಪ್ಪಲಿನ ಗೊಬ್ಬಳಿಕೆರೆ 50 ಎಕರೆ ಪ್ರದೇಶದ ಜಲಮೂಲವನ್ನು ಸಂರಕ್ಷಿಸಿದರೆ ಬೆಟ್ಟದ ಸೌಂದರ್ಯ ವೃದ್ಧಿಸಲಿದೆ. ಪಾವಿತ್ರ್ಯತೆಯೂ ಉಳಿಸಿದಂತಾಗುತ್ತದೆ. ಆದ್ದರಿಂದ ಬಜೆಟ್‌ನಲ್ಲಿ ಇದನ್ನು ಸೇರ್ಪಡೆ ಮಾಡಬೇಕು ಎಂದು ಒತ್ತಾಯಿಸಿದರು. ಕಬಿನಿ ಯೋಜನೆಗೆ 150 ಕೋಟಿ ರೂ. ಪೈಕಿ ಈಗಾಗಲೇ 60 ಕೋಟಿ ರೂ. ಠೇವಣಿ ಇಟ್ಟು, ಕಾಮಗಾರಿ ಆರಂಭಿಸಿರುವ ಮುಡಾ ಅಧ್ಯಕ್ಷರು, ಮೈಸೂರಿನ ಹೊಸ ಬಡಾವಣೆಗಳಿಗೆ ಕಾವೇರಿ ನೀರು ಪೂರೈಸಲು ದಿಟ್ಟ ಕ್ರಮ ಕೈಗೊಂಡಿರುವುದನ್ನು ಭೈರಪ್ಪ ಸ್ವಾಗತಿಸಿದರು. ಜೆ.ಪಿ.ನಗರದ ಅಕ್ಕಮಹಾದೇವಿ ರಸ್ತೆ ರಿಂಗ್ ರಸ್ತೆ ದಾಟಲು ಕಷ್ಟವಾಗುತ್ತಿತ್ತು. ಆದರೆ, 1.8 ಕಿ.ಮೀ. ರಸ್ತೆಯನ್ನು ಅಗಲೀಕರಣ ಮಾಡಿ ಹೊರವರ್ತುಲ ರಸ್ತೆಗೆ ಸಂಪರ್ಕ ಕಲ್ಪಿಸುವ ಕಾಮಗಾರಿಗೆ 5 ಕೋಟಿ ರೂ. ನೀಡಿರುವುದು ಉತ್ತಮ ವಿಚಾರ. ಆದರೆ, ಇದೆಲ್ಲ ಯೋಜನೆಗಳು ಪೂರ್ಣಗೊಳ್ಳುವವರೆಗೆ ಮುಡಾ ಅಧ್ಯಕ್ಷರನ್ನು ಬದಲಾಯಿಸಬಾರದು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ವೆಂಕಟೇಶ್, ಸಿದ್ದಲಿಂಗಪ್ಪ ಉಪಸ್ಥಿತರಿದ್ದರು.

ಇಂದು ಉಚಿತ ತರಬೇತಿ ಕಾರ್ಯಾಗಾರ

ಮೈಸೂರು, ಏ.1– ಮೈಸೂರಿನ ನೇತಾಜಿ ಎಜುಕೇಷನ್ ಫೌಂಡೇಷನ್ ವತಿಯಿಂದ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳಿಗೆ ಸಂಬಂಧಿಸಿದಂತೆ ಏ.2 ರಂದು ಒಂದು ದಿನದ ಉಚಿತ ತರಬೇತಿ ಕಾರ್ಯಾಗಾರ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–3553964, 6364116745 ಸಂಪರ್ಕಿಸಬಹುದು.

ನಿಧನ

ಎಸ್.ಪಿ.ರಮೇಶ್




ಮೈಸೂರು, ಏ.1– ಮೈಸೂರು ಜೆಪಿನಗರ ಮಹದೇವಪುರದ ನಿವಾಸಿ ಎಸ್.ಪಿ.ರಮೇಶ್ (51) ಅವರು ಶುಕ್ರವಾರ ಮಧ್ಯಾಹ್ನ 3 ಗಂಟೆಯಲ್ಲಿ ಹೃದಯಾಘಾತದಿಂದ ನಿಧನರಾದರು.

ಇವರು ಪತ್ನಿ ಶ್ರೀಮತಿ ಮಾಲ, ಪುತ್ರಿ ಕುಮಾರಿ ಸಮಿತ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಶನಿವಾರ) ಬೆಳಗ್ಗೆ 11 ಗಂಟೆಗೆ ಕುವೆಂಪುನಗರದ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೃತರು, ನಿವೃತ್ತ ಪೊಲೀಸ್ ಅಧಿಕಾರಿ ಹಾಗೂ ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘದ ಉಪಾಧ್ಯಕ್ಷ ಮರಿಗೌಡ ಅವರ ಸಹೋದರ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

02.04.2022 ಶನಿವಾರ, ಮಳೆ ನಕ್ಷತ್ರ: ರೇವತಿ 31.03.2022 ರಿಂದ 13.04.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಚೈತ್ರ ಮಾಸ, ಶುಕ್ಲ ಪಕ್ಷ
ತಿಥಿ: ಪ್ರತಿಪತ್, ನಕ್ಷತ್ರ: ರೇವತಿ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ಸಂಸ್ಕೃತಿ–2022, ವಿಶೇಷ ಕೈಮಗ್ಗ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10ರಿಂದ.

■ **ಶ್ರೀ ಉತ್ತರಾದಿ ಮಠ:** ಬೆಳಗ್ಗೆ 5ಕ್ಕೆ ಶ್ರೀ ಮೂಲ ರಾಮದೇವರು ಮತ್ತು ಗುರುಗಳಿಗೆ ತೈಲ ಸಮರ್ಪಣೆ, ಬೆಳಗ್ಗೆ 6.30ಕ್ಕೆ ಶ್ರೀಗಳಿಂದ ಭಕ್ತರಿಗೆ ತೈಲ ಪ್ರದಾನ, ಬೆಳಗ್ಗೆ 8.30ಕ್ಕೆ ಧನ್ವಂತರಿ ದೇವರಿಗೆ ಫಲ ಪಂಚಾಮೃತ ಅಭಿಷೇಕ, ಬೆಳಗ್ಗೆ 9ಕ್ಕೆ ಭಕ್ತರಿಗೆ ಮುದ್ರಾಧಾರಣೆ, ಶ್ರೀ ಸತ್ಯಾತ್ಮ ತೀರ್ಥರ 50ನೇ ವರ್ಷದ ವರ್ಧಂತಿ ಅಂಗವಾಗಿ ಶ್ರೀ ಧನ್ವಂತರಿ ಮಹಾಯಾಗ, ಶ್ರೀ ಸತ್ಯಾತ್ಮ ತೀರ್ಥರಿಂದ ಸಂಸ್ಥಾನ ಪೂಜೆ, ಶ್ರೀ ಧನ್ವಂತರಿ ದೇವರಿಗೆ ಬೆಳ್ಳಿ ಪಲ್ಲಕ್ಕಿ, ಸುವರ್ಣ ನೇತ್ರ ಸಮರ್ಪಣೆ, ಶ್ರೀ ಸತ್ಯ ಸಂಕಲ್ಪರು ಮತ್ತು ಶ್ರೀ ಸತ್ಯ ಸಂತುಷ್ಟ ತೀರ್ಥರ ವೃಂದಾವನಗಳಿಗೆ ಸುವರ್ಣ ದ್ವಾದಶ ನಾಮಗಳ ಅರ್ಪಣೆ, ಮಧ್ಯಾಹ್ನ 1 ಗಂಟೆಗೆ ಭಕ್ತರಿಗೆ ತೀರ್ಥ–ಪ್ರಸಾದ ವಿತರಣೆ, ಸಂಜೆ 6ಕ್ಕೆ ಪಂಡಿತರಿಂದ ಉಪನ್ಯಾಸ, ಸಂಜೆ 6.30ಕ್ಕೆ ಸಾಂಸ್ಕೃತಿಕ ಕಾರ್ಯ ಕ್ರಮ, ಸಂಜೆ 7ಕ್ಕೆ ಶ್ರೀ ಸತ್ಯಾತ್ಮ ತೀರ್ಥರಿಂದ ವಿಶೇಷ ಪ್ರವಚನ, ಸ್ಥಳ: ಶ್ರೀ ಉತ್ತರಾದಿ ಮಠ, ಅಗ್ರಹಾರ.

■ **ಶ್ರೀ ಮಹಾಜನ ಸಭಾ, ಕೃಷ್ಣಮೂರ್ತಿಪುರಂ ಶ್ರೀ ರಾಮಮಂದಿರ :** 93ನೇ ವರ್ಷದ ಶ್ರೀರಾಮೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳು, ಬೆಳಗ್ಗೆ ಅಭಿಷೇಕಗಳು ಮತ್ತು ನೂತನ ಸಂವತ್ಸರದ ಪಂಚಾಂಗ ಶ್ರವಣ, ಬೆಳಗ್ಗೆ 10 ರಿಂದ ಜಿ.ಎಸ್. ಜಯರಾಮ್ ಅವರಿಂದ ಶ್ರೀಮದ್ ರಾಮಾಯಣ ಪಾರಾಯಣ, ಸಂಜೆ 6ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಶ್ರೀರಾಮಮಂದಿರ, ಕೃಷ್ಣಮೂರ್ತಿಪುರಂ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** 13ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಶ್ರೀ ಮಹಾಗಣಪತಿ ಪೂಜಾ, ಪುಣ್ಯಾಃವಾಚನ, ಮಹಾಸಂಕಲ್ಪ, ಅಂಕುರಾರ್ಪಣೆ, ನಾಂದಿ ಕಲಶ ಸ್ಥಾಪನೆ, ಮಹಾಭಿಷೇಕ, ಯುಗಾದಿ ಪಂಚಾಂಗ ಶ್ರವಣ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ಚಕ್ರಾರ್ಚನೆ, ನವಾವರಣ ಪೂಜೆ, ಸಂಜೆ 5.30ರಿಂದ ಶ್ರೀ ಮಹಾವಿಷ್ಣು ದಶಾವತಾರಹೋಮ ಮತ್ತು ಮಹಾ ಧನ್ವಂತರಿ ಹೋಮ, ಪೂರ್ಣಾಹುತಿ, ಕುಂಕುಮಾರ್ಚನೆ, ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮಿಪುರಂ.


■ **ಗಣಪತಿ ದೇವಸ್ಥಾನ :** ರಾಮೋತ್ಸವ ಕಾರ್ಯಕ್ರಮಗಳು, ಸಂಜೆ 6.30ಕ್ಕೆ ಶ್ರೀ ಶಾರದಾದೇವಿ ಮಹಿಳಾ ಸಮಾಜದಿಂದ ಭಜನೆ, ಸಂಜೆ 7ಕ್ಕೆ ಪಂಚಾಂಗ ಶ್ರವಣ, 8ಕ್ಕೆ ನೃತ್ಯ ವೈಭವ– ಡಾ. ಕೃಪಾ ಫಡಕೆ ಹಾಗೂ ಶಿಷ್ಯ ವೃಂದದಿಂದ, ಸ್ಥಳ: ರಜತ್ ಸಭಾ ಮಂಟಪ, ಐ ಬ್ಲಾಕ್, ರಾಮಕೃಷ್ಣನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20ಗೀತಾರಾಧನ, 6.35 ಭವದ ಬಯಲಿಗರು– ವಚನಕಾರರ ಪರಿಚಯಾತ್ಮಕ ಕಾರ್ಯಕ್ರಮ, ಲೇಖನ ಮತ್ತು ಪ್ರಸ್ತುತಿ–ಮೈಸೂರು ಉಮೇಶ್, 6.40 ಅರಿವಿನ ಶಿಖರ, ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ಕೆ.ಪಿ.ರೇವತಿ, ವ್ಯಾಖ್ಯಾನ –ಡಾ.ಪ್ರದೀಪ್‌ಕುಮಾರ್, 7.15 ತ್ಯಾಜ್ಯ ನಿಭಾಯಿಸುವ ರೀತಿ–ಪ್ರಾಯೋಜಿತ ಕಾರ್ಯಕ್ರಮ, 9.00 ರಾಗಲಹರಿ–ಕರ್ನಾಟಕ ಶಾಸ್ತ್ರೀಯ ಸಂಗೀತದ ರಾಗಗಳ ಚಿತ್ತಾರ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ ಸ್ವಾತಂತ್ರ್ಯ ಚಳವಳಿಯ ಪಯಣ–ಆಕಾಶವಾಣಿಯೊಂದಿಗೆ, 10.00 ಎಂ.ಎಸ್.ಗೋಪಾಲ ಕೃಷ್ಣನ್–ವಯೋಲಿನ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.45 ಜನಪದಗೀತೆ–ಅಶ್ವಿನ್ ಪ್ರಭು, 1.20 ಭಾವಗೀತೆ, 3.35ಮಕ್ಕಳ ಮಂಟಪ–ನಾದಾಮೃತ ವಿದ್ಯಾಲಯದ ಮಕ್ಕಳಿಂದ ಯುಗಾದಿ ಕುರಿತು ಕಾರ್ಯಕ್ರಮ, 4.00 ನಾಟಕ, 4.30 ನೆನಪಿನಂಗಳ–ಸಾಹಿತ್ಯ ಕ್ಷೇತ್ರದ ಹಿರಿಯ ಪ್ರಕಾಶಕರು, ವಿಮರ್ಶಕರು ಹಾಗೂ ಲೇಖಕರಾದ ಪ್ರೊ.ಹೆಚ್.ಎಂ.ಶಂಕರನಾರಾಯಣ ಅವರೊಂದಿಗೆ ಡಾ. ಪ್ರಧಾನ್ ಗುರುದತ್ತ ಅವರು ನಡೆಸಿರುವ ಸಂವಾದ, ಪ್ರಸ್ತುತಿ–ಎಸ್.ಲಕ್ಷ್ಮೀನಾರಾಯಣ, 6.50 ಕೃಷಿರಂಗ–ಕಿಸಾನ್ ವಾಣಿ, ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.00 ಜನಪದ ಸಂಗೀತ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಆಶಿಸ್ ಸಾಹು–ಗಿಟಾರ್ ವಾದನ, 11.00 ಸವಿನೆನಪು

ಮೈಸೂರು ಹಾಗೂ ಸುತ್ತಮುತ್ತ ನಾಳೆ...



ನಾಳಿನ ಪಂಚಾಂಗ

03.04.2022 ಭಾನುವಾರ, ಮಳೆ ನಕ್ಷತ್ರ: ರೇವತಿ 31.03.2022 ರಿಂದ 13.04.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಚೈತ್ರ ಮಾಸ, ಶುಕ್ಲ ಪಕ್ಷ
ತಿಥಿ: ದ್ವಿತೀಯ, ನಕ್ಷತ್ರ: ಅಶ್ವಿನಿ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ :** ಸಂಸ್ಕೃತಿ–2022, ವಿಶೇಷ ಕೈಮಗ್ಗ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ರಿಂದ.

■ **ಶ್ರೀ ಉತ್ತರಾದಿ ಮಠ :** ಬೆಳಗ್ಗೆ 9ಕ್ಕೆ ಭಕ್ತರಿಗೆ ಶ್ರೀ ಸತ್ಯಾತ್ಮ ತೀರ್ಥರಿಂದ ಮುದ್ರಾ ಧಾರಣೆ, ಸಂಜೆ 6.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ, ವಿದ್ವಾನ್ ವಿ.ವಿ. ಪ್ರಸನ್ನ ಅವರಿಂದ ದಾಸವಾಣಿ, ಸಂಜೆ 7ಕ್ಕೆ ಶ್ರೀ ಸತ್ಯಾತ್ಮ ತೀರ್ಥರಿಂದ ವಿಶೇಷ ಪ್ರವಚನ, ಸ್ಥಳ: ಶ್ರೀ ಉತ್ತರಾದಿ ಮಠ, ಅಗ್ರಹಾರ.

■ **ಶ್ರೀ ಮಹಾಜನ ಸಭಾ, ಕೃಷ್ಣಮೂರ್ತಿಪುರಂ ಶ್ರೀ ರಾಮಮಂದಿರ :** 93ನೇ ವರ್ಷದ ಶ್ರೀರಾಮೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳು, ಬೆಳಗ್ಗೆ 10ಕ್ಕೆ ಶ್ರೀ ರಾಮ ಭಜನಾ ಮಂಡಳಿಯವರಿಂದ ಭಜನೆ, ಸಂಜೆ 6ಕ್ಕೆ ಸುವಿದಾತಿ ಪ್ರತಿಷ್ಠಾನದಿಂದ ವರಿಷ್ಠ ಗಾನ, ಸುಮಂತ್ ವಸಿಷ್ಠ ಸಂಗಡಿಗರಿಂದ ಸಂಗೀತ ಸಂಭ್ರಮ, ಸ್ಥಳ: ಶ್ರೀರಾಮಮಂದಿರ, ಕೃಷ್ಣಮೂರ್ತಿಪುರಂ.

■ **ಭಾವಸಾರ ಕ್ಷತ್ರಿಯ ಮಂಡಳಿ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಮಂಡಳಿ ಅಧ್ಯಕ್ಷ ಆರ್.ವಿ. ಶಿವಾಜಿರಾವ್ ರಂಪೂರೆ, ಸ್ಥಳ : ಶ್ರೀ ವಿಠ್ಠಲ ರುಕ್ಮಿಣಿ ಕನ್‌ವೆನ್‌ಷನ್ ಹಾಲ್, ವಿಜಯನಗರ 3ನೇ ಹಂತ, ಬೆಳಗ್ಗೆ 10.30ಕ್ಕೆ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** 13ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ಚಕ್ರಾರ್ಚನೆ, ಸಂಜೆ 6.30ಕ್ಕೆ ಶ್ರೀ ಮಹಾಪ್ರತ್ಯಂಗೀರಾ ಹೋಮ, ಶ್ರೀ ಪ್ರಚಂಡ ಚಂಡಿಕಾ ಹೋಮ, ಪೂರ್ಣಾಹುತಿ, ಕುಂಕುಮಾರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮಿಪುರಂ.

■ **ಶ್ರೀ ರಾಮಸೇವಾ ಮಂಡಳಿ ಚಾರಿಟಬಲ್ ಟ್ರಸ್ಟ್:** ಶ್ರೀರಾಮನವಮಿ ಸಂಗೀತ ಕಾರ್ಯಕ್ರಮ, ವಿದ್ವಾನ್ ಎಸ್. ಶಂಕರ್ ಅವರಿಂದ ಗಾಯನ, ವಿದ್ವಾನ್ ಎಸ್. ಶಂಕರ್ ಅದಿಥಿ ಕೃಷ್ಣ ಪ್ರಕಾಶ್ –ಪಿಟೀಲು, ಎ. ರಾಧೇಶ್–ಮೃದಂಗ, ವಿ.ಎಸ್. ರಮೇಶ್ (ಮೋರ್ಚಿಂಗ್), ಸ್ಥಳ : ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ. ಮೊಹಲ್ಲಾ, ಸಂಜೆ 6.15ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ವಿಶೇಷ ಸರಣಿ 'ನಮ್ಮ ಸಂವಿಧಾನ' ಪರಿಚಯಿಸುತ್ತಾರೆ–ಡಾ. ಸುಧಾಕರ ಹೊಸಳ್ಳಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ಹಂಸಿನಿ ಎಸ್.ಕುಮಾರ್, ಎಂ.ಎಸ್.ಲಕ್ಷ್ಮೀಶ, ವ್ಯಾಖ್ಯಾನ– ಡಾ.ಹೆಚ್.ಎಂಕಲಾಶ್ರೀ, 7.15 ಪ್ರಾಯೋಜಿತ ಕಾರ್ಯಕ್ರಮ 'ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ', ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.00 ಭವಿಷ್ಯದ ಬೆರಗು–ನವದೆಹಲಿಯ ವಿಜ್ಞಾನ ಪ್ರಸಾರ್ ಹಾಗೂ ತಂತ್ರವಿದ್ಯಾಮಂಡಳಿಯ ಸಹಯೋಗದಲ್ಲಿ ವಿಜ್ಞಾನ ಸರಣಿ ಕಾರ್ಯಕ್ರಮ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳವಳಿಯ ಪಯಣ, 9.40 ನಮ್ಮ ಆರೋಗ್ಯ–ವಿಶ್ವ ಆಟಿಸಂ ಸಪ್ತಾಹದ ಸಂದರ್ಭದಲ್ಲಿ ಆಟಿಸಂ ಸ್ಪೆಕ್ಟ್ರಂ ಡಿಸಾರ್ಡರ್, ನಿರ್ವಹಣೆ ಮತ್ತು ಪರಿಹಾರ ಕುರಿತುಡಾ. ಜಯಶ್ರೀ ಸಿ.ಶಾನ್ಬಾಲ್ ಅವರೊಂದಿಗೆ ಮಾತುಕತೆ, 10.00ಕೇಳಿಗಿಳಿಗಳೇ–ಕಥೆ ಹೇಳ್ತೀಂಯೋ ಹಾಡು ಹೇಳ್ತೀಂಯೋ, 10.30 ಮಕ್ಕಳಮಂಟಪ–ಅಮೃತ ವಿದ್ಯಾಲಯದ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ–ವಿದ್ಯಾಭೂಷಣ, 12.45 ಜನಪದ ಸಂಗೀತ–ಭಾಗ್ಯಮ್ಮ ಮತ್ತು ತಂಡ, 1.20ಭಾವಗೀತೆ–ಬಾಳಪ್ಪ ಹುಕ್ಕೇರಿ, 2.35 ಚಲನಚಿತ್ರ ಧ್ವನಿವಾಹಿನಿ, 3.40 ಯಕ್ಷಗಾನ ತಾಳ ಮದ್ದಲೆಪ್ರಸಂಗ–ಭೀಷ್ಮ ಪ್ರತಿಜ್ಞೆ, ಪ್ರಸ್ತುತಿ–ಕಾಸರಗೋಡು ಎಡನೀರು ಮಠದ ಶ್ರೀ ಕೇಸವಾನಂದ ಭಾರತಿ ಸ್ವಾಮೀಜಿ ಮತ್ತು ತಂಡದವರು, 4.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 5.00 ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ವಿಶೇಷ ಸರಣಿ 'ನಮ್ಮಸಂವಿಧಾನ' ಪರಿಚಯಿಸುತ್ತಾರೆ–ಡಾ.ಸುಧಾಕರ ಹೊಸಳ್ಳಿ, 7.00 AIR Nxtprogramme, 9.00 ಕೃಷಿರಂಗ–ತೋರಣ ಹೂರಣ, ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ. ಎ.ಚಂದನ್‌ಕುಮಾರ್–ವೇಣುವಾದನ, 11.00 ಸವಿನೆನಪು

■ **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್:** ರಾಮೋತ್ಸವ ಕಾರ್ಯಕ್ರಮಗಳು, ಸಂಜೆ 6.30ಕ್ಕೆ ವಿದುಷಿ ಶ್ರುತಿ ರಂಜನಿ ಶಿಷ್ಯ ವೃಂದದಿಂದ ದೇವರನಾಮ, ಸಂಜೆ 7ಕ್ಕೆ ವಿದುಷಿ ಶ್ರುತಿ ರಂಜನಿ ಎಂ.ಟಿ. ಮತ್ತು ವಿದುಷಿ ಬಿಂದುಮಾಲಿನಿ ಎಂ.ಟಿ.ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ದ್ವಂದ್ವ ಗಾಯನ, ರಾತ್ರಿ 8ಕ್ಕೆ ವಿದುಷಿ ಸುರಕ್ಷಾ ದೀಕ್ಷಿತ್ ಅವರಿಂದ ಭರತನಾಟ್ಯ, ಸ್ಥಳ: ರಜತ್ ಸಭಾ ಮಂಟಪ, ಐ ಬ್ಲಾಕ್, ರಾಮಕೃಷ್ಣನಗರ.

■ **ರಂಗಾಯಣ:** ವಾರಾಂತ್ಯ ರಂಗಪ್ರದರ್ಶನದ ಅಂಗವಾಗಿ ರಂಗಾಯಣದ ಹಿರಿಯ ಕಲಾವಿದರಿಂದ 'ಮಿ. ಬೋಗೀಶ್' ನಾಟಕ ಪ್ರದರ್ಶನ, ನಿರ್ದೇಶನ: ಹೆಚ್.ಕೆ. ದ್ವಾರಕಾನಾಥ್, ಸ್ಥಳ: ಭೂಮಿಗೀತ ರಂಗ ಮಂದಿರ, ಸಂಜೆ 6.30ಕ್ಕೆ.

ಸುತ್ತೂರಿನಲ್ಲಿಂದು

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ:** ಯುಗಾದಿ ಅಲ್ಲಮಪ್ರಭು ಜಯಂತಿ ಹಾಗೂ ಪಂಚಾಂಗ ಶ್ರವಣ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಡಾ.ಶಿವರಾಜಪ್ಪ ಅವರಿಂದ ಅಲ್ಲಮಪ್ರಭುದೇವರ ಚಿಂತನೆಗಳ ಪ್ರಸ್ತುತತೆ ಕುರಿತು ಉಪನ್ಯಾಸ, ಪಂಚಾಂಗಕರ್ತ ಸಿದ್ಧಾಂತಿ ಡಾ.ಕೆ.ಜಿ. ಪುಟ್ಟಹೊನ್ನಯ್ಯ ಅವರಿಂದ ಶ್ರೀ ಶಿವರಾತ್ರೀಶ್ವರ ಪಂಚಾಂಗ ಪಠನ, ಸ್ಥಳ: ಸುತ್ತೂರು, ಬೆಳಗ್ಗೆ 10.30ರಿಂದ.


The Cars™ Collective
ಯುಗಾದಿ
ಕೊಡುಗೆಗಳು 2022
ಹೊಸ ವರುಷದಲ್ಲಿ »»
«« ಹೊಸ ಕಾರಿನಲ್ಲಿ
ಹೊಸ ಪಯಣ ಶುರುವಾಗಲಿ ನಮ್ಮೊಂದಿಗೆ
1 ವರ್ಷದ ವಾರಂಟಿ
₹ 10 ಸಾವಿರ ಮೌಲ್ಯದ ಆಕ್ಸೆಸರಿ
₹ 10 ಸಾವಿರ ಎಕ್ಸ್‌ಚೇಂಜ್ ಬೋನಸ್
ಇನ್ನೂ ಹೆಚ್ಚು
ವಿಳಾಸ: ಬಂಬು ಬಜಾರ್, ಮೈಸೂರು
9761 05 2222
www.thecarscollective.com


PINAKIN CINEMAS
ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು
HAPPY UGADI
ಒಂದೊಳ್ಳೆ ಲವ್ ಸ್ಟೋರಿ
COMING SOON
A PRAVEEN SUTAR FILM
PRODUCED BY: NIRANJAN BABU & ASHWIN
MUSIC: AKASH JADAV EDITOR: RAJSHIV CINEMATOGRAPHY: VINOD MANDYA STORY: ASHWIN
SCREENPLAY: ASHWIN - MAHESH PATIL - PRAVEEN SUTAR DIALOGUES: VIJAYENDRA JODIDAR MAKE UP - NAVEEN
LYRICS: DR. V NAGENDRA PRASAD - VASU VATHSALE - NITHIN BHARADWAJ - AKASH JADAV - PRAVEEN SUTAR
VOCALS - VASUKI VAIBHAV, PANCHAM JEEV, KAPIL KAPILAN, ASHA BHAT, ART - RAVIDEEP
MANAGER : PRADEEP BHAT STILLS - SRINATH RAO SFX - SANKAR DIRECTION DEPARTMENT : MAHESH PATIL - BASAVA PUTTU
/ONDOLLE LOVE STORY
MAINFRAME


ನಾಡಿನ ಸಮಸ್ತ ಜನತೆಗೆ
ಯುಗಾದಿ
ಹಬ್ಬದ ಶುಭಾಶಯಗಳು

ನಕ್ಕರೆ ಅದೇ ಸ್ವರ್ಗ

ಪತಿ : "ನನ್ನ ಮೇಲೆ ಎಷ್ಟೊಂದು ಪ್ರೀತಿ ನಿನಗೆ, ನನಗೋಸ್ಕರ ಎರಡು ಬನಿಯನ್ ತಂದಿದ್ದೀಯಾ?"

ಪತ್ನಿ : "ಐದು ಸಾವಿರ ಕೊಟ್ಟು ಸೀರೆ ತಗೊಂಡೆ. ಅದಕ್ಕೆ ಫ್ರೀಯಾಗಿ ಕೊಟ್ಟರು ಅಷ್ಟೆ"

ಮೈಸೂರು ಮಿತ್ರ

ಶನಿವಾರ, 2 ಏಪ್ರಿಲ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಅಪವಾದಗಳಿಗೆ ಅತ್ಯುತ್ತಮ ಉತ್ತರವೆಂದರೆ ಮೌನ –ಬೆನ್‌ಜಾನ್ಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ತೋಟ ಮಾಡಿದವನಿಗೆ ಕೋಟಲೆಯಿಲ್ಲ

ನಿಮ್ಮ ಪತ್ರಗಳು

ಮುಡಾದಲ್ಲಿ ಜನರ ಕಾಡುವವರು ಇದ್ದಾರೆ

ಮಾನ್ಯರೆ,

ನಾನು ಹಾಲಿ ಬೆಂಗಳೂರಿನಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಮೈಸೂರಿನ ಲಿಂಗಾಂಬುಧಿ ಕೆರೆಯ ಬಳಿ ನಿವೇಶನವೊಂದನ್ನು ಖರೀದಿಸಿದ್ದೇನೆ. ಈ ದೇಶದ ಜವಾಬ್ದಾರಿಯುತ ನಾಗರಿಕನಾಗಿ ಸರ್ಕಾರಕ್ಕೆ ಸಲ್ಲಬೇಕಾದ ಕಂದಾಯಗಳನ್ನು ಸಕಾಲಕ್ಕೆ ಸಲ್ಲಿಸುತ್ತಾ ದೇಶದ, ರಾಜ್ಯದ ಅಭಿವೃದ್ಧಿಗಾಗಿ ನಾವು ಯಾವುದೇ ಬಾಕಿಯನ್ನು ಇರಿಸಿಕೊಳ್ಳಬಾರದೆಂದು ಆಯಾಯ ಕಾಲಕ್ಕೆ ನನ್ನ ಕರ್ತವ್ಯವೆಂದು ಕಂದಾಯ ಸಲ್ಲಿಸುತ್ತಾ ಬಂದಿದ್ದೇನೆ. ಅದೇ ರೀತಿಯಲ್ಲಿ ಸದರಿ ನಿವೇಶನಕ್ಕೆ ಪ್ರಸ್ತುತ ವರ್ಷದ ಕಂದಾಯ ಸಲ್ಲಿಸಬೇಕಾದ್ದು ನನ್ನ ಹೊಣೆಯೂ ಹೌದು ಎಂದು ಭಾವಿಸಿ, ನಾನು ಬೆಂಗಳೂರಿನಲ್ಲಿದ್ದರೂ, ಮೈಸೂರಿನಲ್ಲಿ ವಾಸವಿರುವ ನನ್ನ ಹಿರಿಯ ಮಿತ್ರರೊಬ್ಬರಲ್ಲಿ ವಿನಂತಿಸಿಕೊಂಡು, ನನ್ನ ನಿವೇಶನದ ವಿವರಗಳನ್ನು ಅವರಿಗೆ ನೀಡಿ, 2019–2020 ರ ಕಂದಾಯ ರಸೀದಿ ಜೊತೆಯಲ್ಲಿಟ್ಟು (immediate reference ಗೆ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕಂದಾಯ ಪಾವತಿಸಿ (ಸದರಿ ನಿವೇಶನ ಮುಡಾದ ವ್ಯಾಪ್ತಿಯಲ್ಲಿರುತ್ತದೆ) ಎಂದು ವಿನಂತಿಸಿಕೊಳ್ಳಲು, ಸದರಿ ಮಿತ್ರರು ನನ್ನ ಸ್ನೇಹಕ್ಕೆ ಬೆಲೆಕೊಟ್ಟು ಈ ದಿನ ಅಂದರೆ ದಿನಾಂಕ 25–03–2022 ರಂದು ಬೆಳಗ್ಗೆ 10.30 ಗಂಟೆಗೆ, ತಮ್ಮದೇ ಖರ್ಚಿನಲ್ಲಿ ಆಟೋದಲ್ಲಿ ಹೋಗಿ ಸಂಬಂಧಪಟ್ಟವರಲ್ಲಿ ನಿವೇಶನದ ವಿವರ ನೀಡಿ ಕಂದಾಯ ತೆಗೆದುಕೊಳ್ಳಲು ಹೇಳಿದರೆ, ಸಂಬಂಧಪಟ್ಟ ನೌಕರ (ಖಾಯಂ ಅಥವಾ ಹೊರಗುತ್ತಿಗೆ outsourcing ಗೊತ್ತಿಲ್ಲ) ಪ್ರಸಕ್ತ ವರ್ಷದ ಕಂದಾಯ ಪಾವತಿಸಬೇಕಾದರೆ ಹಿಂದಿನ ವರ್ಷದ 2020–21ರ ಕಂದಾಯ ಪಾವತಿಸಿದ ರಶೀತಿಗಳನ್ನು ತೆಗೆದುಕೊಂಡು ಬರಬೇಕೆಂದು ತಿಳಿಸಿ, ಅದಿಲ್ಲದಿದ್ದಲ್ಲಿ ಕಂದಾಯ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂಬುದಾಗಿ ನನ್ನ ಹಿರಿಯ ಮಿತ್ರರನ್ನು ವಾಪಸ್ ಕಳುಹಿಸಿದ. ಪಾಪ ಸ್ನೇಹಕ್ಕಾಗಿ ತಕ್ಷಣ ಆಟೋದಲ್ಲಿ ನಮ್ಮ ಸಂಬಂಧಿಕರ ಮನೆಗೆ ಹೋಗಿ ವಿಚಾರಿಸಿ ರೂ.150 ಖರ್ಚು ಮಾಡಿ ಆಟೋದಲ್ಲಿ ಹೋಗಿ ಬಂದು ಬಸವಳಿದರು. ಅವರಿಗೆ ಆ ಹಣವನ್ನು ನಾನು ನೀಡಲು ಹೋದರೂ ತೆಗೆದುಕೊಳ್ಳಲಿಲ್ಲ. ಇಲ್ಲಿ ರೂ.150 ಸಹ ನಾವು ದುಡಿದ ಹಣವೇ, ಆ ನಿವೇಶನ ಕೂಡ ಪ್ರಾಮಾಣಿಕ ಹಣದ್ದೇ ಎಂದು ಹೆಮ್ಮೆಯಿಂದ ಹೇಳುತ್ತೇನೆ. ಅವರಿಗೆ ವೃಥಾ ಖರ್ಚು ಮಾಡಿಸಿದ ಪಾಪ ಪ್ರಜ್ಞೆ ನನ್ನನ್ನು ಕಾಡುತ್ತಿದೆ. ಪಾಪ ಅವರ ಸಮಯ ಮತ್ತು ಹಣ, ಆ ನೌಕರನ ಬೇಜವಾಬ್ದಾರಿಯುತ ನಡವಳಿಕೆಯಿಂದಾಗಿ ಹಾಳಾಯಿತು. ಆತನ ಈ ವರ್ತನೆಯಿಂದಾಗಿ ಸಂಬಂಧಪಟ್ಟವರನ್ನು ಶಪಿಸುತ್ತಾ ವಾಪಸ್ ಬಂದು ನನಗೆ ವಿಷಯ ತಿಳಿಸಿದರು. ನನಗಿನ್ನೂ ಅರ್ಥವಾಗದ ವಿಷಯವೆಂದರೆ ಪ್ರಸಕ್ತ ವರ್ಷದ ಕಂದಾಯ ತೆಗೆದುಕೊಳ್ಳಲು ಹಿಂದಿನ ವರ್ಷದ ರಶೀತಿಗಳನ್ನು ಯಾವ ಕಾರಣಕ್ಕೆ ಕೇಳಿದರು ಎಂಬುದು ಇನ್ನೂ ಅರ್ಥವಾಗಿಲ್ಲ. ವಿಧಾನಸಭೆಯಲ್ಲಿ ಬೆಂಗಳೂರಿನಲ್ಲಿ ಶೇಕಡಾ 90 ಹೊರಗುತ್ತಿಗೆ ನೌಕರರು, ಎಲ್ಲಾ ಸರ್ಕಾರಿ ಕಚೇರಿ ಆಡಳಿತ ನಡೆಸುತ್ತಿದ್ದಾರೆ ಎಂದು ಗದ್ದಲವಾಯಿತು. ಈ ಖಾಯಂ ನೌಕರರು ಅಲ್ಲಿ ಇಲ್ಲಿ ಸುತ್ತುತ್ತಾ ಮಾಡುತ್ತಿರುವುದು ಏನನ್ನು. ಹಿಂದಿನ ಸರ್ಕಾರದ ಕಾಲದಲ್ಲಿ ಸರ್ಕಾರದ ಕಚೇರಿಗಳು ಇದೇ ರೀತಿಯಲ್ಲಿ ವರ್ತಿಸುತ್ತಿದ್ದರಿಂದ ಆ ಸರ್ಕಾರವನ್ನು ಒಗೆದು ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತಂದರೆ, ಆ ಸರ್ಕಾರ ಕೂಡ ಯಾವುದೇ ಬದಲಾವಣೆ ಕಾಣದೆ ಹಿಂದಿನ ಸರ್ಕಾರದಂತೆಯೇ ವರ್ತಿಸುತ್ತಿರುವುದು ಆ ಸರ್ಕಾರಕ್ಕೆ ಶೋಭೆ ತರುವಂಥಹದ್ದಲ್ಲ. ಹಾಲಿ ಮುಡಾದ ಅಧ್ಯಕ್ಷರಾದ ರಾಜೀವ್ ಅವರು ಈ ಸಂಬಂಧ ಯಾವ ರೀತಿಯಲ್ಲಿ ತಮ್ಮ ಕಚೇರಿಯ ನೌಕರರ ಈ ವರ್ತನೆಯನ್ನು ಸಮರ್ಥಿಸಿಕೊಳ್ಳುತ್ತಾರೋ ಅಥವಾ ಆ ನೌಕರರನ ಮೇಲೆ ಯಾವ ರೀತಿಯಲ್ಲಿ ಕ್ರಮ ತೆಗೆದು ಕೊಳ್ಳುತ್ತಾರೋ ಎಂಬುದನ್ನು ಕಾದು ನೋಡಬೇಕು. ಲೆಡ್ಜರ್‌ಗಳು ಹೋಗಿ ಕಂಪ್ಯೂಟರ್‌ಗಳು ಬಂದರೂ ಸರ್ಕಾರದ ಕಚೇರಿಗಳು ಇನ್ನೂ ಅಪ್ಡೇಟ್ ಆಗಿಲ್ಲವೆಂದರೆ ಅದು ಸರ್ಕಾರದ ನಿಷ್ಕ್ರಿಯತೆಯನ್ನು ತೋರಿಸುತ್ತದೆ. ಈ ಸಂಬಂಧ ಮುಡಾದ ಕಮಿಷನರ್ ಏನು ಹೇಳುತ್ತಾರೆ. ಜವಾಬ್ದಾರಿಯುತ ಉತ್ತರ ನೀಡಿಯಾರೆ ಅಥವಾ ತಾತ್ಸಾರ ಮಾಡುವರೇ. ನಿರೀಕ್ಷೆಯಲ್ಲಿದ್ದೇನೆ.

–ಶಿವಮೊಗ್ಗ ನಾ.ದಿನೇಶ್ ಅಡಿಗ, ಬೆಂಗಳೂರು.

ಈ ಸಾವು ನ್ಯಾಯವೇ!!?

ಮಾನ್ಯರೆ,

ಭವಿಷ್ಯದಲ್ಲಿ ನೂರಾರು ಕನಸು ಚಿಗುರೊಡೆಯುವ ಈ ಪ್ರೌಢ ವ್ಯವಸ್ಥೆ ವಯಸ್ಸು ಮತ್ತು ಮುಂದಿನ ವಿದ್ಯಾಭ್ಯಾಸದ ಭವಿಷ್ಯಕ್ಕೆ ಮೊದಲನೇ ಮೆಟ್ಟಿಲು ಈ ಎಸ್ಸೆಸ್ಸೆಲ್ಸಿ ಪರೀಕ್ಷೆ!

ಪರೀಕ್ಷಾ ಕೇಂದ್ರದ ಗೊಂದಲ ಕಾರಣ ಮಾದಾಪುರದ ಸರ್ಕಾರಿ ಶಾಲೆಯ ವಿದ್ಯಾರ್ಥಿನಿ ನರಸೀಪುರ ಪಟ್ಟಣದ ವಿದ್ಯೋದಯ ಕಾಲೇಜಿಗೆ ಪರೀಕ್ಷೆ ಬರೆಯಲು ಬಂದ ವೇಳೆಯಲ್ಲಿ ಆಘಾತಕ್ಕೊಳಗಾಗಿ ಕುಸಿದು ಬಿದ್ದು ಸಾವನ್ನಪ್ಪಿದ್ದು ಅತ್ಯಂತ ದುಃಖಕರವಾದ ವಿಷಯ.

ಗ್ರಾಮೀಣ ಪ್ರದೇಶದ ಮತ್ತು ನಗರ ಪ್ರದೇಶದ ಸರ್ಕಾರಿ ಪ್ರೌಢಶಾಲೆಯ ಮಕ್ಕಳಿಗೆ ಪರೀಕ್ಷೆಯ ಬಗ್ಗೆ ಇರುವ ಆತಂಕ, ಒತ್ತಡವನ್ನು ಯಾವ ರೀತಿ ಎದುರಿಸಬೇಕು ಹಾಗೂ ಪರೀಕ್ಷಾ ಕೇಂದ್ರಗಳಿಗೆ ಹೋಗುವಾಗ ಯಾವ ರೀತಿ ತಯಾರಿ ಮಾಡಿಕೊಳ್ಳಬೇಕು ಮತ್ತು ಪರೀಕ್ಷಾ ಕೇಂದ್ರಗಳಿರಬಹುದು ಅಥವಾ ಪರೀಕ್ಷೆಯ ಕೊಠಡಿಗಳಿರಬಹುದು, ಆ ವೇಳೆಯಲ್ಲಿ ಅದಲು ಬದಲುಗೊಂಡರೆ ಆ ಪರೀಕ್ಷಾ ಕೇಂದ್ರದ ಮುಖ್ಯ ಸಚೇತಕರನ್ನು ಯಾವ ರೀತಿ ಸಂಪರ್ಕಿಸಬೇಕು ಎನ್ನುವ ಮಾರ್ಗದರ್ಶನದ ಬಗ್ಗೆ ಸೂಪ್ತ ಸಂವೇದದ ಸಮಾಲೋಚನೆಗಳನ್ನು ವಾರ್ಷಿಕ ಪರೀಕ್ಷೆಯ ಮುಂಚಿತವಾಗಿ ಗ್ರಾಮೀಣ ಮತ್ತು ನಗರ ಪ್ರದೇಶದ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಬೇಕು.

ಇಂತಹ ತರಗತಿಗಳಿಂದ ವಿದ್ಯಾರ್ಥಿಗಳ ಆತ್ಮಸ್ಥೈರ್ಯವು ಹೆಚ್ಚುತ್ತದೆ. ಇದರಿಂದ ಪೋಷಕರು ಆತಂಕಪಡುವುದು ಕಡಿಮೆಯಾಗುತ್ತದೆ. ಇದರ ಬಗ್ಗೆ ಸಂಬಂಧಪಟ್ಟವರು ಕೂಡ ಗಮನಹರಿಸಲಿ. ಮುಂದಿನ ದಿನಗಳಲ್ಲಿ ಇಂತಹ ಅನಾಹುತಗಳು ಸಂಭವಿಸದಿರಲಿ ಎಂದು ಆಶಿಸೋಣ.

–ಕಂಗಾಣಿಸೋಮು ಪಿ.ಸಿ.,ಕ್ಯಾತಮಾರನಹಳ್ಳಿ, ಮೈಸೂರು

ಚತುರ್‌ಹನಿ

ಬಿಳಿ

ಕೆಂಪು ಆಕರ್ಷಕ;
ಬಿಳಿ ಅಂತಲ್ಲದಿರಬಹುದು!
ಆದರೆ ಮುಖ್ಯವಾದವು
ಬಿಳಿ ರಕ್ತ ಕಣಗಳಲ್ಲವೆ?

ಬಿನ್ನಾಣ

ಚೆಲುವಿರುವುದು ಎದೆಯಲ್ಲಿ;
ಬೆನ್ನಿನಲ್ಲಲ್ಲ!
ಆದರೂ ಬೆನ್ನ ಬಿನ್ನಾಣ
ಅಲಕ್ಷಿಸುವಂಥದೆ?

ತ್ಯಾಗ

ಯುಗ ಯುಗಗಳಿಂದ
ಹಿಂಬಾಲಿಸಿ ಬಂದ
ಅರಿಷಡ್ವರ್ಗವನ್ನು,
ಬಿಡಬಹುದೆ? ಬಿಟ್ಟೆವೆನ್ನಿ,
ಕಡಿದು ಕಟ್ಟೆ ಹಾಕುವುದೇನು?

ಹತ್ತಿರ–ದೂರ

ಪರಸ್ಪರ ಎಷ್ಟೇ ಹತ್ತಿರಕ್ಕೆ
ಬಂದರೂ ಗ್ರಹ, ನಕ್ಷತ್ರಗಳು
ತಾಗದೆ, ಮತ್ತೆ ದೂರವಾಗುವುದು
ಎಂಥ ವಿಶ್ವ ವಿಸ್ಮಯ!


– ಸಿಪಿಕೆ

ಬಹುಮುಖಿ



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ನಿಸರ್ಗ ಸಂಭ್ರಮ ಯುಗಾದಿ



ಹಣ್ಣೆಲೆ ಉದುರಿ ಚಿಗುರೆಲೆ ನಳನಳಿಸುವ ಸಂಭ್ರಮ. ಭೂ ಮಾತೆ ಹಸಿರು ಮುಕ್ಕಳಿಸುವ ಮಧುರ ಕ್ಷಣ. ಮಧು ಚೆಲ್ಲುವ ಹೂಗಳ ಮೇಲೆ ಝೇಂಕರಿಸುವ ಜೇನ್ದುಂಬಿಗಳ ಸಡಗರ. ನೆತ್ತಿಯ ಮೇಲೆ ಸುಡುವ ಸೂರ್ಯನಿದ್ದರೂ ತಂಪೆರೆವ ತಂಗಾಳಿಯ ನವೋಲ್ಲಾಸ. ಮುಂಬರುವ ಎಲ್ಲ ಹಬ್ಬಗಳಿಗೂ ಮುನ್ನುಡಿ ಬರೆವ ಕಾಲ. ಕಷ್ಟ–ಸುಖಗಳೆರಡನ್ನೂ ಸಮನಾಗಿ ಸ್ವೀಕರಿಸುವುದರ ಸಂಕೇತವಾಗಿ ಬೇವು–ಬೆಲ್ಲವನ್ನು ಮೆಲ್ಲುವ ದಿನ. ವರುಷಕ್ಕೊಂದು ಹೊಸ ಜನ್ಮ ಪಡೆವ ಪ್ರಕೃತಿ ದೇವಿಗೆ ನಮಿಸುವ ದಿನ. ಇದೆಲ್ಲಕ್ಕೂ ಒಂದೇ ಹೆಸರು ಅದೇ ಯುಗಾದಿ ಅರ್ಥಾತ್ ಉಗಾದಿ. ನಮ್ಮ ಎಲ್ಲ ಧಾರ್ಮಿಕ ಆಚರಣೆ ಹಬ್ಬ–ಹರಿದಿನಗಳಿಗೆ ಪ್ರೇರಣೆಯನ್ನು ನಿಸರ್ಗದಲ್ಲಿ ಕಾಣಬಹುದು. ಹಾಗೆಯೇ ಯುಗಾದಿ ಹಬ್ಬದ ಪ್ರೇರಣೆಗೆ ಮೂಲ ನಿಸರ್ಗವೇ ಆಗಿದೆ.

ವರ್ಷದ ಮೊದಲ ದಿನವನ್ನು ಹೊಸ ವರ್ಷದ ಹಬ್ಬವಾಗಿ ಆಚರಿಸಿ ಸಂಭ್ರಮಪಡುವ ಸಂಪ್ರದಾಯ ಜಗತ್ತಿನೆಲ್ಲೆಡೆ ಬಹು ಹಿಂದಿನಿಂದಲೂ ಉಂಟು. ಜನವರಿ ತಿಂಗಳ ಮೊದಲ ದಿನವನ್ನು ವರ್ಷಾರಂಭವೆಂದು ರೋಮನ್ನರು, ಆಂಗ್ಲರು ಸೇರಿದಂತೆ ಪಾಶ್ಚಿಮಾತ್ಯರೆಲ್ಲರೂ ಆಚರಿಸುತ್ತಾರೆ. ಯುಗಾದಿ ಎನ್ನುವುದು ಯುಗದ ಆದಿ. ಯುಗವೆಂದರೆ ಸೃಷ್ಟಿಯ ಕಾಲಮಾನ ಅರ್ಥಾತ್ ಹೊಸ ವರ್ಷ. ಆದಿ ಎಂದರೆ ಆರಂಭ ಅಥವಾ ವರ್ಷದ ಪ್ರಾರಂಭದ ದಿನ. ಅಂದರೆ ಹೊಸ ವರ್ಷದ ಪ್ರಾರಂಭದ ದಿನವೇ ಯುಗಾದಿ. ಹಲವು ಪರಂಪರೆಗಳ ಆಗಮದ ಕಾಲವಾಗಿ ಯುಗಾದಿ ಭಾರತೀಯರಲ್ಲಿ ರೂಢಿಗೆ ಬಂದಿದೆ. ಉತ್ತರ ಭಾರತದಲ್ಲಿ ವಿಕ್ರಮ ಶಕೆಯ ಆರಂಭದ ದಿನ ಕಾರ್ತಿಕ ಶುದ್ಧ ಪಾಡ್ಯವನ್ನು ಯುಗಾದಿ ಹಬ್ಬವಾಗಿ ಆಚರಿಸುತ್ತಾರೆ. ಜ್ಯೋತಿಷ್ಯ ಶಾಸ್ತ್ರದಲ್ಲಿ ಮೂರು ರೀತಿಯ ಲೆಕ್ಕಾಚಾರಗಳುಂಟು. ಅವುಗಳೆಂದರೆ 1. ಬಾರ್ಹಸ್ಪತ್ಯಮಾನ, 2.ಚಾಂದ್ರಮಾನ, 3.ಸೌರಮಾನ. ಉತ್ತರ ಭಾರತದವರು ಬಾರ್ಹಸ್ಪತ್ಯಮಾನದಲ್ಲಿ ಯುಗಾದಿಯನ್ನು ಆಚರಿಸುತ್ತಾರೆ. ವಿಶೇಷವಾಗಿ ದಕ್ಷಿಣ ಭಾರತದ ರಾಜ್ಯಗಳಿಗೆ ಯುಗಾದಿ ಅತ್ಯಂತ ವಿಜೃಂಭಣೆ ಹಬ್ಬವಾಗಿದೆ. ನಮ್ಮಲ್ಲಿ ಯುಗಾದಿ ಹಬ್ಬವನ್ನು ಎರಡೂ ರೀತಿಯಲ್ಲಿ ಆಚರಿಸುವ ಪದ್ಧತಿಯಿದೆ. ಒಂದು ಚಾಂದ್ರಮಾನ ಯುಗಾದಿ ಮತ್ತೊಂದು ಸೌರಮಾನ ಯುಗಾದಿ. ಹೆಸರುಗಳೇ ಹೇಳುವಂತೆ ಮೊದಲನೆಯದು ಚಂದ್ರನನ್ನೂ ಎರಡನೆಯದು ಸೂರ್ಯನನ್ನೂ ಅವಲಂಬಿಸಿವೆ. ಚಂದ್ರನ ಚಲನೆಯನ್ನು ಅನುಸರಿಸಿ ಅಮಾವಾಸ್ಯೆ–ಹುಣ್ಣಿಮೆಗಳ ಆಧಾರದ ಮೇಲೆ ಮಾಸ ಗಣನೆ ಮಾಡುವ ಪದ್ಧತಿಗೆ ಚಾಂದ್ರಮಾನ ಎಂದು ಹೆಸರು. ತಿಂಗಳು ಹೆಸರು ಬಂದಿರುವುದೂ ಚಂದ್ರನಿಂದಲೇ. ಚಂದ್ರನ ಚಲನೆಯಲ್ಲಿ ವ್ಯತ್ಯಾಸವಾಗುವುದರಿಂದ ಚಾಂದ್ರಮಾನ ಯುಗಾದಿ ನಿರ್ದಿಷ್ಟ ಸಮಯದಲ್ಲಿ ಬರುವುದಿಲ್ಲ. ಮೇಷ ರಾಶಿಗೆ ಸೂರ್ಯ ಪ್ರವೇಶಿಸುವ ದಿನ ಸೌರಮಾನ ಯುಗಾದಿಯನ್ನು ಆಚರಿಸಲಾಗುತ್ತದೆ. ಭೂಮಿಯ ಚಲನೆಯಲ್ಲಿ ಹೆಚ್ಚಿನ ವ್ಯತ್ಯಾಸವಿಲ್ಲದಿರುವುದರಿಂದ ಸಾಮಾನ್ಯವಾಗಿ ನಿಗದಿತ ಸಮಯದಲ್ಲಿ ಅಂದರೆ ಪ್ರತಿ ವರ್ಷ ಏಪ್ರಿಲ್ 14 ರಂದು ಸೌರಮಾನ ಯುಗಾದಿ ಬರುತ್ತದೆ.

ಕರ್ನಾಟಕ, ಆಂಧ್ರ ಪ್ರದೇಶ, ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಲ್ಲಿ ಚಾಂದ್ರಮಾನ ಯುಗಾದಿ ಆಚರಿಸುವ ಪದ್ಧತಿ ಇದೆ. ತಮಿಳುನಾಡು, ಕೇರಳ ಮತ್ತು ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ಸೌರಮಾನ ಯುಗಾದಿ ರೂಢಿಯಲ್ಲಿದೆ. ಸಾಮಾನ್ಯವಾಗಿ ಕರ್ನಾಟಕದಲ್ಲಿ ಪ್ರತಿವರ್ಷದ ಚೈತ್ರಮಾಸದಲ್ಲಿ ಬರುವ ಮೊದಲ ದಿನವನ್ನು ಸಂವತ್ಸರಾದಿ ಪಾಡ್ಯಮಿ ಎಂದು ಪರಿಗಣಿಸಿ ಯುಗಾದಿಯನ್ನು ವರ್ಷದ ಮೊದಲ ಹಬ್ಬವಾಗಿ ಚೈತ್ರಮಾಸ ಶುದ್ಧಪಾಡ್ಯಮಿಯಂದು ಆಚರಿಸಲಾಗುತ್ತದೆ. ಈ ಹಬ್ಬವನ್ನು ಆಂಧ್ರದವರು ಉಗಾದಿ ಎನ್ನುತ್ತಾರೆ. ಮಹಾರಾಷ್ಟ್ರೀಯರು ಕೂಡ ಯುಗಾದಿ ಎಂದೇ ಹೇಳುತ್ತಾರೆ.

ಸೌರಮಾನ ಯುಗಾದಿ ಆಚರಿಸುವ ಕೇರಳದವರು ಯುಗಾದಿಯನ್ನು 'ವರ್ಷ ಪುರಪ್ಪು' ಎಂದು ಆಚರಿಸಿದರೆ, ಕೆಲವರು ಶ್ರೀ ಕೃಷ್ಣನ ಪೂಜೆ ಮಾಡುತ್ತಾ 'ವೊಲ್ಲವರ್ಷ' ಎಂದೂ ಆಚರಿಸುತ್ತಾರೆ.

ಯುಗಾದಿಗೆ ಗುಡಿಪಾಡ್ಯ, ಪಾಡ್ಯದ ಗುಡಿ ಎಂಬ ಹೆಸರುಗಳೂ ಉಂಟು. ಗುಡಿ ಎಂದರೆ ಬಾವುಟ ಎಂದರ್ಥ. ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ಹಾಗೂ ನಮ್ಮಲ್ಲೂ ಹಲವು ಕಡೆ ಮನೆ ಮನೆಯ ಮುಂದೆ 'ಪಾಡ್ಯದ ಗುಡಿ' ಕಟ್ಟುತ್ತಾರೆ. ಪಾಡ್ಯದ ಗುಡಿ ಎಂದರೆ ಉದ್ದವಾದ ಕೋಲೊಂದರ ತುದಿಗೆ ಹೊಸಬಟ್ಟೆಯನ್ನು ಕಟ್ಟಿ ಅದರ ಮೇಲೆ ಹಿತ್ತಾಳೆ ಪಾತ್ರೆಯೊಂದನ್ನು ಬೋರಲು ಹಾಕಿರುತ್ತಾರೆ. ಯುಗಾದಿ ದಿನ ಅದಕ್ಕೆ ಪೂಜೆ ಮಾಡಿ ಪ್ರತಿಯೊಂದು ಮನೆ ಮುಂದೆ ಅದನ್ನು ಮೇಲಕ್ಕೆ ಏರಿಸುತ್ತಾರೆ. ಇದನ್ನು 'ಧ್ವಜ' ಎಂದೂ ಕರೆಯುತ್ತಾರೆ. ಇದೇ ಯುಗಾದಿಯ ಧ್ವಜಾರೋಹಣ. ಮಹಾಭಾರತದಲ್ಲೂ ಇದರ ಬಗ್ಗೆ ಉಲ್ಲೇಖವಿದೆ.

ವರ್ಷದಲ್ಲಿ ಬರುವ ಮೂರೂವರೆ ದಿನಗಳ ಶುಭ ಮುಹೂರ್ತ ಜ್ಯೋತಿಷ್ಯ ಶಾಸ್ತ್ರದಲ್ಲಿ ಅತ್ಯಂತ ಶ್ರೇಷ್ಠವಾದುದು. ಅವುಗಳೆಂದರೆ ಯುಗಾದಿ, ಅಕ್ಷಯ ತದಿಗೆ, ವಿಜಯ ದಶಮಿ ಮತ್ತು ಬಲಿಪಾಡ್ಯಮಿಯ ಅರ್ಧ ದಿವಸ. ಈ ಮೂರೂವರೆ ಶುಭಘಳಿಗೆಯಲ್ಲಿ ನಮಗೆ ಯುಗಾದಿಯೇ

> ಯುಗಾದಿಗೆ ಗುಡಿಪಾಡ್ಯ, ಪಾಡ್ಯದ ಗುಡಿ ಎಂಬ ಹೆಸರುಗಳೂ ಉಂಟು. ಗುಡಿ ಎಂದರೆ ಬಾವುಟ ಎಂದರ್ಥ. ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ಹಾಗೂ ನಮ್ಮಲ್ಲೂ ಹಲವು ಕಡೆ ಮನೆ ಮನೆಯ ಮುಂದೆ 'ಪಾಡ್ಯದ ಗುಡಿ' ಕಟ್ಟುತ್ತಾರೆ. ಪಾಡ್ಯದ ಗುಡಿ ಎಂದರೆ ಉದ್ದವಾದ ಕೋಲೊಂದರ ತುದಿಗೆ ಹೊಸಬಟ್ಟೆಯನ್ನು ಕಟ್ಟಿ ಅದರ ಮೇಲೆ ಹಿತ್ತಾಳೆ ಪಾತ್ರೆಯೊಂದನ್ನು ಬೋರಲು ಹಾಕಿರುತ್ತಾರೆ. ಯುಗಾದಿ ದಿನ ಅದಕ್ಕೆ ಪೂಜೆ ಮಾಡಿ ಪ್ರತಿಯೊಂದು ಮನೆ ಮುಂದೆ ಅದನ್ನು ಮೇಲಕ್ಕೆ ಏರಿಸುತ್ತಾರೆ. ಇದನ್ನು 'ಧ್ವಜ' ಎಂದೂ ಕರೆಯುತ್ತಾರೆ. ಇದೇ ಯುಗಾದಿಯ ಧ್ವಜಾರೋಹಣ. ಮಹಾಭಾರತದಲ್ಲೂ ಇದರ ಬಗ್ಗೆ ಉಲ್ಲೇಖವಿದೆ.



ವರ್ಷದ ಪ್ರಾರಂಭದ ಶುಭ ದಿನವಾಗಿದೆ. ಈ ದಿವಸ ಏನೇ ಕೆಲಸ ಕಾರ್ಯಗಳನ್ನು ಕೈಗೊಂಡರೂ, ಯಾವುದೇ ಉದ್ದಿಮೆಗಳಲ್ಲಿ ಯೋಜನೆಗಳನ್ನು ಆರಂಭಿಸಿದರೂ ಯಶಸ್ಸು ಕಟ್ಟಿಟ್ಟಬುತ್ತಿ ಎಂಬ ನಂಬಿಕೆ ಇದೆ. ಯುಗ ಯುಗಗಳಿಂದಲೂ ಅತ್ಯಂತ ಮಹತ್ವದ ಕಾರ್ಯಗಳು ಈ ಶುಭ ದಿವಸವೇ ನಡೆದಿವೆ ಎಂದು ಶಾಸ್ತ್ರ ಪುರಾಣಗಳೂ ಹೇಳುತ್ತವೆ. ಹಾಗಾಗಿ ಈಗಲೂ ಸಹ ಯುಗಾದಿಯಂದು ಹೊಸ ಕಾರ್ಯ ಚಟುವಟಿಕೆಗಳಿಗೆ, ಹೊಸ ಪದಾರ್ಥಗಳ ಖರೀದಿಗೆ, ಅವರವರ ಶಕ್ತ್ಯಾನುಸಾರ ಸಣ್ಣ ವ್ಯವಹಾರದಿಂದ ಹಿಡಿದು ದೊಡ್ಡ ದೊಡ್ಡ ವ್ಯವಹಾರಗಳಿಗೆ ನಮ್ಮಲ್ಲಿ ನಾಂದಿ ಹಾಕಲಾಗುತ್ತದೆ. ಅಷ್ಟರಮಟ್ಟಿಗೆ ಯುಗಾದಿ ಜನರಲ್ಲಿ ನವ ಚೈತನ್ಯವನ್ನು ತುಂಬುತ್ತದೆ.

ಯುಗಾದಿ ಹಲವು ಪರಂಪರೆಗಳ ಹಬ್ಬಗಳ ಪ್ರಾರಂಭಕ್ಕೆ ಮುನ್ನುಡಿ ಬರೆವ ದಿನವೂ ಹೌದು. ಬ್ರಹ್ಮ ದೇವನು ಈ ಜಗತ್ತನ್ನು ಚೈತ್ರಮಾಸದ ಶುಕ್ಲಪಕ್ಷದ ಮೊದಲನೆಯ ದಿನದ ಸೂರ್ಯೋದಯ ಕಾಲಕ್ಕೆ ಸೃಷ್ಟಿಸಿದ. ಬ್ರಹ್ಮದೇವ ಸೃಷ್ಟಿಯನ್ನು ಆರಂಭಿಸಿದ ದಿನವೇ ಯುಗಾದಿಯಾಗಿದೆ. ಅಂದೇ ಅವನು ಗ್ರಹ, ನಕ್ಷತ್ರ, ಮಾಸ, ಋತು, ವರ್ಷಾಧಿಪತಿಯನ್ನು ಸೃಷ್ಟಿಸಿ ಕಾಲಗಣನೆ ಆರಂಭಿಸಿದನೆಂದು ಹೇಮಾದ್ರಿ ಪಂಡಿತನ 'ಚತುರ್ವರ್ಗ ಚಿಂತಾಮಣಿ' ಎಂಬ ಪುರಾಣ ಗ್ರಂಥದಲ್ಲಿ ಹೇಳಲಾಗಿದೆ. ಶ್ರೀರಾಮನು ರಾವಣನನ್ನು ಸಂಹರಿಸಿ ಅಯೋಧ್ಯೆಗೆ ಬಂದು ರಾಮರಾಜ್ಯವಾಳಲು ಪ್ರಾರಂಭಿಸಿದ್ದು ಈ ಯುಗಾದಿಯಂದೇ. ಶಾಲಿವಾಹನ ಶಕೆ ಆರಂಭವಾದದ್ದು ಸಹ ಈ ಯುಗಾದಿ ದಿವಸವೇ. ಶಾಲಿವಾಹನ ಆ ದಿನ ಪಟ್ಟಾಭಿಶಕ್ತನಾದನೆಂದೂ, ಆದ್ದರಿಂದಾಗಿ ಈ ಚರಿತ್ರೆ ಕಾಲ 'ಶಾಲಿವಾಹನ' ಶಕ ಆಯಿತೆಂದೂ ಹೇಳಲಾಗುತ್ತದೆ. ಕ್ರಿಸ್ತ ವರ್ಷ ಆರಂಭವಾದ ಎಪ್ಪತ್ತೆಂಟು ವರ್ಷಗಳ ನಂತರ ಶಾಲಿವಾಹನ ಶಕೆ ಆರಂಭವಾಗುತ್ತದೆ. ದಕ್ಷಿಣ ಭಾರತದಲ್ಲಿ ಈ ಶಕೆ ಬಳಕೆಯಲ್ಲಿದೆ. ಭಾರತೀಯ ಪಂಚಾಂಗಗಳು ಈ ಶಕೆಯನ್ನು ಪ್ರತ್ಯಾಪಿಸುತ್ತವೆ. ಯುಗಾದಿ ಹಬ್ಬವು ಜೈನರಿಗೂ ಮಹತ್ವದ ಪವಿತ್ರದಿನವಾಗಿದೆ. ಏಕೆಂದರೆ ಮಲ್ಲಿನಾಥನೆಂಬ 14ನೇ ತೀರ್ಥಂಕರ ಹುಟ್ಟಿದ್ದು ಯುಗಾದಿಯಂದೇ. ಹಾಗೆಯೇ ಆದಿ ತೀರ್ಥಂಕರನ ಮಗ ಭರತ ಚಕ್ರವರ್ತಿಯೂ ದಿಗ್ವಿಜಯ ಸಾಧಿಸಿದ ದಿನವಿದು.

ವೇದಗಳ ಕಾಲದಿಂದಲೂ ಯುಗಾದಿಯ ಹಿರಿಮೆ–ಗರಿಮೆಗಳು ಅನುರಣಿಸಿಕೊಂಡು ಬಂದಿವೆ. ಅಥರ್ವಣ ವೇದ, ಶತಪಥ ಬ್ರಾಹ್ಮಣ, ಧರ್ಮಸಿಂಧು, ನಿರ್ಣಯ ಸಿಂಧು ಮುಂತಾದ ಧರ್ಮಶಾಸ್ತ್ರ ಗ್ರಂಥಗಳಲ್ಲೂ ಯುಗಾದಿಯನ್ನು ಅಭೂತಪೂರ್ವವಾಗಿ ವರ್ಣಿಸಲಾಗಿದೆ ಬ್ರಹ್ಮಾಂಡ ಮತ್ತು ಮಹಾಭಾರತಗಳಲ್ಲೂ ಯುಗಾದಿ ಪ್ರಸ್ತಾಪಗೊಂಡಿದೆ.

ಯುಗಾದಿಯಂದು ಸೂರ್ಯೋದಯಕ್ಕೂ ಮುನ್ನ ಎದ್ದು ಮಂಗಳ ಸ್ನಾನ ಮಾಡಿ ಶ್ರೀರಾಮನನ್ನು ಸ್ಮರಣೆ ಮಾಡಿ ಹೊಸಬಟ್ಟೆ ತೊಟ್ಟು ಮನೆಯನ್ನೆಲ್ಲ ಮಾವು–ಬೇವು ಎಲೆಗಳ ತೋರಣದಿಂದ ಸಿಂಗರಿಸಿ ಹೊಸವರ್ಷವನ್ನು ಬರಮಾಡಿಕೊಳ್ಳಲಾಗುತ್ತದೆ. ಬಾವುಟ ಹಾರಿಸುವುದು, ಬೇವು–ಬೆಲ್ಲ ತಿನ್ನುವುದು, ಪಂಚಾಂಗ ಶ್ರವಣ, ವಸಂತ ನವರಾತ್ರಿ ಆರಂಭ ಇಷ್ಟದೇವತಾ ಪೂಜೆಯ ಜೊತೆಗೆ ಸೃಷ್ಟಿಕರ್ತನಾದ ಬ್ರಹ್ಮದೇವನ, ಕಾಲಪುರುಷನ ಮತ್ತು ವರ್ಷಾಧಿಪತಿಯ ಆರಾಧನೆ, ಚಂದ್ರದರ್ಶನ ಇವು ಯುಗಾದಿಯ ವೈಶಿಷ್ಟ್ಯ. ಯುಗಾದಿಯಲ್ಲಿ ಬೇವು–ಬೆಲ್ಲಕ್ಕೆ ತುಸು ಹೆಚ್ಚಿನ ಮಹತ್ವ ಉಂಟು. ಹೋಳಿಗೆ ಸೇರಿದಂತೆ ಹಬ್ಬದ ಸಿಹಿ ಅಡುಗೆ ಎಷ್ಟೇ ಇದ್ದರೂ ಸಹ ಬೇವು–ಬೆಲ್ಲ ಸೇವಿಸಿದಾಗಲೇ ಯುಗಾದಿ ಸಾರ್ಥಕವಾಗುವುದೆಂಬ ಭಾವ ಎಲ್ಲರದು. ಕಷ್ಟ–ಸುಖಗಳೆರಡರ ಸಂಕೇತವೇ ಬೇವು–ಬೆಲ್ಲ. ಜೀವನದಲ್ಲಿ ಎರಡನ್ನೂ ಸಮನಾಗಿ ಸ್ವೀಕರಿಸಿ ಬದುಕಿನ ಬಂಡಿ ನೂಕಬೇಕೆಂಬುದು ಯುಗಾದಿಯ ಆಶಯವಾಗಿದೆ. "ಜೀವನವೆಲ್ಲಾ ಬೇವು–ಬೆಲ್ಲ. ಎರಡೂ ಸವಿದವನೇ ಕವಿಮಲ್ಲ" ಎಂದು ಯುಗದ ಕವಿ ಕುವೆಂಪು ಅವರು ಯುಗಾದಿ ಮತ್ತು ಬೇವು–ಬೆಲ್ಲದ ಮಹತ್ವವನ್ನು ಸಾರಿದ್ದಾರೆ.

ಸಾಮಾನ್ಯವಾಗಿ ಯುಗಾದಿಯಂದು ಜ್ಯೋತಿಷಿಗಳಿಂದ ಹೊಸ ವರ್ಷದ ಫಲಗಳನ್ನು ಕೇಳುವುದು ರೂಢಿಯಲ್ಲಿದೆ. ವರ್ಷದ ಫಲಾಫಲಗಳನ್ನು ತಿಳಿದುಕೊಳ್ಳುವ ಕುತೂಹಲ ಎಲ್ಲರಿಗೂ ಇರುತ್ತದೆ. ಹಾಗಾಗಿ ಯುಗಾದಿ ಸಂದರ್ಭದಲ್ಲಿ ಜ್ಯೋತಿಷಿಗಳಿಗೆ ಬಹಳ ಬೇಡಿಕೆಗಳಿರುತ್ತವೆ. ಅಷ್ಟೇ ಅಲ್ಲ ಜ್ಯೋತಿಷ್ಯಕ್ಕೆ ಸಂಬಂಧಿಸಿದಂತೆ ಪ್ರತಿಯೊಂದಕ್ಕೂ ಅಂದು ಡಿಮ್ಯಾಂಡ್ ಇದ್ದೇ ಇರುತ್ತದೆ. ಅಂತೆಯೇ ಯುಗಾದಿಯಂದು ಜೂಜು ಆಡುವುದು ಬಹಳಷ್ಟು ಕಡೆ ರೂಢಿಯಲ್ಲಿದೆ. ಎಂದೂ ಜೂಜನ್ನೇ ಆಡದವರು ಕೂಡ ಅಂದು ಜೂಜಾಡಿ ತಮ್ಮ ಅದೃಷ್ಟವನ್ನು ಪರೀಕ್ಷಿಸಿಕೊಳ್ಳುತ್ತಾರೆ. ಕೆಲವು ಕಡೆಯಂತೂ ಮನೆಯವರೆಲ್ಲ, ಊರಿನವರೆಲ್ಲ ಒಂದು ಕಡೆ ಸೇರಿ ಜ್ಯೋತಿಷ್ಯ ಶಾಸ್ತ್ರದಲ್ಲಿ ಪಾರಂಗತರಾದ ಪಂಡಿತರನ್ನು ಆಹ್ವಾನಿಸಿ ಅವರಿಗೆ ಪಾದಪೂಜೆ ಮಾಡಿ ಸನ್ಮಾನಿಸಿ ಪವಿತ್ರ ಸ್ಥಳಗಳಲ್ಲಿ, ಭಕ್ತಿಯ ತಾಣಗಳಲ್ಲಿ, ದೇವಾಲಯಗಳಲ್ಲಿ ಸಂವತ್ಸರ ಕಾಲದಲ್ಲಿ ನಡೆಯುವ ಫಲಿತಾಂಶಗಳನ್ನು ಮೊದಲೇ ತಿಳಿದುಕೊಳ್ಳುತ್ತಾರೆ. ಇದನ್ನು 'ಪಂಚಾಂಗ ಶ್ರವಣ' ಎನ್ನಲಾಗುತ್ತದೆ. ಈ ಪಂಚಾಂಗ ಶ್ರವಣದಲ್ಲಿನ ಅಂಗಗಳಿಂದ ಅಂದರೆ ತಿಥಿಯಿಂದ ಸಂಪತ್ತು, ವಾರದಿಂದ ಆಯಸ್ಸು, ನಕ್ಷತ್ರದಿಂದ ಪಾಪನಾಶ, ಯೋಗದಿಂದ ರೋಗ ದೂರ, ಕರಣದಿಂದ ಗಂಗಾಸ್ನಾನ ಮಾಡಿದಷ್ಟು ಪುಣ್ಯ ಲಭಿಸುತ್ತದೆಂದು ಹೇಳುತ್ತಾರೆ.

ಯುಗಾದಿಯ ಮಾರನೆ ದಿನ 'ವರ್ಷ ತೊಡಕು' ಆಚರಿಸಲಾಗುತ್ತದೆ. ಇದರ ವಿಶೇಷವೆಂದರೆ ತಮ್ಮನ್ನು ತಾವು ಸತ್ಕಾರ್ಯಗಳಿಗೆ ಅರ್ಪಿಸಿಕೊಳ್ಳುವ ದಿನವಿದು. ಅಷ್ಟೇ ಅಲ್ಲ ಇಡೀ ವರ್ಷದ ತೊಡಕುಗಳನ್ನೆಲ್ಲಾ ನಿವಾರಿಸಿಕೊಳ್ಳಲು ದೇವರಲ್ಲಿ ಮೊರೆಯಿಡುವ ದಿನವಿದು. ಹಾಗಾಗಿ ಯುಗಾದಿ ದಿನದಷ್ಟೇ ಈ ದಿನಕ್ಕೂ ಬಹಳ ಮಹತ್ವವಿದೆ. ಅಂದು ವಿವಿಧ ಬಗೆಯ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ವಿವಿಧ ರೀತಿಯ ಸ್ಪರ್ಧೆಗಳು ಜರುಗುತ್ತವೆ. ಅಂದು ಯಾರೇ ಆಗಲಿ ಏನೇನು ಒಳ್ಳೆಯ ಕೆಲಸಗಳನ್ನು ಮಾಡುತ್ತಾರೋ ಅದನ್ನು ವರ್ಷಾಂತ್ಯದವರೆಗೂ ಮಾಡುತ್ತಾರೆಂಬ ನಂಬಿಕೆ ಬಹಳ ಜನರಲ್ಲಿದೆ. ಹಾಗೆಯೇ ಅಂದು ಯಾರಿಗೆ ಏನೇನು ಲಭಿಸುತ್ತದೋ ಅದು ವರ್ಷಪೂರ್ತಿ ಲಭಿಸುತ್ತದೆಂಬ ನಂಬಿಕೆ ಪ್ರಚಲಿತದಲ್ಲಿದೆ. ಹೊಸ ಅಳಿಯನನ್ನು ಹಬ್ಬಕ್ಕೆ ಆಹ್ವಾನಿಸಿ ಸತ್ಕರಿಸುವ ಸಂಪ್ರದಾಯವೂ ಯುಗಾದಿಯಲ್ಲಿದೆ. ಎಷ್ಟೋ ಕಡೆ ಯುಗಾದಿಯನ್ನು ಅಳಿಯಂದಿರ ಹಬ್ಬವೆನ್ನುವುದೂ ಉಂಟು. ಅಷ್ಟೇ ಅಲ್ಲದೆ ಅಕ್ಕ ತಂಗಿಯರು, ಅಣ್ಣ ತಮ್ಮಂದಿರನ್ನು ತಮ್ಮ ಮನೆಗಳಿಗೆ ಬರಮಾಡಿಕೊಂಡು ಹಬ್ಬದ ಅಡುಗೆ ಬಡಿಸಿ ಆದರಿಸುವುದೂ ಯುಗಾದಿಯ ವೈಶಿಷ್ಟ್ಯಗಳಲ್ಲೊಂದು. ಒಟ್ಟಿನಲ್ಲಿ ಹೊಸ ಸೃಷ್ಟಿಗೆ, ಹೊಸ ದೃಷ್ಟಿಗೆ ಶ್ರೀಕಾರ ಬರೆಯುವ ಯುಗಾದಿಯಿಂದ ಎಲ್ಲರೂ ನಿರೀಕ್ಷಿಸುವುದು ಸಂತಸ–ಸಂಭ್ರಮವನ್ನಷ್ಟೇ ಅದು ಎಲ್ಲರಿಗೂ ಸಿಗಲಿ ಅಷ್ಟೆ. ಪ್ರೇಮಕವಿ ಕೆ.ಎಸ್. ನರಸಿಂಹಸ್ವಾಮಿ ಯುಗಾದಿ ಕುರಿತು ಹೇಳುವ ಬಗೆಯಿದು. "ಮಾವು ನಾವು, ಬೇವು ನಾವು, ನೋವು ನಲಿವು ನಮ್ಮವು. ಹೂವು ನಾವು, ಹಸಿರು ನಾವು, ಬೇವು ಬೆಲ್ಲ ನಮ್ಮವು".

ಎಲ್ಲಾ ಗ್ರಾಪಂ ವ್ಯಾಪ್ತಿಯಲ್ಲಿ ಅಂಗನವಾಡಿ, ಶಾಲಾ ಕಟ್ಟಡ ನಿರ್ಮಿಸಿ

ಪಿಡಿಓಗಳಿಗೆ ಜಿಪಂ ಸಿಇಓ ಬಿ.ಆರ್.ಪೂರ್ಣಿಮಾ ಸೂಚನೆ

ಮೈಸೂರು, ಏ.1(ಎಂಕೆ)– ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ(ನರೇಗಾ)ಯಡಿ ಗ್ರಾಪಂ ವ್ಯಾಪ್ತಿಯಲ್ಲಿ ಅಂಗನವಾಡಿ ಹಾಗೂ ಶಾಲಾ ಕಟ್ಟಡಗಳನ್ನು ನಿರ್ಮಿಸುವ ಮೂಲಕ ಸಮಗ್ರ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸುವಂತೆ ಜಿಪಂ ಸಿಇಓ ಬಿ.ಆರ್. ಪೂರ್ಣಿಮಾ ಪಿಡಿಓಗಳಿಗೆ ಸೂಚಿಸಿದರು.

ಮೈಸೂರು ತಾಪಂ ಸಭಾಂಗಣದಲ್ಲಿ ಶುಕ್ರವಾರ ನಡೆದ 'ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಮೈಸೂರು ತಾಲೂಕಿನಲ್ಲಿ ಅನುಷ್ಠಾನಗೊಂಡ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆ'ಯಲ್ಲಿ ಮಾತನಾಡಿದ ಅವರು, ನಗರದ ಪ್ರದೇಶದ ಮಕ್ಕಳು ಕಾನ್ವೆಂಟ್, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯುತ್ತಾರೆ. ಆದರೆ ಗ್ರಾಮೀಣ ಭಾಗದ ಮಕ್ಕಳ ಕಲಿಕೆಗೆ ಕನಿಷ್ಠ ಅಂಗನವಾಡಿ ಕೇಂದ್ರಗಳೇ ಇಲ್ಲವಾದರೆ ಕಲಿಯಲು ಎಲ್ಲಿಗೆ ಹೋಗಬೇಕು? ಅಧಿಕಾರಿಗಳು ಬಾಕಿ ಉಳಿದಿರುವ ಅಂಗನವಾಡಿ ಕಟ್ಟಡ ನಿರ್ಮಾಣ ಕಾಮಗಾರಿ ಸೇರಿದಂತೆ ಇನ್ನಿತರೆ ಕಾಮಗಾರಿಗಳನ್ನು ತ್ವರಿತವಾಗಿ ಮುಕ್ತಾಯಗೊಳಿಸಲು ಕ್ರಿಯಾಶೀಲರಾಗಿ ಕೆಲಸ ಮಾಡಬೇಕು ಎಂದು ತಿಳಿಸಿದರು.

ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ಜಾಗದ ಕೊರತೆ ಇದೆ ಹೇಳುತ್ತಾ ಕಾಮಗಾರಿಯನ್ನೇ ಆರಂಭಿಸದಿದ್ದರೇ ಯಾರು ಹೊಣೆ?. ಬಡವರ ಮಕ್ಕಳ ಅನುಕೂಲಕ್ಕಾಗಿ, ಅವರ ವಿದ್ಯಾಭ್ಯಾಸಕ್ಕಾಗಿ ಯಾವುದೇ ಸರ್ಕಾರಿ ಜಾಗದಲ್ಲಿ ಕಟ್ಟಡ ನಿರ್ಮಿಸಬಹುದಾಗಿದೆ. ಗ್ರಾಮೀಣ ಭಾಗದ ಶಾಲೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಿ, ಶಾಲಾ ಆವರಣ ತಡೆಗೋಡೆ, ಪ್ರತ್ಯೇಕ ಶೌಚಾಲಯ, ಮಳೆ



ನೀರಿನ ಕೊಯ್ಲು, ಪೌಷ್ಟಿಕ ತೋಟ, ಆಟದ ಮೈದಾನ ಸೇರಿದಂತೆ ಇನ್ನಿತರೆ ಉಪಯುಕ್ತ ಕಾಮಗಾರಿಗಳನ್ನು ಕೈಗೊಳ್ಳಬೇಕು. ಮಹಾತ್ಮ ಗಾಂಧಿ ನರೇಗಾ ಯೋಜನೆಯ 2022–23ನೇ ಸಾಲಿನಲ್ಲಿ ಕೈಗೊಳ್ಳಬಹುದಾದ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಸಲ್ಲಿಸಬೇಕು. ಈ ವಿಷಯದಲ್ಲಿ ನಿರ್ಲಕ್ಷ್ಯ ತೋರಿದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸಕಾಲದಲ್ಲಿ ಪಾವತಿ: ನರೇಗಾ ಯೋಜನೆಯಡಿ ಉದ್ಯೋಗ ಪಡೆದು ಕೆಲಸ ಮಾಡಿದವರಿಗೆ ಸಕಾಲದಲ್ಲಿ ಅವರ ಕೂಲಿ ಹಣ ಪಾವತಿ ಮಾಡಬೇಕು ಎಂದು ನ್ಯಾಯಾಲಯ ತಿಳಿಸಿದ್ದು, ಇದರಲ್ಲಿ ನೂರಕ್ಕೆ ನೂರರಷ್ಟು ಪ್ರಗತಿ ಸಾಧಿಸಬೇಕು. ಕೃಷಿ ಇಲಾಖೆಯವರು ರೈತರಿಗೆ ನೆರವಾಗುವ ಕಾಮಗಾರಿಗಳನ್ನು ಹೆಚ್ಚಾಗಿ ಕೈಗೊಳ್ಳಬೇಕು. ಗೋಕಟ್ಟೆ ಅಭಿವೃದ್ಧಿ ಸೇರಿದಂತೆ ಇನ್ನಿತರ ಕಾಮಗಾರಿ ಕೈಗೊಳ್ಳಿ. ಕೃಷಿ ಹೊಂಡ ನಿರ್ಮಾಣ ಕೈಗೊಳ್ಳಬೇಡಿ ಎಂದರು.

ಕಸ ಸಂಗ್ರಹ ಮತ್ತು ವಿಲೇವಾರಿ: ಗ್ರಾಪಂಗಳಿಗೆ ಕಸ ಸಂಗ್ರಹಣೆಗಾಗಿ ವಾಹನಗಳನ್ನು ನೀಡಿದ್ದರೂ ವ್ಯವಸ್ಥಿತವಾಗಿ ಸಂಗ್ರಹಣೆ ಮತ್ತು ವಿಲೇವಾರಿಯಾಗುತ್ತಿಲ್ಲ ಹಾಗೂ ಗ್ರಾಮದ ಪ್ರತೀ ಮನೆಗಳಿಗೆ ಕಸ ತುಂಬಿಟ್ಟುಕೊಳ್ಳಲು ಬಕೆಟ್ ವಿತರಣೆ ಮಾಡಿಲ್ಲ. ಎಲ್ಲವನ್ನು ಪಂಚಾಯಿತಿಯಲ್ಲಿ ಇಟ್ಟುಕೊಳ್ಳಲಾಗಿದೆ ಎಂಬ ದೂರುಗಳು ಕೇಳಿಬಂದಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಪರಿಶೀಲನೆ ನಡೆಸಿ, ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಮೀಟರ್ ಅವಳವಡಿಕೆ: ಜಲಜೀವನ್ ಮಿಷನ್ ಯೋಜನೆಯಡಿ ಸಮುದಾಯ ವಂತಿಕೆಯನ್ನು ಪಡೆಯಬೇಕು. ಮೀಟರ್ ಅವಳವಡಿಕೆ ಸಂಬಂಧ ಜನರಲ್ಲಿ ಗೊಂದಲಗಳಿದ್ದು, ಅವರಿಗೆ ಅರಿವು ಮೂಡಿಸುವ ಮೂಲಕ ಪ್ರತೀ ಮನೆಗಳಿಗೂ ಮೀಟರ್ ಅವಳವಡಿಸಬೇಕು. ಈ ಯೋಜನೆಯನ್ನು ಎಲ್ಲರೂ ವಿರೋಧಿಸುತ್ತಿಲ್ಲ. ಮಾಹಿತಿ ಕೊರತೆಯಿಂದ ಕೆಲವರು ವಿರೋಧಿಸುತ್ತಾರೆ ಎಂದು ಯೋಜನೆಯನ್ನು ಅನುಷ್ಠಾನಗೊಳಿಸದೆ ಇರಲು ಸಾಧ್ಯವಿಲ್ಲ ಎಂದರು.

ದೂರು: ಈ–ಸ್ವತ್ತನ್ನು ಮಾಡಿಕೊಡಲು ವಿನಾಕಾರಣ ವಿಳಂಬ ಮಾಡುತ್ತಿರುವ ಬಗ್ಗೆ ಪಿಡಿಒಗಳ ವಿರುದ್ಧ ಅನೇಕ ದೂರುಗಳು ಕೇಳಿ ಬರುತ್ತಿವೆ. ಎಲ್ಲಾ ದಾಖಲಾತಿಗಳಿದ್ದರೂ ಮಾಡಿಕೊಡುತ್ತಿಲ್ಲ ಎಂದು ಅನೇಕರು ಕರೆ ಮಾಡಿ ತಿಳಿಸುತ್ತಿದ್ದಾರೆ. ಈ ಬಗ್ಗೆ ಅಧಿಕಾರಿಗಳು ಉದಾಸೀನತೆ ತೋರಿದರೆ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡದರು.

ಜಿಪಂ ಉಪ ಕಾರ್ಯದರ್ಶಿ (ಆಡಳಿತ) ಡಾ.ಎಸ್.ಪ್ರೇಮ್ ಕುಮಾರ್, ಉಪ ಕಾರ್ಯದರ್ಶಿ (ಅಭಿವೃದ್ಧಿ) ಕೆ.ಸಿ.ದೇವರಾಜೇಗೌಡ, ಯೋಜನಾ ನಿರ್ದೇಶಕ ಬಿ.ಎ.ಸವಿತಾ, ಸಿಪಿಓ ಧನುಷ್, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಎಂ.ಎಸ್. ರಮೇಶ್, ಮಹಾತ್ಮ ಗಾಂಧಿ ನರೇಗಾ ಯೋಜನೆಯ ಸಹಾಯಕ ನಿರ್ದೇಶಕ ಕೆ.ಎಂ.ರಘುನಾಥ್, ಎ.ಡಿ.ಪಿ.ಸಿ. ಸುಪ್ರಿಯಾ, ಜಿಲ್ಲಾ ಎಂ.ಐ.ಎಸ್.ಸಂಯೋಜಕರಾದ ಭವ್ಯ, ಜಿಲ್ಲಾ ಎಸ್.ಬಿ.ಎಂ ಸಂಯೋಜಕರಾದ ಸವಿತಾ, ದಿವ್ಯಾ ಸೇರಿದಂತೆ ವಿವಿಧ ಇಲಾಖೆ ಹಾಗೂ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು ಉಪಸ್ಥಿತರಿದ್ದರು.

> **ಮಹಿಳೆಯರಿಗೆ ಸಮಾನ ಅವಕಾಶ...**
>
> ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಪುರಷರಷ್ಟೇ ಸಮಾನ ಆದ್ಯತೆಯನ್ನು ಮಹಿಳಾ ಕೂಲಿ ಕಾರ್ಮಿಕರಿಗೂ ನೀಡಬೇಕು. ಮಹಿಳೆಯರು ಆರ್ಥಿಕವಾಗಿ ಸಬಲರಾಗುವುದು ಅತ್ಯಂತ ಮುಖ್ಯವಾಗಿದೆ. ಪ್ರತಿ ಗ್ರಾಪಂ ವ್ಯಾಪ್ತಿಯಲ್ಲಿ ನರ್ಸರಿಗಳ ಸ್ಥಾಪನೆಗಾಗಿ ಸ್ಥಳೀಯ ಸಂಘ–ಸಂಸ್ಥೆಗಳೊಂದಿಗೆ ಕೈಜೋಡಿಸಬೇಕು. ಪ್ರತೀ ನಿತ್ಯ ನರೇಗಾ ಕಾರ್ಯಕ್ರಮಗಳ ಕುರಿತು ಪರಿಶೀಲನೆ ಹಾಗೂ ಮೇಲ್ವಿಚಾರಣೆ ನಡೆಸಬೇಕು.
>
> –ಪೂರ್ಣಿಮಾ, ಜಿಪಂ ಸಿಇಓ

ಮೊಬೈಲ್ ಅಂಗಡಿ ಮಾಲೀಕ ನೇಣಿಗೆ ಶರಣು

ಮೈಸೂರು, ಏ.1(ಎಂಟಿವೈ)– ಸಾಲ ಬಾಧೆಯಿಂದ ಮೊಬೈಲ್ ಅಂಗಡಿ ಮಾಲೀಕರೊಬ್ಬರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ವರದಿಯಾಗಿದೆ. ಮೈಸೂರಿನ ಕನಕದಾಸ ನಗರ (ದಟ್ಟಗಳ್ಳಿಯ)ದ ಮಹಾಮನೆ ವೃತ್ತದ ಸಮೀಪ ಮೊಬೈಲ್ ಶಾಪ್ ಹೊಂದಿದ್ದ ಹೇಮಂತ್‌ಕುಮಾರ್(24) ಆತ್ಮಹತ್ಯೆ ಮಾಡಿಕೊಂಡವರು. ಮೊಬೈಲ್ ಅಂಗಡಿಗೆ ಸಾಲ ಮಾಡಿಕೊಂಡಿದ್ದ. ಸಾಲ ತೀರಿಸಲಾಗದೆ ಹೇಮಂತ್‌ಕುಮಾರ್, ಸಂಕಷ್ಟಕ್ಕೆ ಸಿಲುಕಿದ್ದರು. ಇತ್ತೀಚೆಗೆ ಮೊಬೈಲ್ ಅಂಗಡಿಯಲ್ಲೂ ಸರಿಯಾಗಿ ವಹಿವಾಟು ನಡೆಯುತ್ತಿರಲಿಲ್ಲ. ಜೊತೆಗೆ ಸಾಲ ಬಾಧೆ ಹೆಚ್ಚಾಗಿತ್ತು. ಇದರಿಂದ ಬೇಸತ್ತು ಆರ್.ಟಿ. ನಗರದ ರಿಂಗ್‌ರಸ್ತೆಯಲ್ಲಿ ಇರುವ ಶಿವೇಗೌಡ ಫಾರಂನ ಬಳಿ ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈ ಕುರಿತು ಜಯಪುರ ಪೊಲೀಸ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಲತಾಗೆ ಪಿಎಚ್.ಡಿ



ಮೈಸೂರು,ಏ.1–ಡಾ.ಎಂ.ಶಿವಕುಮಾರ್ ಮಾರ್ಗದರ್ಶನದಲ್ಲಿ ಎಂ.ಲತಾ ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಸೈನ್ಸಸ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಬೆಳಗಾವಿ ವಿಶ್ವೇಶ್ವರಯ್ಯ ಟೆಕ್ನಾಲಜಿಕಲ್ ಯೂನಿವರ್ಸಿಟಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಸಡಗರದಿಂದ ಯುಗಾದಿ ಆಚರಣೆಗೆ ಮೈಸೂರು ಸಜ್ಜು

ಮಾರುಕಟ್ಟೆಗಳಲ್ಲಿ ಬೇವು-ಮಾವು, ಹೂ, ಹಣ್ಣು, ಹೋಳಿಗೆ, ಪೂಜಾ ಸಾಮಗ್ರಿ ಖರೀದಿ ಜೋರು

ಮೈಸೂರು,ಏ.1(ಎಂಟಿವೈ)- ಹಿಂದೂಗಳ ಹೊಸ ವರ್ಷದ ಹಬ್ಬ ಯುಗಾದಿಯನ್ನು ಸಂಭ್ರಮ-ಸಡಗರದಿಂದ ಆಚರಿಸಲು ಮೈಸೂರಿನ ಜನತೆ ಸಜ್ಜಾಗಿದ್ದಾರೆ.

ಕೊರೊನಾ ಹಿನ್ನೆಲೆಯಲ್ಲಿ ಕಳೆದ 2 ವರ್ಷಗಳಿಂದ ಯುಗಾದಿ ಹಬ್ಬವನ್ನು ಸರಳವಾಗಿ ಆಚರಿಸಲಾಗಿತ್ತು. ಸಂಭ್ರಮ-ಸಡಗರದ ಆಚರಣೆಗೆ ಕೋವಿಡ್ ಮಾರ್ಗಸೂಚಿ ಅಡ್ಡಿಯಾಗಿತ್ತು. ಆದರೆ ಈಗ ಕೊರೊನಾ ಸೋಂಕು ನಿಯಂತ್ರಣಕ್ಕೆ ಬಂದಿದ್ದು, ಕೊರೊನಾ ಸೋಂಕು ತಡೆಗೆ ವಿಧಿಸಿದ ಮಾರ್ಗಸೂಚಿಗಳನ್ನು ಕೈಬಿಟ್ಟಿರುವುದರಿಂದ ಹಬ್ಬವನ್ನು ಅದ್ಧೂರಿಯಾಗಿ ಆಚರಿಸಲು ನಿರ್ಧರಿಸಿರುವ ಜನರು, ಹಬ್ಬದ ಖರೀದಿ ಜೋರಾಗಿ ನಡೆಸಿದರು.



ಯುಗಾದಿಗೆ ಬಹಳ ಮುಖ್ಯವಾಗಿ ಬೇಕಾಗಿರುವ ಮಾವು-ಬೇವಿನ ಸೊಪ್ಪಿನ ಮಾರಾಟ, ಹೂವು, ಹಣ್ಣು, ಪೂಜಾ ಸಾಮಗ್ರಿ ಮತ್ತು ತರಕಾರಿ ಮಾರಾಟ ಬಲು ಜೋರಾಗಿಯೇ ನಡೆಯಿತು. ದೇವರಾಜ ಮಾರುಕಟ್ಟೆ, ಅಗ್ರಹಾರ ವೃತ್ತ, ಜೆ.ಕೆ. ಮೈದಾನ ಎದುರು, ಧನ್ವಂತರಿ ರಸ್ತೆ, ಸಯ್ಯಾಜಿರಾವ್ ರಸ್ತೆ, ಚಿಕ್ಕ ಗಡಿಯಾರ ವೃತ್ತ, ರಾಮಕೃಷ್ಣನಗರ, ಕುವೆಂಪುನಗರ, ಸಿದ್ಧಾರ್ಥನಗರ, ಟೆರೆಷಿಯನ್ ಕಾಲೇಜು ವೃತ್ತ, ಕುರುಬಾರಹಳ್ಳಿ ರಸ್ತೆ ಸೇರಿದಂತೆ ವಿವಿಧೆಡೆ ಹೂವು, ಹಣ್ಣು, ಮಾವು-ಬೇವಿನ ಸೊಪ್ಪನ್ನು ಜನರು ಮುಗಿಬಿದ್ದು ಖರೀದಿಸಿದರು.

ಮೈಸೂರು ಹಾಗೂ ಹುಣಸೂರು ತಾಲೂಕಿನ ವಿವಿಧ ಗ್ರಾಮಗಳಿಂದ ಮಾವು-ಬೇವಿನ ಸೊಪ್ಪನ್ನು ತಂದು ಮಾರಾಟ ಮಾಡುತ್ತಿದ್ದ ದೃಶ್ಯ ಕಂಡು ಬಂದಿತು. 1 ಕಟ್ಟು ಸೊಪ್ಪಿಗೆ 25 ರಿಂದ 30 ರೂ.ವರೆಗೆ ಮಾರಾಟ ಮಾಡಲಾಗುತ್ತಿತ್ತು. ಇನ್ನು ಹಬ್ಬ ಆಚರಣೆಗಾಗಿ ಸೇವಂತಿಗೆ ಹೂವಿನ ಮಾರಾಟ ಭರ್ಜರಿಯಾಗಿಯೆ ನಡೆಯಿತು. ಬೆಳಗ್ಗೆ 1 ಮಾರು ಸೇವಂತಿಗೆ 60ರಿಂದ 70 ರೂ.ಗೆ ಮಾರಾಟ ಮಾಡಲಾಗುತ್ತಿತ್ತು. ಸಂಜೆ ವೇಳೆಗೆ 80 ರೂ.ಗೆ 1 ಮಾರಿನಂತೆ ಮಾರಾಟ ಮಾಡಲಾಯಿತು. ಬೆಳಗ್ಗಿನಿಂದ ಮಧ್ಯಾಹ್ನದವರೆಗೂ ಗ್ರಾಹಕರ ಸಂಖ್ಯೆ ಅಷ್ಟಾಗಿ ಇರಲಿಲ್ಲ. ಮಧ್ಯಾಹ್ನದ ನಂತರವಷ್ಟೇ ವ್ಯಾಪಾರ ಚುರುಕಾಗಿ ಸಾಗಿತು.

ಯುಗಾದಿ ಹಬ್ಬದ ಸಿಹಿ ತಿನಿಸಾದ ಹೋಳಿಗೆ ಮಾರಾಟ ಬಲು ಜೋರಾಗಿತ್ತು. ಪ್ರತಿಷ್ಠಿತ ಸಿಹಿ ಅಂಗಡಿಗಳಲ್ಲಿ ಗ್ರಾಹಕರು ಹೋಳಿಗೆ ಯನ್ನು ಕೇಳಿ ಖರೀದಿಸುತ್ತಿದ್ದ ದೃಶ್ಯ ಕಂಡು ಬಂದಿತು. ಇದರೊಂದಿಗೆ ಮೈಸೂರಿನ ಅಗ್ರ ಹಾರ, ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಮಳಿಗೆ, ವಿದ್ಯಾರಣ್ಯಪುರಂ, ಚಾಮುಂಡಿಪುರಂ, ಕುವೆಂಪುನಗರ ಸೇರಿದಂತೆ ವಿವಿಧೆಡೆ ಮನೆಗಳಲ್ಲೇ ಹೋಳಿಗೆ ತಯಾರಿಸಿ ಮಾರಾಟ ಮಾಡುವ ಚಿಕ್ಕ ಚಿಕ್ಕ ಮಳಿಗೆಗಳಲ್ಲಿ ಹೋಳಿಗೆ ಮಾರಾಟ ಜೋರಾಗಿತ್ತು. 5 ಹೋಳಿಗೆ ಇರುವ 1 ಪ್ಯಾಕ್‌ಗೆ ಒಬ್ಬಟ್ಟಿಗೆ 60 ರೂ. ನಿಗದಿ ಮಾಡಲಾಗಿತ್ತು. ಕೆಲವೆಡೆ ಒಂದು ಹೋಳಿಗೆಗೆ 15 ರೂ., 20 ರೂ. ದರ ನಿಗದಿ ಮಾಡಲಾಗಿತ್ತು. ನಗರ ಪ್ರದೇಶದಲ್ಲಿರುವವರು ಹಾಗೂ ಹಬ್ಬದ ಆಚರಣೆಗೆ ಮನೆ ಯಲ್ಲಿ ಹೋಳಿಗೆ ತಯಾರಿಸಲು ಆಗದೇ ಇದ್ದವರು ಸಿಹಿ ತಿನಿಸು ಮಳಿಗೆಗಳಲ್ಲಿ ಹೋಳಿಗೆ ಖರೀದಿಸಿದರು. ಈ ಬಾರಿ ಯುಗಾದಿ ಹಬ್ಬಕ್ಕೆ ಹೋಳಿಗೆ ಖರೀದಿಸುವವರ ಸಂಖ್ಯೆ ಇಳಿಮುಖವಾಗಿದೆ ಎಂದು ವ್ಯಾಪಾರಿಗಳು ತಿಳಿಸಿದ್ದಾರೆ.

ಕೃಷಿ ಚಟುವಟಿಕೆ ಆರಂಭ: ಬೇಸಿಗೆ ಮರೆಯಾಗಿ ಮಳೆಗಾಲ ಆರಂಭವಾಗುವ ಮೂಲಕ ಹೊಸ ಸಂವತ್ಸರಕ್ಕೆ ಯುಗಾದಿ ನಾಂದಿ ಹಾಡಲಿದೆ. ಒಣಗಿದ್ದ ಗಿಡ-ಮರಗಳೆಲ್ಲಾ ಯುಗಾದಿ ನಂತರ ಚಿಗುರೊಡೆಯುವ ವಸಂತ ಕಾಲವೂ ಇದಾಗಿದೆ. ಅಲ್ಲದೆ ಯುಗಾದಿ ನಂತರ ಬೀಳುವ ಮಳೆಯಿಂದಾಗಿ ಕೃಷಿ ಚಟುವಟಿಕೆಯೂ ಆರಂಭವಾಗುತ್ತದೆ. ಈ ಹಿನ್ನೆಲೆಯಲ್ಲಿ ನಾಳೆ ಯುಗಾದಿ ದಿನ ಭೂಮಿ ಪೂಜೆ ಮಾಡುವ ಮೂಲಕ ಕೃಷಿ ಚಟುವಟಿಕೆಗೆ ಚಾಲನೆ ದೊರೆಯಲಿದೆ.

ರಾಘವೇಂದ್ರಗೆ ಪಿಹೆಚ್.ಡಿ



ಮೈಸೂರು,ಏ.1-ಡಾ. ಮಹದೇವಸ್ವಾಮಿ ಮಾರ್ಗದರ್ಶನದಲ್ಲಿ ವೈ.ಎಂ.ರಾಘವೇಂದ್ರ ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಸೈನ್ಸ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಬೆಳಗಾವಿ ವಿಶ್ವೇಶ್ವರಯ್ಯ ಟೆಕ್ನಾಲಜಿಕಲ್ ಯೂನಿವರ್ಸಿಟಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸಾರ್ವಜನಿಕ ಪ್ರಕಟಣೆ

ಮೈಸೂರು (ಪಶ್ಚಿಮ) ಉಪಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯ ಡ್ರೈವಿಂಗ್ ಸಿಮ್ಯುಲೇಟರ್ ಯಂತ್ರವು ಅನುಪಯುಕ್ತ ಸ್ಥಿತಿಯಲ್ಲಿ ಇರುತ್ತದೆ. ಸದರಿ ಯಂತ್ರವನ್ನು ದಿನಾಂಕ: 06-04-2022ರಂದು ಬೆಳಿಗ್ಗೆ 11.00 ಗಂಟೆಗೆ ಸಾರ್ವಜನಿಕವಾಗಿ ಹರಾಜು ಮೂಲಕ ವಿಲೇವಾರಿ ಮಾಡಲು ಉದ್ದೇಶಿಸಲಾಗಿದ್ದು ಖರೀದಿದಾರರು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ.

ಸಹಿ/- ಉಪಸಾರಿಗೆ ಆಯುಕ್ತರು
ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು
ಮೈಸೂರು (ಪಶ್ಚಿಮ)

ಪುರಸಭಾ ಕಾರ್ಯಾಲಯ, ಬನ್ನೂರು

ಮೈಸೂರು ಮಳವಳ್ಳಿ ರಸ್ತೆ, ಬನ್ನೂರು-571101 ತಿ.ನರಸೀಪುರ ತಾ॥ ಮೈಸೂರು ಜಿಲ್ಲೆ
ವೆಬ್‌ಸೈಟ್: www.bannurtown.mrc.gov.in
ಈ-ಮೇಲ್: itsatff_ulb_bannur@yahoo.com ಫೋನ್:-08227-276058, 08227-276111
ನಂ: ಪುಸಬ/ಮಳಿಗೆ ಹರಾಜು/03/2021-22 ದಿ: 31.03.2022

ಮರು ಬಹಿರಂಗ ಹರಾಜು ಪ್ರಕಟಣೆ

ಬನ್ನೂರು ಪುರಸಭಾ ವ್ಯಾಪ್ತಿಯಲ್ಲಿ ಆರ್ಗೆಟ್ ಸರ್ಕಲ್ ಬಳಿ ಇರುವ ಒಂದು ಅಂಗಡಿ ಮಳಿಗೆ(ಪರಿಶಿಷ್ಟ ಜಾತಿ ಜನಾಂಗದವರಿಗೆ ಮೀಸಲು)ಯನ್ನು ದಿ: 08.04.2022ರಂದು ಬೆಳಿಗ್ಗೆ 11:00 ಘಂಟೆಗೆ ಈ ಕೆಳಕಂಡಂತೆ ಬಡ್ಡಿ ರಹಿತ ಮರುಪಾವತಿ ಠೇವಣಿ ಮತ್ತು ಕನಿಷ್ಠ ಮಾಸಿಕ ಬಾಡಿಗೆಯನ್ನು ನಿಗಧಿಗೊಳಿಸಿದ್ದು, ಸದರಿ ಮಳಿಗೆಗಳಲ್ಲಿ ವ್ಯಾಪಾರ ಮಾಡುವ ಹಕ್ಕನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಹನ್ನೆರಡು(12) ವರ್ಷಗಳ ಗುತ್ತಿಗೆ ಅವಧಿಗೆ ಬಹಿರಂಗ ಹರಾಜನ್ನು ಕರ್ನಾಟಕ ಪುರಸಭಾ ಕಾಯಿದೆ 1964 ವಿಧಿ(72(2))ರ ಪ್ರಕಾರ ಪುರಸಭಾ ಕಛೇರಿ ಆವರಣದಲ್ಲಿ ಏರ್ಪಡಿಸಲಾಗಿದೆ. ಹರಾಜಿನಲ್ಲಿ ಭಾಗವಹಿಸಲಿಚ್ಚಿಸುವವರು ಛಡ ಸವಾಲ್ ಮೂಲಕ ಭಾಗವಹಿಸಿ ಬಿಡ್ ಪಡೆಯಬಹುದಾಗಿದೆ. ಬಡ್ಡಿ ರಹಿತ ಮರುಪಾವತಿ ಠೇವಣಿ ರೂ.25000.00, ಹರಾಜಿನಲ್ಲಿ ಭಾಗವಹಿಸಲು ಮುಂಗಡ ಠೇವಣಿ ರೂ.30,000.00. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಬಹುದಾಗಿದೆ.

ಸಹಿ/-ಶ್ರೀಮತಿ ಭಾಗ್ಯಶ್ರೀ ಕೃಷ್ಣ, ಅಧ್ಯಕ್ಷರು, ಪುರಸಭೆ, ಬನ್ನೂರು.
ಸಹಿ/-ಶ್ರೀಮತಿ ಭಾಗ್ಯ ಎಸ್ ಲೋಕೇಶ್, ಉಪಾಧ್ಯಕ್ಷರು, ಪುರಸಭೆ, ಬನ್ನೂರು.
ಸಹಿ/-ಶ್ರೀ.ಮಹದೇವ ಎಂ.ಎಸ್. ಕೆ.ಎಂ.ಎ.ಎಸ್, ಮುಖ್ಯಾಧಿಕಾರಿ, ಪುರಸಭೆ, ಬನ್ನೂರು.
DIPR/DDMYS/MCA/01/2021-22

ಪುರಸಭಾ ಕಾರ್ಯಾಲಯ, ಕೃಷ್ಣರಾಜನಗರ, ಮೈಸೂರು ಜಿಲ್ಲೆ

E-mail ID: itstaff_ulb_krnagar@yahoo.co.in, Phone(O):08223-262242, Fax: 08223-262241
ಸಂ:ಕೃರಾನ/ಪುಸ/ಜೆ.ಇ.01/ಟೆಂಡರ್.ಪಿ.ಆರ್.07/2021-22 ದಿನಾಂಕ: 29/03/2022

ಮರು ಟೆಂಡರ್ ಪ್ರಕಟಣೆ

ಕೃಷ್ಣರಾಜನಗರ ಪುರಸಭಾ ವ್ಯಾಪ್ತಿಯಲ್ಲಿ 2020-21 ಮತ್ತು 2021-22 ನೇ ಸಾಲಿನ 15ನೇ ಹಣಕಾಸು ಮೂಲ ಅನುದಾನ ಹಾಗೂ 2017-18ನೇ ಸಾಲಿನ 14ನೇ ಹಣಕಾಸು ಸಾಮಾನ್ಯ ಮೂಲ ಅನುದಾನ ಯೋಜನೆಯಡಿ ಮತ್ತು ಸ್ವಚ್ಛಭಾರತ್ ಮಿಷನ್ ಯೋಜನೆಯಡಿಗಳಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೋಂದಾಯಿತ 3ನೇ ದರ್ಜೆ, 4ನೇ ದರ್ಜೆ ಹಾಗೂ ಮೇಲ್ಪಟ್ಟ ಅರ್ಹ ಸಿವಿಲ್ ಗುತ್ತಿಗೆದಾರರು ಹಾಗೂ ಸರಬರಾಜುದಾರರಿಂದ **KW-1** ರ ನಿಯಮಗಳ ಅನ್ವಯ ಹಾಗೂ 1999 ಹಾಗೂ 2000 ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಮರು ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಮತ್ತು ಸರಬರಾಜುದಾರರು ಕಾಮಗಾರಿಗಳನ್ನು, ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನ **http://eproc.karnataka.nic.in** ನಿಂದ ಟೆಂಡರ್ ಷರತ್ತು ಹಾಗೂ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ವಿವರ ಷರತ್ತು ಹಾಗೂ ನಿಯಮಗಳಿಗೆ ತಾಂತ್ರಿಕ ಶಾಖೆಯನ್ನು ಸಂಪರ್ಕಿಸತಕ್ಕದ್ದು.

1. ಟೆಂಡರ್‌ನ್ನು ಸಲ್ಲಿಸಲು ಕಡೆಯ ದಿನಾಂಕ: 18/04/2022, ಸಂಜೆ 5.30 ಗಂಟೆಯವರೆಗೆ.
2. ಟೆಂಡರ್ ತೆರೆಯುವ ದಿನಾಂಕ: 20/04/2022 ರ ಬೆಳಿಗ್ಗೆ 11.30 ಗಂಟೆಗೆ ಅಥವಾ ಮುಂದೆ ಸೂಚಿಸುವ ದಿನಾಂಕದಂದು ತೆರೆಯಲಾಗುವುದು.

ಕ್ರ ಸಂ	ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಗುತ್ತಿಗೆದಾರರ ದರ್ಜೆ	ಕಾಲಾವಧಿ
1	DMA/2021-22/OW/WORK_INDENT125721/CALL-2	1.71	4,275/-	4ನೇ ದರ್ಜೆ ಹಾಗೂ ಮೇಲ್ಪಟ್ಟು	4 ತಿಂಗಳು
2	DMA/2021-22/OW/WORK_INDENT125720/CALL-2	2.70	6,750/-	4ನೇ ದರ್ಜೆ ಹಾಗೂ ಮೇಲ್ಪಟ್ಟು	4 ತಿಂಗಳು
3	DMA/2021-22/OW/WORK_INDENT125718/CALL-2	5.00	12,500/-	4ನೇ ದರ್ಜೆ ಹಾಗೂ ಮೇಲ್ಪಟ್ಟು	6 ತಿಂಗಳು
4	DMA/2021-22/OW/WORK_INDENT126818/CALL-2 (Reserved for SC Contractors)	2.79	3,488/-	4ನೇ ದರ್ಜೆ ಹಾಗೂ ಮೇಲ್ಪಟ್ಟು	3 ತಿಂಗಳು
5	DMA/2021-22/OW/WORK_INDENT126820/CALL-2 (Reserved for SC Contractors)	1.21	1,513	4ನೇ ದರ್ಜೆ ಹಾಗೂ ಮೇಲ್ಪಟ್ಟು	3 ತಿಂಗಳು

ಸೂಚನೆ: 1. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಮತ್ತು ಇತರೆ ಬದಲಾವಣೆಗಳಿದ್ದಲ್ಲಿ ಹಾಗೂ ಹೆಚ್ಚಿನ ವಿವರಗಳಿಗೆ ಗುತ್ತಿಗೆದಾರರು **http://eproc.karnataka.nic.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.
2. **12% GST will be added to the contract amount.**

ಸಹಿ/- ಅಧ್ಯಕ್ಷರು, ಪುರಸಭೆ, ಕೆ.ಆರ್.ನಗರ   ಸಹಿ/-ಮುಖ್ಯಾಧಿಕಾರಿ, ಪುರಸಭೆ, ಕೆ.ಆರ್.ನಗರ


ನಗರಸಭಾ ಕಾರ್ಯಾಲಯ, ಬಿ.ಎಂ.ರಸ್ತೆ, ಹಾಸನ

ದೂ.ಸಂ: 08172-268276, 233702 Email: commn_hassan@yahoo.com
ನಂ:ನಸಹಾ/ಆಶಾ/ಎ.ಇ.ಇ(ಪರಿಸರ)/ಸಿಆರ್ 06/2021-22 ದಿನಾಂಕ:01-04-2022

:ಅಲ್ಪಾವಧಿ ಟೆಂಡರ್ ಪ್ರಕಟಣೆ:
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000ರ ಪ್ರಕಾರ ಆಕ್ಟ್-2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ಮುಖಾಂತರ 2021-22ನೇ ಸಾಲಿನ ಎಸ್.ಎಫ್.ಸಿ ಮತ್ತು ನಗರಸಭಾ ಅನುದಾನದ ಶೇಕಡ 29ರ ಅನುದಾನದಲ್ಲಿ ಮತ್ತು ಸ್ವಚ್ಚಭಾರತ್ ಮಿಷನ್ ಅನುದಾನದಲ್ಲಿ ಈ ಕೆಳಕಂಡ ಕೆಲಸಗಳಿಗಾಗಿ ಟೆಂಡರನ್ನು ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ನೊಂದಾಯಿತ ಏಜೆನ್ಸಿಯವರು/ ಅಧಿಕೃತ ನೊಂದಾಯಿತ ಗುತ್ತಿಗೆದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ http://www.eproc.karnataka.gov.in ಮುಖಾಂತರ ಕರೆದಿರುವ ಈ ಕೆಳಕಂಡ ಕೆಲಸಗಳಿಗೆ ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವಂತೆ (Technical qualification criteria) ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ಆರೋಗ್ಯ ಶಾಖೆಯಿಂದ ದೂರವಾಣಿ ಸಂಖ್ಯೆ: 08172-268276 ರಿಂದ ಅಥವಾ www.hassancity.gov.in ದಿಂದ ಪಡೆಯಬಹುದಾಗಿರುತ್ತದೆ. ಇ-ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ 1.ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ:01-04-2022 ರಿಂದ 08-04-2022ರವರೆಗೆ. 2.ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 08-04-2022 ರಂದು ರಾತ್ರಿ 23-59 ರವರೆಗೆ. 3.ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 11-04-2022 ರಂದು ಬೆಳಿಗ್ಗೆ 11-00 ಗಂಟೆಗೆ. 2021-22ನೇ ಸಾಲಿನ ಎಸ್.ಎಫ್.ಸಿ ಮತ್ತು ನಗರಸಭಾ ಅನುದಾನದ ಶೇಕಡ 29ರ ನಿಧಿ ಕ್ರ.ಸ.ಕಾಮಗಾರಿಯ ವಿವರಗಳು: ಪೌರಕಾರ್ಮಿಕರ ಕಲ್ಯಾಣನಿಧಿಯಡಿ ಖಾಯಂ ಹಾಗೂ ನೇರಪಾವತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪೌರಕಾರ್ಮಿಕರಿಗೆ ಸಮಗ್ರ ಆರೋಗ್ಯ ತಪಾಸಣೆ ಮಾಡುವ ಕೆಲಸ. ಅಂದಾಜು ಮೊತ್ತ (ರೂ:ಲಕ್ಷಗಳಲ್ಲಿ): 15.60 ಇಂಡೆಂಟ್ ಸಂಖ್ಯೆ: CMC/HSN/24.10%PKsHEALTH/2021-22/CALL-2 ಗುತ್ತಿಗೆದಾರರ ವಿವರ: ಅಧಿಕೃತ ನೋಂದಾಯಿತ ವೈದ್ಯಕೀಯ ಸಂಸ್ಥೆ. ಕಾಲಾವಧಿ: 30 ದಿನ 2)ಹಾಸನ ನಗರಸಭೆಗೆ ಘನತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕವಾಗಿ ವಿಲೇವಾರಿಗಾಗಿ 15 ಟಿಪಿಡಿ ಸಾಮರ್ಥ್ಯದ 2 ಬೇಲಿಂಗ್ ಯಂತ್ರ ಖರೀದಿಸುವ ಕೆಲಸ. ಅಂದಾಜು ಮೊತ್ತ (ರೂ:ಲಕ್ಷಗಳಲ್ಲಿ): 23.88 ಇಂಡೆಂಟ್ ಸಂಖ್ಯೆ: CMCHASSAN/AEE Env/Bailing/CR01/2021-22 ಗುತ್ತಿಗೆದಾರರ ವಿವರ: ಅಧಿಕೃತ ಸರಬರಾಜುದಾರರು ಕಾಲಾವಧಿ: 30 ದಿನ.

ಸಹಿ/-ಅಧ್ಯಕ್ಷರು, ನಗರಸಭೆ, ಹಾಸನ   ಸಹಿ/- ಉಪಾಧ್ಯಕ್ಷರು, ನಗರಸಭೆ, ಹಾಸನ   ಸಹಿ/-ಪೌರಾಯುಕ್ತರು, ನಗರಸಭೆ, ಹಾಸನ
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/02/2022-23



ಮಧ್ಯಾಹ್ನದ ಬಿಸಿಯೂಟ ಯೋಜನೆಗೆ ಡಾ. ಶಿವಕುಮಾರ ಸ್ವಾಮೀಜಿ ಹೆಸರು

● ಸಿಎಂ ಬೊಮ್ಮಾಯಿ ಘೋಷಣೆ ● ಈಗಾಗಲೇ ಶ್ರೀಗಳ ಜಯಂತಿಯನ್ನು ದಾಸೋಹ ದಿನವಾಗಿ ಆಚರಿಸಲಾಗುತ್ತಿದೆ
● ಶ್ರೀಗಳಿಂದ 88 ವರ್ಷಗಳ ದಾಖಲೆ ಸೇವೆ ಸ್ಮರಣೆ ● 100 ವರ್ಷದ ಹಿಂದೆ ಹೊತ್ತಿದ ಒಲೆ ಇನ್ನೂ ಉರಿಯುತ್ತಿದೆ

ಬೆಂಗಳೂರು, ಏ.1(ಕೆಎಂಶಿ)–ಶಿವಕುಮಾರ ಸ್ವಾಮೀಜಿಗಳ ಜಯಂತಿಯನ್ನು ದಾಸೋಹ ದಿನ ಎಂದು ಈಗಾಗಲೇ ಸರ್ಕಾರ ಆಚರಿಸುತ್ತಿದೆ. ಮಧ್ಯಾಹ್ನದ ಬಿಸಿಯೂಟದ ಯೋಜನೆಗೆ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಹೆಸರನ್ನಿಡಲು ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.



ತುಮಕೂರಿನ ಶ್ರೀ ಸಿದ್ಧಗಂಗಾ ಮಠದಲ್ಲಿ ಆಯೋಜಿಸಿದ್ದ ಡಾ. ಶ್ರೀ ಶಿವಕುಮಾರ ಮಹಾ ಶಿವಯೋಗಿಗಳ 115ನೇ ಜಯಂತ್ಯೋತ್ಸವ ಹಾಗೂ ಗುರುವಂದನಾ ಮಹೋತ್ಸವದಲ್ಲಿ ಕೇಂದ್ರದ ಗೃಹ ಹಾಗೂ ಸಹಕಾರ ಸಚಿವ ಅಮಿತ್ ಶಾ ಅವರೊಂದಿಗೆ ಪಾಲ್ಗೊಂಡು ಮಾತನಾಡಿದರು. ಆಡಳಿತಗಾರರು ಶ್ರೀ ಮಠವನ್ನು ಶ್ರದ್ಧಾ ಭಕ್ತಿಯಿಂದ ಕಂಡಿದ್ದಾರೆ. ನಮ್ಮ ಸರ್ಕಾರವೂ ಅತ್ಯಂತ ಶ್ರದ್ಧೆಯಿಂದ ಕಾಣುತ್ತಿದೆ. ಭಕ್ತಿಯಿಂದ ಬಸವಣ್ಣನವರ ದಾಸೋಹ, ಶಿಕ್ಷಣ, ಆರೋಗ್ಯ ತತ್ವಗಳಿಗೆ ಮಹತ್ವ ನೀಡಿದೆ. ಸರ್ವೋದಯ ಕಾರ್ಯಕ್ರಮಕ್ಕೆ 60 ಸಾವಿರ ಕೋಟಿ ರೂ.ಗಳಿಗಿಂತ ಹೆಚ್ಚು ಅನುದಾನವನ್ನು ಈ ವರ್ಷದ ಬಜೆಟ್‌ನಲ್ಲಿ ಮೀಸಲಿರಿಸಿದೆ.

ಜನಕಲ್ಯಾಣಕ್ಕಾಗಿ ಹಾಗೂ ಜನರ ಪರವಾಗಿ ನಮ್ಮ ಸರ್ಕಾರ ಕೆಲಸ ಮಾಡಲಿದೆ. ನಿಮ್ಮ ವಿಶ್ವಾಸಗಳಿಸುವ ರೀತಿಯಲ್ಲಿ ಕೆಲಸ ಮಾಡುತ್ತದೆ. ಬಡವರು ದೀನದಲಿತರು, ಹೆಣ್ಣು ಮಕ್ಕಳಿಗೆ ಕಾರ್ಯಕ್ರಮಗಳ ಅನುಷ್ಠಾನ ಮಾಡಿ ನಿಮ್ಮ ಪ್ರೀತಿ ವಿಶ್ವಾಸವನ್ನು ಗಳಿಸಿ ನಿಮ್ಮ ಮುಂದೆ ಬರುತ್ತೇವೆ ಎಂದರು. ಕೇಂದ್ರ ಸಚಿವರ ಆಗಮನ ನಮ್ಮಲ್ಲಿ ಸಂಚಲನ ಮೂಡಿಸಿದೆ. ಜನರು ಅವರ ಮೇಲೆ ಪ್ರೀತಿ ಇರಿಸಿದ್ದಾರೆ ಎಂದರು.

ಶಿವಕುಮಾರ ಸ್ವಾಮೀಜಿಗಳ ಸ್ಫೂರ್ತಿ ಈ ನೆಲದಲ್ಲಿ ಅವರ ಸ್ಫೂರ್ತಿ, ಪ್ರೇರಣೆ ಇದೆ. ಇಲ್ಲಿ ಬಂದರೆ ಮನಸ್ಸಿಗೆ ಶಾಂತಿ, ಬದುಕಿಗೆ ದಾರಿ ಸಿಗುವ ಶಕ್ತಿ ಸಿದ್ಧಗಂಗಾ ಕ್ಷೇತ್ರದಲ್ಲಿ ಇದೆ. ಅದೇ ದಾರಿಯಲ್ಲಿ ಸಿದ್ದಲಿಂಗಸ್ವಾಮಿಗಳು ಶಿವಕುಮಾರ ಸ್ವಾಮಿಗಳ ಪರಂಪರೆಯನ್ನು ಅತ್ಯಂತ ಪ್ರಾಮಾಣಿಕವಾಗಿ ದಕ್ಷತೆಯಿಂದ ಜನರ ಭಾವನೆಗಳನ್ನು ಅರ್ಥ ಮಾಡಿಕೊಂಡು ಯೋಗ್ಯವಾಗಿ ಮುನ್ನಡೆಸುತ್ತಿದ್ದಾರೆ ಎಂದರು.

ಶಿವಕುಮಾರ ಸ್ವಾಮೀಜಿ ಅವರು ಸುಮಾರು 88 ವರ್ಷಗಳ ಕಾಲ ಈ ನಾಡಿನ ಸೇವೆಯನ್ನು ಮಠದ ಮುಖಾಂತರ ಮಾಡಿರುವುದು ಒಂದು ದಾಖಲೆ. ಯಾವುದೇ ಪರಮ ಪೂಜ್ಯರು ಇಷ್ಟು ದೀರ್ಘಕಾಲದ ಸೇವೆಯನ್ನು ಇಡೀ ಭಾರತ ದೇಶದಲ್ಲಿ ಮಾಡಿಲ್ಲ ಎನ್ನುವುದು ನಮ್ಮೆಲ್ಲರಿಗೂ ಅಭಿಮಾನದ ಸಂಗತಿ. ಅದಕ್ಕಾಗಿಯೇ ಅವರಿಗೆ ನಡೆದಾಡುವ ದೇವರು ಎಂಬ ಬಿರುದು ಬಂದಿದೆ. ಅವರು ಹಚ್ಚಿದ ಒಲೆ ಸುಮಾರು 100 ವರ್ಷಕ್ಕಿಂತ ಹೆಚ್ಚಿನದಾಗಿದ್ದು, ಇಂದಿಗೂ ಉರಿಯುತ್ತಿದೆ. ಎಲ್ಲಿಯವರೆಗೆ ಈ ಅಡಿಗೆ ಒಲೆಯ ಉರಿಯುತ್ತಿರುತ್ತದೆಯೋ, ಅಲ್ಲಿಯವರೆಗೆ ಬಡ ಮಕ್ಕಳ ಹೊಟ್ಟೆ ತಣ್ಣಗಾಗುತ್ತದೆ ಎಂದರು. ನಾವೆಲ್ಲರೂ ಕೋಟಿ ಕೋಟಿ ಗುರುವಂದನೆಗಳನ್ನು ಸದಾ ಸಲ್ಲಿಸಬೇಕು. ಅನ್ನ, ಅಕ್ಷರ, ಆಶ್ರಯಗಳನ್ನು ಅಕ್ಷರಶಃ ಪಾಲಿಸಿದ ದೇವರು ಶಿವಕುಮಾರ ಸ್ವಾಮೀಜಿ ಅವರು. ಅವರು ನಮ್ಮ ನಡುವೆ ಅಮರರಾಗಿದ್ದು, ಪ್ರೇರಣೆ, ಆಶೀರ್ವಾದ ನೀಡುತ್ತಿದ್ದಾರೆ.

ಸಾಧಕನಿಗೆ ಸಾವು ಅಂತ್ಯವಲ್ಲ. ಸಾವಿನ ನಂತರವೂ ಬದುಕುವವನು ನಿಜ ಸಾಧಕ ಎಂದು ಸ್ವಾಮಿ ವಿವೇಕಾನಂದರು ಹೇಳಿದಂತೆ ಅವರು ಬದುಕಿದ್ದಾರೆ. ಶಿವಕುಮಾರ ಸ್ವಾಮೀಜಿ ಅವರು ಬದುಕಿನ ದಾರಿಯನ್ನು ಕಟ್ಟಿಕೊಟ್ಟಿರುವ ಸ್ವಾಮೀಜಿಗಳು. ದೂರದ ಉತ್ತರ ಕರ್ನಾಟಕದ ಮಕ್ಕಳು, ಎಲ್ಲಾ ಸಮುದಾಯದ 10 ಸಾವಿರಕ್ಕೂ ಹೆಚ್ಚು ಮಕ್ಕಳನ್ನು ಸಲಹುವುದು ಸುಲಭದ ಮಾತಲ್ಲ. ದೈವಶಕ್ತಿ ನಮ್ಮೆಲ್ಲರಿಗೂ ಮಾರ್ಗದರ್ಶನ ಮಾಡುತ್ತಿದೆ. ಅವರ ಶ್ರದ್ಧೆ, ನಿಷ್ಠೆ ಮತ್ತು ಪರಿಶ್ರಮ ಅವರ ಧ್ಯೇಯ. ಅದರ ಪರಿಪಾಲನೆ ಮಾಡುವುದು ನಮ್ಮೆಲ್ಲರ ಕರ್ತವ್ಯ. ಶಿವಕುಮಾರ ಸ್ವಾಮೀಜಿ ಅವರು ಜಾತಿ ಕುಲ ಎಂದು ನೋಡದೆ, ಎಲ್ಲ ವರ್ಗದ ಜನರನ್ನು ಪ್ರೀತಿ ಮಾಡಿ ಬದುಕನ್ನು ಕಟ್ಟಿಕೊಟ್ಟಿದ್ದಾರೆ. ಸರ್ವೋದಯ ಮತ್ತು ಅಂತ್ಯೋದಯ ಪರಿಕಲ್ಪನೆ ಈ ಮಠದಲ್ಲಿ ನಿತ್ಯ ನಿರಂತರವಾಗಿ ನಡೆಯುತ್ತಿದೆ. ಅಂತ್ಯೋದಯ ಪರಿಕಲ್ಪನೆಯಲ್ಲಿ ಅತ್ಯಂತ ಕಟ್ಟ ಕಡೆಯ ಮನುಷ್ಯನಿಗೆ ಇಲ್ಲಿ ಸ್ಥಾನವಿದೆ. ಅವನು ತನ್ನ ಬದುಕು ಪ್ರಾರಂಭಿಸಲು ಎಲ್ಲ ರೀತಿಯ ವ್ಯವಸ್ಥೆ ಶ್ರೀ ಮಠದಲ್ಲಿದೆ ಎಂದು ಸಿಎಂ ಹೇಳಿದರು.

ಟ್ವೀಟ್ ಮೂಲಕ ಪ್ರಧಾನಿ ಮೋದಿ ನಮನ

ನವದೆಹಲಿ, ಏ. 1– ತುಮಕೂರು ಸಿದ್ಧಗಂಗಾ ಮಠದ ಲಿಂಗೈಕ್ಯ ಡಾ. ಶಿವಕುಮಾರ ಸ್ವಾಮೀಜಿ 115ನೇ ಜಯಂತ್ಯುತ್ಸವದ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಟ್ವೀಟ್ ಮಾಡಿ ಸ್ವಾಮೀಜಿಗಳಿಗೆ ಗೌರವ ಸಲ್ಲಿಸಿದ್ದಾರೆ. ತಾವು ಶಿವಕುಮಾರ ಸ್ವಾಮೀಜಿಯವರಿಗೆ ನಮಿಸುತ್ತಿರುವ ಫೋಟೋ ಹಂಚಿಕೊಂಡಿರುವ ಪ್ರಧಾನಿ ಮೋದಿ, "ಪರಮ ಪೂಜ್ಯರಾದ ಡಾ. ಶ್ರೀ ಶಿವಕುಮಾರ ಸ್ವಾಮೀಜಿಗಳ ಜಯಂತಿಯಂದು ನಾನವರಿಗೆ ಗೌರವ ಅರ್ಪಿಸುತ್ತಿದ್ದೇನೆ. ಅಸಂಖ್ಯಾತ ಜನರ ಹೃದಯದಲ್ಲಿ ಅವರಿಂದಿಗೂ ನೆಲೆಸಿದ್ದಾರೆ. ಶ್ರೀಗಳು ಅಪ್ರತಿಮ ಸಮಾಜ ಸೇವಕರಾಗಿದ್ದರು, ಆರೋಗ್ಯ ಕ್ಷೇತ್ರ ಮತ್ತು ಶಿಕ್ಷಣಕ್ಕೆ ಅವರು ನೀಡಿದ ಕೊಡುಗೆಗೆ ಸಾಟಿಯಿಲ್ಲ. ಸ್ವಾಮೀಜಿಗಳ ಕನಸು ನನಸು ಮಾಡಲು ನಾವು ಶ್ರಮಿಸುತ್ತೇವೆ" ಎಂದು ಟ್ವೀಟ್‌ನಲ್ಲಿ ಹೇಳಿದ್ದಾರೆ.



ಮುಸ್ಲಿಂ ದಂಪತಿ ಮಗು 'ಶಿವಮಣಿ'

ತುಮಕೂರು, ಏ. 1– ಸಿದ್ಧಗಂಗೆಯ ಲಿಂಗೈಕ್ಯ ಡಾ.ಶಿವಕುಮಾರ ಸ್ವಾಮೀಜಿ ಅವರ 115ನೇ ಜಯಂತ್ಯುತ್ಸವ ಪ್ರಯುಕ್ತ ಸಿದ್ದಗಂಗಾ ಮಠದ ಆವರಣದಲ್ಲಿ ಶುಕ್ರವಾರ ಬೆಳಗ್ಗೆ 115 ಮಕ್ಕಳಿಗೆ ಶಿವಕುಮಾರ ಸ್ವಾಮೀಜಿಗಳ ಹೆಸರು ನಾಮಕರಣ ಮಾಡಲಾಯಿತು. ಮುಸ್ಲಿಂ ಮಗುವಿಗೆ 'ಶಿವಮಣಿ' ಎಂದು ಹೆಸರಿಡಲಾಯಿತು.

ಸಿದ್ಧಗಂಗಾ ಮಠದಲ್ಲಿ 115 ಮಕ್ಕಳಿಗೆ ಶಿವಕುಮಾರ ಸ್ವಾಮೀಜಿ ಹೆಸರು

ನಾಮಕರಣ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ತುಮಕೂರು ತಾಲೂಕಿನ ಕ್ಯಾತ್ಸಂದ್ರದ ನಿವಾಸಿಗಳಾದ ಶಾಹಿಸ್ತಾ ಹಾಗೂ ಜಮೀರ್ ದಂಪತಿ ತಮ್ಮ ಮಗಳಿಗೆ ಶಿವಮಣಿ ಎಂದು ಹೆಸರಿಟ್ಟರು. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡದ್ದು ನಮಗೆ ಖುಷಿಯಾಗುತ್ತಿದೆ. ಸ್ವಾಮೀಜಿ ಅವರ ವಿಚಾರಧಾರೆ ನಮಗೆಲ್ಲ ಮಾದರಿಯಾಗಿದ್ದು, ಸಮಾನತೆಯ ಸಂದೇಶ ಸಾರಿದ್ದವರು ಶಿವಕುಮಾರ ಸ್ವಾಮೀಜಿ. ಅವರ ನಡೆಯಲ್ಲೇ ನಾವು ನಡೆಯುತ್ತಿದ್ದೇವೆ ಎಂದು ದಂಪತಿ ತಿಳಿಸಿದರು.



ಡಾ. ಶಿವಕುಮಾರ ಮಹಾಸ್ವಾಮೀಜಿ ಅನ್ನದಾನ ಸೇವಾ ಟ್ರಸ್ಟ್‌ನಿಂದ ಮಕ್ಕಳಿಗೆ ನಾಮಕರಣ ಮಾಡಲಾಯಿತು. ರಾಜ್ಯದ ನಾನಾ ಭಾಗಗಳಿಂದ ಮಠಕ್ಕೆ ಬಂದಿದ್ದ ಮಕ್ಕಳಿಗೆ ನಾಮಕರಣ ಮಾಡುವ ಜತೆಗೆ ಮಕ್ಕಳಿಗೆ ಬೇಕಾದ ತೊಟ್ಟಿಲು ಸೇರಿದಂತೆ ಇತರ ಪರಿಕರ ವಿತರಿಸಲಾಯಿತು ಎಂದು ಟ್ರಸ್ಟ್ ಸದಸ್ಯೆ ಅನುರಾಧ ವಿ.ಪಾಟೀಲ ವಿವರಿಸಿದ್ದಾರೆ. ಮೂರ್ನಾಲ್ಕು ವರ್ಷಗಳಿಂದ ಈ ಕಾರ್ಯಕ್ರಮ ಹಮ್ಮಿಕೊಂಡು ಬರಲಾಗುತ್ತಿದೆ. ಇದೊಂದು ವಿಭಿನ್ನ ಕಾರ್ಯಕ್ರಮ. ಶಿವಕುಮಾರ ಸ್ವಾಮೀಜಿ ಅವರ ಹುಟ್ಟುಹಬ್ಬದ ಅಂಗವಾಗಿ ಮಕ್ಕಳಿಗೆ ಹಾಸಿಗೆ, ತೊಟ್ಟಿಲನ್ನು ಉಚಿತವಾಗಿ ನೀಡಲಾಗುತ್ತಿದೆ. ರಾಮನಗರ, ಬೀದರ್, ರಾಯಚೂರು ಸೇರಿದಂತೆ ರಾಜ್ಯದ ವಿವಿಧ ಭಾಗದಿಂದ ಎಲ್ಲಾ ಧರ್ಮದ ಮಕ್ಕಳು ನಾಮಕರಣದಲ್ಲಿ ಭಾಗಿಯಾಗಿದ್ದರು ಎಂದು ಟ್ರಸ್ಟ್ ಅಧ್ಯಕ್ಷ ಜಯಣ್ಣ ತಿಳಿಸಿದ್ದಾರೆ.

ಶ್ರೀಗಳು ತ್ಯಾಗ, ಸೇವೆಯ ಪ್ರತೀಕ

ಸಿದ್ಧಗಂಗಾ ಶ್ರೀಗಳಿಂದ ಸ್ಮರಣೆ

ತುಮಕೂರು, ಏ. 1– ಅಕ್ಷರ ದಾಸೋಹ ಯೋಜನೆಗೆ ಡಾ.ಶಿವಕುಮಾರ ಸ್ವಾಮೀಜಿ ಅವರ ಹೆಸರನ್ನಿಡುವ ಬಗ್ಗೆ ಪ್ರಸ್ತಾಪವಾಗಿದೆ. ಸ್ವಾಮೀಜಿ ಆರಂಭಿಸಿದ ದಾಸೋಹ ಕಲ್ಪನೆಯಿಂದಲೇ ಆ ಕಾರ್ಯಕ್ರಮ ಆರಂಭವಾಗಿದ್ದು. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಹೀಗಿರುವಾಗ ಬಿಸಿಯೂಟ ಯೋಜನೆಗೆ ಪೂಜ್ಯರ ಹೆಸರನ್ನು ಪ್ರತ್ಯೇಕವಾಗಿ ಇಡುವ ಅವಶ್ಯಕತೆ ಇಲ್ಲ. ಇನ್ನು ಪೂಜ್ಯರ ಬದುಕು ತೆರೆದ ಪುಸ್ತಕ. ಅವರ ಜೀವನವೇ ನಮಗೆ ಆದರ್ಶ ಎಂದು ಸಿದ್ಧಗಂಗಾ ಮಠಾಧೀಶರಾದ ಶ್ರೀ ಸಿದ್ದಲಿಂಗ ಸ್ವಾಮೀಜಿ ಹೇಳಿದರು.



ತ್ರಿವಿಧ ದಾಸೋಹಿ ಡಾ.ಶಿವಕುಮಾರ ಸ್ವಾಮೀಜಿ ಅವರ 115ನೇ ಜಯಂತ್ಯುತ್ಸವ ಪ್ರಯುಕ್ತ ಸಿದ್ಧಗಂಗಾ ಕ್ಷೇತ್ರದಲ್ಲಿ ಆಯೋಜಿಸಿದ್ದ 'ನಡೆದಾಡುವ ದೇವರ ಬಸವ ಭಾರತ' ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಶ್ರೀಗಳು, ಪರಮಪೂಜ್ಯರು ಲಕ್ಷಾಂತರ ಮನೆಗಳ ಜ್ಯೋತಿ ಬೆಳಗಿಸಿದ್ದಾರೆ. ಡಾ.ಶಿವಕುಮಾರ ಸ್ವಾಮೀಜಿ ಅವರಿಗೆ ಭಕ್ತಿ ಸಮರ್ಪಿಸುವ ನಾವೆಲ್ಲಾ ಭಾಗ್ಯವಂತರು. ಅವರು ತ್ಯಾಗ ಹಾಗೂ ಸೇವೆಯ ಪ್ರತೀಕವಾಗಿದ್ದರು. ನೆರೆದಿರುವ ಎಲ್ಲರ ಹೃದಯದಲ್ಲಿ ಪರಮಪೂಜ್ಯರಿದ್ದಾರೆ. ಪೂಜ್ಯರ ಜನ್ಮದಿನ ಸಂಭ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಭಾಗವಹಿಸಿದ್ದಾರೆ. ಇದು ಅವರ ಮೂರನೇ ಭೇಟಿ. ಗುಜರಾತ್ ಸರ್ಕಾರದಲ್ಲಿ ಏಕಕಾಲದಲ್ಲಿ 12 ಖಾತೆ ನಿರ್ವಹಿಸಿದ ಅವರ ಸಾಮರ್ಥ್ಯದ ಪರಿಚಯ ಸಾಕಷ್ಟು ವಿಷಯದಲ್ಲಿ ಈ ದೇಶಕ್ಕಾಗಿದೆ. ಅವರ ದೇಶಭಿವೃದ್ಧಿಯ ಕೆಲಸಗಳಿಗೆ ದೇವರು ಶಕ್ತಿ ನೀಡಲಿ ಎಂದರು.







ನಡೆದಾಡುವ ದೇವರು ಶ್ರೀ ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿಯವರ 115ನೇ ಜಯಂತಿ ಅಂಗವಾಗಿ ಮೈಸೂರು ಯುವ ಬಳಗದ ವತಿಯಿಂದ ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ರಾಘವೇಂದ್ರ ಸ್ವಾಮಿ ದೇವಸ್ಥಾನದ ಮುಂಭಾಗ ಸಾರ್ವಜನಿಕರಿಗೆ ಮಜ್ಜಿಗೆಯನ್ನು ವಿತರಿಸಲಾಯಿತು. ಮುಡಾ ಸದಸ್ಯ ನವೀನ್ ಕುಮಾರ್, ಇಳೆಯಾಳ್ವರ್ ಸ್ವಾಮೀಜಿ, ಪರಮೇಶ್‌ಗೌಡ, ಸುದರ್ಶನ್, ವಿಘ್ನೇಶ್ವರ್ ಭಟ್, ಶ್ರೀನಿವಾಸ್, ನಾಗರಾಜ್, ಶಿವಕುಮಾರ್, ನವೀನ್ ಅವರುಗಳನ್ನು ಚಿತ್ರದಲ್ಲಿ ಕಾಣಬಹುದು

ಪಠ್ಯಪುಸ್ತಕದಲ್ಲಿ ಶ್ರೀಗಳ ಜೀವನ ಚರಿತ್ರೆ ಸೇರ್ಪಡೆಗೆ ಬಿಎಸ್‌ವೈ ಮನವಿ

ತುಮಕೂರು, ಏ. 1– ಶಾಲಾ ಪಠ್ಯದಲ್ಲಿ ಶಿವಕುಮಾರ ಶ್ರೀಗಳ ಜೀವನ ಚರಿತ್ರೆಯನ್ನು ಅಳವಡಿಸಬೇಕೆಂದು ರಾಜ್ಯ ಸರ್ಕಾರಕ್ಕೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮನವಿ ಮಾಡಿದರು. ಸಿದ್ಧಗಂಗಾ ಮಠದಲ್ಲಿ ಶುಕ್ರವಾರ ನಡೆದ ಡಾ. ಶಿವಕುಮಾರ ಸ್ವಾಮೀಜಿ ಜಯಂತ್ಯೋತ್ಸವ ಹಾಗೂ ಗುರುವಂದನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇಂದು ನಮ್ಮೆಲ್ಲರಿಗೂ ಸೌಭಾಗ್ಯ ದಿನ. ನಡೆದಾಡುವ ದೇವರಾಗಿರುವ ಶಿವಕುಮಾರ ಶ್ರೀಗಳ 115 ಜಯಂತಿ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದೇವೆ. ಜಾತಿ ಭೇದವಿಲ್ಲದೆ ಪ್ರದೇಶ ಭೇದವಿಲ್ಲದೆ ಅವರು ತಮ್ಮ ಸೇವೆ ಮಾಡಿದ್ದಾರೆ. ಹಲವು ಬಾರಿ ನನ್ನನ್ನು ಪೂಜ್ಯರು ಕರೆಸಿಕೊಂಡು ಮಾರ್ಗದರ್ಶನ ಮಾಡಿದ್ದಾರೆ. ಅನ್ನದಾನ, ವಿದ್ಯಾದಾನ ಸೇರಿದಂತೆ ಹಲವು ದಾನಗಳನ್ನು ಮಾಡಿದ್ದಾರೆ. ಈ ಕಾರ್ಯಕ್ರಮದಲ್ಲಿ ಅಮಿತ್ ಷಾ ಅವರು ಭಾಗಿಯಾಗಿರುವುದು ಅರ್ಥಪೂರ್ಣವಾಗಿದೆ. ಪೂಜ್ಯರ ಜೀವನ ಚರಿತ್ರೆಯನ್ನು ಪಠ್ಯದಲ್ಲಿ ಅಳವಡಿಸುವ ಬಗ್ಗೆ ಮುಖ್ಯ ಮಂತ್ರಿಗಳಿಗೆ ಮನವಿ ಮಾಡುತ್ತಿದ್ದೇನೆ ಎಂದರು. ಪ್ರಧಾನಿ ನರೇಂದ್ರ ಮೋದಿಯವರು ದೇಶದ ರೈತರಿಗೆ ವಿಶೇಷ ಸೇವೆ ಸಲ್ಲಿಸಿದ್ದಾರೆ. ರೈತರು ಸ್ವಾಭಿಮಾನದಿಂದ ಬಾಳಬೇಕು ಎಂದು ಕನಸು ಕಾಣುತ್ತಿರುವುದು ನಮ್ಮ ಮೋದಿ ಮತ್ತು ಅಮಿತ್ ಷಾ ಎಂದರು.



ಅಪರೂಪದ ದಿವ್ಯ ಚೇತನ ನಮ್ಮ ಪೂಜ್ಯರು: ಅಪರೂಪದ ದಿವ್ಯ ಚೇತನ ನಮ್ಮ ಪೂಜ್ಯರು. ಮಠದ ಪರಂಪರೆಗೆ ಸ್ವಲ್ಪವೂ ಚ್ಯುತಿ ಬಾರದಂತೆ ನೋಡಿಕೊಂಡವರು ಶ್ರೀ ಶಿವಕುಮಾರ ಸ್ವಾಮೀಜಿಗಳು. ಪ್ರತಿ ದಿನ ಹತ್ತು ಸಾವಿರ ದಾಸೋಹ ಮಾಡುವುದು ಸಣ್ಣ ಮಾತಲ್ಲ. ನಾವು ಮನೆಯಲ್ಲಿ ಎರಡು ಮಕ್ಕಳಿದ್ದರೆ ಹೇಗೆ ಸಾಕುವುದು? ಒಂದೇ ಮಗು ಸಾಕು ಅನ್ನುತ್ತೇವೆ. ದಾಸೋಹದ ಜೊತೆಗೆ ಮಕ್ಕಳಿಗೆ ಮಾತೃ ವಾತ್ಸಲ್ಯ ನೀಡಿದವರು ಶಿವಕುಮಾರ ಸ್ವಾಮಿಗಳು. ಶ್ರೀ ಮಠದ ಏಳಿಗೆಗೆ ಪೂಜ್ಯರು ಸಾಕಷ್ಟು ಶ್ರಮಿಸಿದ್ದಾರೆ. ಈಗಿನ ಸಿದ್ಧಗಂಗಾ ಸ್ವಾಮೀಜಿಯವರು ಕೂಡ ಮಠವನ್ನು ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ ಎಂದು ಸುತ್ತೂರು ಶ್ರೀಗಳು ಹೇಳಿದರು.

ಡಾ. ಶಿವಕುಮಾರ ಸ್ವಾಮೀಜಿ ಜಗತ್ತು ಕಂಡ ಒಂದು ಅಚ್ಚರಿ: ಡಾ. ಶಿವಕುಮಾರ ಸ್ವಾಮೀಜಿ ಜಗತ್ತು ಕಂಡ ಒಂದು ಅಚ್ಚರಿ. ಅನಾಥರು, ಅಂಧರು, ಮನೆಯಿಂದ ಹೊರಹಾಕಲ್ಪಟ್ಟವರಿಗೆ ಡಾ. ಶಿವಕುಮಾರ ಸ್ವಾಮೀಜಿಯವರು ದೇವರಿದ್ದಂತೆ. ಶ್ರೀಗಳ ಪ್ರೇರಣೆಯಿಂದ ಮೋದಿ ದಾಸೋಹ ಮಾಡಿದ್ದಾರೆ. ಶ್ರೀಗಳು ಹಾಕಿಕೊಟ್ಟ ಮಾರ್ಗದಲ್ಲಿ ನಮ್ಮ ಸರ್ಕಾರ ನಡೆಯುತ್ತಿದೆ. ಪೂಜ್ಯರು ನಡೆದಂತೆ ನಮ್ಮ ಸರ್ಕಾರವೂ ನಡೆದುಕೊಳ್ಳುತ್ತಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಹೇಳಿದರು.

ಸುದೀರ್ಘ ಕಾಲ ಸಮಾಜಕ್ಕಾಗಿ ಬದುಕಿದ ಮಹಾಚೇತನ ಡಾ.ಶಿವಕುಮಾರ ಸ್ವಾಮೀಜಿ

ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ



ಮೈಸೂರು ಬಿಜೆಪಿ ಕಚೇರಿಯಲ್ಲಿ ಡಾ.ಶ್ರೀ ಶಿವಕುಮಾರ ಸ್ವಾಮೀಜಿಯವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದ ನಂತರ ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಸೇವೆ ಸಲ್ಲಿಸುತ್ತಿರುವವರನ್ನು ಸನ್ಮಾನಿಸಲಾಯಿತು.

ಮೈಸೂರು,ಏ.1(ಪಿಎಂ)– ನಡೆದಾಡುವ ದೇವರೆಂದೇ ಹೆಸರು ಪಡೆದ ತ್ರಿವಿಧ ದಾಸೋಹಿ ತುಮಕೂರು ಸಿದ್ಧಗಂಗಾ ಮಠದ ಲಿಂಗೈಕ್ಯ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಅವರ 115ನೇ ಜಯಂತಿಯನ್ನು ಮೈಸೂರು ನಗರದ ವಿವಿಧೆಡೆ ಶುಕ್ರವಾರ ಆಚರಿಸಲಾಯಿತು.

ಬಿಜೆಪಿ ಕಚೇರಿ: ಬಿಜೆಪಿ ಮೈಸೂರು ನಗರ ಮತ್ತು ಗ್ರಾಮಾಂತರದ ವತಿಯಿಂದ ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಶಿವಕುಮಾರ ಸ್ವಾಮೀಜಿಯವರ ಜಯಂತಿ ಆಚರಿಸಲಾಯಿತು. ಡಾ.ಶ್ರೀ ಶಿವಕುಮಾರ ಸ್ವಾಮೀಜಿಯವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಅಲ್ಲದೆ, ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವವರನ್ನು ಸನ್ಮಾನಿಸಲಾಯಿತು.

ಜಾನಪದ ಕಲಾವಿದ (ನಂದಿಕಂಬ ಕುಣಿತ) ಉಡಿಗಾಲ್ ಮಹದೇವಪ್ಪ ಉಚಿತ ವಿದ್ಯಾರ್ಥಿ ನಿಲಯ ಸಂಸ್ಥಾಪಕಿ ಪ್ರಭಾಮಣಿ, ರುದ್ರಭೂಮಿ ಕಾಯಕ ಯೋಗಿ ನೀಲಮ್ಮ, ಚಿಗುರು ಶಾಲೆ ಸಂಸ್ಥಾಪಕ ಶಿವಪ್ಪ, ಪ್ರಗತಿಪರ ರೈತ ಸೋಮಶೇಖರ್ ಅವರನ್ನು ಸನ್ಮಾನಿಸಲಾಯಿತು.

ಇದೇ ವೇಳೆ ಮುಖ್ಯ ಭಾಷಣ ಮಾಡಿದ ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ, ಡಾ.ಶ್ರೀ ಶಿವಕುಮಾರ ಸ್ವಾಮೀಜಿಯವರು 112 ವರ್ಷಗಳ ಸುದೀರ್ಘ ಕಾಲ ಸಮಾಜಕ್ಕಾಗಿ ಬಾಳಿ ಬದುಕಿದ ಮಹಾಚೇತನ. ಕಾಯಕ ಮತ್ತು ದಾಸೋಹ ಅಳವಡಿಸಿಕೊಂಡಿದ್ದ ಶಿವಕುಮಾರ ಸ್ವಾಮೀಜಿಯವರ ಸ್ಮರಣೆಯು ನಮ್ಮಲ್ಲಿ ಸಕಾರಾತ್ಮಕ ಚಿಂತನೆ ಮೂಡಿಸಲಿದೆ ಎಂದು ಹೇಳಿದರು.

ಸಿದ್ಧಗಂಗಾ ಕ್ಷೇತ್ರವು ಪ್ರಾಕೃತಿಕ ಸೌಂದರ್ಯದಿಂದ ಕೂಡಿದ ರಮಣೀಯ ಸ್ಥಳವಾಗಿದೆ. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಉತ್ತರದಲ್ಲಿ ಗಂಗೆ, ದಕ್ಷಿಣದಲ್ಲಿ ಸಿದ್ಧಗಂಗೆ ಎಂದು ಹೇಳುವ ಮೂಲಕ ಸಿದ್ಧಗಂಗಾ ಕ್ಷೇತ್ರವನ್ನು ಸ್ಮರಿಸಿದ್ದಾರೆ. ಇಂತಹ ಸಿದ್ದಗಂಗಾ ಮಠದ ಶ್ರೀ ಉದ್ದಾನ ಶಿವಯೋಗಿ ಸ್ವಾಮೀಜಿಯವರ ಉತ್ತರಾಧಿಕಾರಿಯಾಗಿ ಮರುಳಾರಾಧ್ಯ ಶ್ರೀಗಳು ನೇಮಕವಾದರು. ಆದರೆ ಕೆಲವೇ ವರ್ಷಗಳಲ್ಲಿ ಮರುಳಾರಾಧ್ಯರು ಲಿಂಗೈಕ್ಯರಾದ ಹಿನ್ನೆಲೆಯಲ್ಲಿ ಡಾ.ಶ್ರೀ ಶಿವಕುಮಾರ ಸ್ವಾಮೀಜಿಯವರು ಪೀಠಾಧ್ಯಕ್ಷರಾದರು ಎಂದು ಸ್ಮರಿಸಿದರು.

ರಾಮನಗರ ಜಿಲ್ಲೆಯ ಮಾಗಡಿ ತಾಲೂಕಿನ ವೀರಾಪುರದಲ್ಲಿ ಹೊನ್ನೇಗೌಡ ಮತ್ತು ಗಂಗಮ್ಮನವರ ಪುತ್ರರಾಗಿ ಶಿವಕುಮಾರ ಸ್ವಾಮೀಜಿಯವರು 1908ರ ಏ.1ರಂದು ಜನಿಸಿದರು. ಅವರು 1930ರಲ್ಲಿ ಸಿದ್ಧಗಂಗಾ ಮಠದ ಪೀಠಾಧ್ಯಕ್ಷರಾಗುತ್ತಾರೆ. ಅಲ್ಲಿಂದ ಕ್ಷೇತ್ರದ ಅಭಿವೃದ್ಧಿ ಉತ್ತುಂಗಕ್ಕೇರಿತು. ಅನ್ನ, ಅಕ್ಷರ ಮತ್ತು ಜ್ಞಾನ ಎಂಬ ತ್ರಿವಿಧದಾಸೋಹಿಗಳಾಗಿ ಸಮಾಜಕ್ಕೆ ಬೆಳಕು ನೀಡಿದರು ಎಂದು ತಿಳಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್ ಮಾತನಾಡಿ, ಸಮಾಜ ಸೇವೆಗಾಗಿಯೇ ಅವರು ಸುದೀರ್ಘ ಕಾಲ ನಮ್ಮ ನಡುವೆ ನಡೆದಾಡುವ ದೇವರಾಗಿದ್ದರು. ಸಮಾಜದ ಉದ್ಧಾರಕ್ಕಾಗಿ ಅವರ ಮನಸ್ಸು ಸದಾ ತುಡಿಯುತ್ತಿತ್ತು ಎಂದು ಸ್ಮರಿಸಿದರು.

ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ಮಾತನಾಡಿ, ರಾಜ್ಯ ಸರ್ಕಾರದ ಮಧ್ಯಾಹ್ನದ ಬಿಸಿಯೂಟ ಯೋಜನೆಗೆ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಅವರ ಹೆಸರು ನಾಮಕರಣ ಮಾಡುವುದಾಗಿ ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದಾರೆ. ಅದಕ್ಕಾಗಿ ಮುಖ್ಯಮಂತ್ರಿಗಳನ್ನು ಅಭಿನಂದಿಸುವುದಾಗಿ ಅವರು ತಿಳಿಸಿದರು. ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್, ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಬಿಜೆಪಿ ಮೈಸೂರು ವಿಭಾಗದ ಸಂಘಟನಾ ಕಾರ್ಯದರ್ಶಿ ಮೈ.ವಿ.ರವಿಶಂಕರ್ ಮತ್ತಿತರರು ಹಾಜರಿದ್ದರು.

ಶ್ರೀಗಳಿಗೆ ಮರಣೋತ್ತರವಾಗಿ ಭಾರತ ರತ್ನ ಪುರಸ್ಕಾರ ನೀಡಬೇಕು

ಕೆಎಂಪಿಕೆ ಚಾರಿಟಬಲ್ ಟ್ರಸ್ಟ್: ಡಾ.ಶ್ರೀ ಶಿವಕುಮಾರ ಸ್ವಾಮೀಜಿಯವರ ಕಾಯಕ ಹಾಗೂ ದಾಸೋಹ ಪರಂಪರೆ ವಿಶ್ವಕ್ಕೆ ಮಾದರಿ ಎಂದು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್ ಕುಮಾರ್ ಗೌಡ ಹೇಳಿದರು.

ಮೈಸೂರಿನ ಜಯನಗರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಏರ್ಪಡಿಸಿದ್ದ ತ್ರಿವಿಧ ದಾಸೋಹಿ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಅವರ 115ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಹಾಗೂ ಶಾಲೆ ಆವರಣದಲ್ಲಿ ಸಣ್ಣಪುಟ್ಟ ಪ್ರಾಣಿ ಪಕ್ಷಿಗಳು ನೀರು ಕುಡಿಯಲು ಟ್ರಸ್ಟ್ ಇಟ್ಟಿರುವ ತೊಟ್ಟಿಗೆ ನೀರೆರೆದು, ಮಾತನಾಡಿದರು.

ಬದುಕಿನುದ್ದಕ್ಕೂ ನಿರಂತರ ಕಾಯಕದಲ್ಲಿ ನಿಷ್ಠೆ ಮೆರೆದು ಸದ್ದಿಲ್ಲದೆ ದಾಸೋಹ ಸಂಸ್ಕೃತಿ ಅನುಸರಿಸಿ ಜಗತ್ತಿಗೆ ಮಾದರಿ ಯಾಗಿ ಲಕ್ಷಾಂತರ ಮಕ್ಕಳ ಭವಿಷ್ಯಕ್ಕೆ ಶ್ರೀಗಳು ಬೆಳಕಾಗಿದ್ದರು. ಸಿದ್ಧಗಂಗಾ ಶ್ರೀಗಳ ಸೇವೆ, ತ್ಯಾಗಕ್ಕೆ ಎಂದಿಗೂ ಬೆಲೆ ಕಟ್ಟಲಾಗದು. ಶಿಕ್ಷಣ, ದಾಸೋಹದ ಮೂಲಕ ಜಗತ್ತಿಗೆ ಬೆಳಕಾದ ಶ್ರೀಗಳ ಸೇವೆ ಅನನ್ಯ ಎಂದು ತಿಳಿಸಿದರು.

ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಅವರು ನಾಡಿಗೆ ನೀಡಿದ ಕೊಡುಗೆ ಅಪಾರ.



ಮೈಸೂರಿನ ಜಯನಗರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಸಣ್ಣಪುಟ್ಟ ಪ್ರಾಣಿ ಪಕ್ಷಿಗಳು ನೀರು ಕುಡಿಯಲು ತೊಟ್ಟಿ ಇಟ್ಟು ನೀರೆರೆಯಲಾಯಿತು.

21ನೇ ಶತಮಾನದಲ್ಲಿ ಬಸವ ತತ್ವಕ್ಕೆ ಜೀವಂತಿಕೆ ತಂದ ಮಹಾಮಹಿಮರು ಶಿವಕುಮಾರ ಶ್ರೀಗಳು. ಅವರು ಇಂದಿಗೂ ನಮ್ಮೆಲ್ಲರೊಂದಿಗೆ ಇದ್ದಾರೆ ಎಂದು ಸ್ಮರಿಸಿದರು.

ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಸಿ.ಜಿ.ಗಂಗಾಧರ್ ಮಾತನಾಡಿ, ಸಿದ್ಧಗಂಗಾ ಶ್ರೀಗಳಿಗೆ ಮರಣೋತ್ತರವಾಗಿ ಭಾರತ ರತ್ನ ಪುರಸ್ಕಾರ ನೀಡಬೇಕೆಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು.

ಸಿದ್ಧಗಂಗಾ ಮಠ ಐತಿಹಾಸಿಕ ಹಿನ್ನೆಲೆ ಮತ್ತು ಪರಂಪರೆ ಹೊಂದಿದೆ. ಲಕ್ಷಾಂತರ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದ್ದು, ಪ್ರತಿನಿತ್ಯ ಸಾವಿರಾರು ಜನ ಅನ್ನ ದಾಸೋಹವನ್ನು ಸ್ವೀಕರಿಸುತ್ತಿದ್ದಾರೆ. ಮಠದ ಪೀಠಾಧಿಪತಿಗಳಾಗಿ ಶಿವಕುಮಾರ ಸ್ವಾಮೀಜಿಯವರು ಆಧುನಿಕ ಜಗತ್ತಿನ ಬಸವಣ್ಣ ಎಂದೇ ಕರೆಸಿಕೊಂಡಿದ್ದರು ಎಂದು ಸ್ಮರಿಸಿದರು.

ಬಿಸಿಯೂಟ ದಕ್ಷಿಣ ವಲಯ ಸಹಾಯಕ ನಿರ್ದೇಶ ಶ್ರೀಕಂಠೇಶ್, ಕೆಆರ್ ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಮುಖಂಡರಾದ ಅಪೂರ್ವ ಸುರೇಶ್, ಸುರೇಶ್ ಗೋಲ್ಡ್, ಅಜಯ್‌ಶಾಸ್ತ್ರಿ, ವಿನಯ್ ಕಣಗಾಲ್, ನವೀನ್ ಕೆಂಪಿ, ರಾಕೇಶ್ ಕುಂಚಿಟಿಗ, ಸುಚೀಂದ್ರ, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್ ಮತ್ತಿತರರು ಹಾಜರಿದ್ದರು.

ರಾಜ್ಯ ಕಾಂಗ್ರೆಸ್ ನಾಯಕರಿಗೆ ರಾಹುಲ್ ಗಾಂಧಿ, ಬಿಜೆಪಿ ನಾಯಕರಿಗೆ ಅಮಿತ್ ಶಾ 150ರ ಟಾರ್ಗೆಟ್

ಒಟ್ಟಾಗಿ ಶ್ರಮಿಸಿದರೆ ಗುರಿ ಸಾಧನೆ ಕಷ್ಟವಲ್ಲ

ಪಕ್ಷಕ್ಕೆ ದುಡಿದವರಿಗೆ ಮಾನ್ಯತೆ, ಮಹಿಳೆಯರು, ಯುವಕರತ್ತ ಗಮನವಿಡಿ

ಬೆಂಗಳೂರು, ಏ.1(ಕೆಎಂಶಿ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ 150 ಸ್ಥಾನಗಳನ್ನು ಗೆದ್ದು, ಪಕ್ಷವನ್ನು ಅಧಿಕಾರಕ್ಕೆ ತರಲೇಬೇಕೆಂದು ಕಾಂಗ್ರೆಸ್ ಅಧಿನಾಯಕ ರಾಹುಲ್‌ಗಾಂಧಿ ಇಂದಿಲ್ಲಿ ರಾಜ್ಯ ನಾಯಕರಿಗೆ ಟಾರ್ಗೆಟ್ ಕೊಟ್ಟಿದ್ದಾರೆ.

ಪ್ರದೇಶ ಕಾಂಗ್ರೆಸ್ ಕಚೇರಿಯ ಆಡಿಟೋರಿಯಂನಲ್ಲಿ ನಡೆದ ಮುಖಂಡರ ಸಭೆಯಲ್ಲಿ ಪಕ್ಷ ಹೇಗೆ ಮುಂಬರುವ ಚುನಾವಣೆಯನ್ನು ಎದುರಿಸಬೇಕು ಎಂಬ ಮಾರ್ಗದರ್ಶನ ನೀಡಿದ್ದಲ್ಲದೆ, ನೀವು ಒಗ್ಗಟ್ಟಾಗಿ ಚುನಾವಣೆ ಎದುರಿಸಿದರೆ, ಈ ಗುರಿ ದೊಡ್ಡದಲ್ಲ.

ಗೆಲ್ಲುವ ಗುರಿ ಇಟ್ಟುಕೊಂಡು ಸಾಗಬೇಕು. ನಾವು ಒಟ್ಟಾಗಿ ಸರಿಯಾದ ವಿಚಾರವಿಟ್ಟುಕೊಂಡು ಹೋರಾಟ ಮಾಡಿದರೆ, ಇದು ಕಷ್ಟವಲ್ಲ. ಅಲ್ಪಮತದಿಂದ ಅಧಿಕಾರ ಹಿಡಿಯುತ್ತೇವೆ ಎಂಬ ಭ್ರಮೆ ಬಿಡಿ. 150 ಗುರಿ ಇಟ್ಟುಕೊಂಡು ಭ್ರಷ್ಟ ಬಿಜೆಪಿ ಸರ್ಕಾರದ ವೈಫಲ್ಯಗಳನ್ನು ಜನರಿಗೆ ತಿಳಿಸಿ. ನಿಮ್ಮ ಗುರಿ ಮುಟ್ಟಿ ಎಂದಿದ್ದಾರೆ.

ಗುರಿ ಮುಟ್ಟಲು ಯುವಕರು ಮತ್ತು ಮಹಿಳೆಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ ಮತ್ತು ಅವರನ್ನು ಪ್ರೋತ್ಸಾಹಿಸಿ, ಕಾರ್ಯಕರ್ತರನ್ನು ಹುರಿದುಂಬಿಸುವ ಕೆಲಸ ಮಾಡಿ ಎಂದು ಕಿವಿಮಾತು ಹೇಳಿದ್ದಾರೆ.

'ಕರ್ನಾಟಕ ಕಾಂಗ್ರೆಸ್ ಪರ ರಾಜ್ಯ, ಇದು ಸ್ವಾಭಾವಿಕ ಕಾಂಗ್ರೆಸ್ ರಾಜ್ಯ. ಎಲ್ಲ ನಾಯಕರು ಒಟ್ಟಾಗಿ ಕೆಲಸ ಮಾಡಿದರೆ ನಮ್ಮ ಗುರಿ ಮೀರಿ ಸಾಧನೆ ಮಾಡಬಹುದು. ಹೀಗಾಗಿ ಕಾಂಗ್ರೆಸ್ ನಾಯಕರೆಲ್ಲರೂ ಮುಂಬರುವ ಚುನಾವಣೆಯಲ್ಲಿ ಗುರಿ ಇಟ್ಟುಕೊಂಡು ಹೋರಾಟ ಮಾಡಿ ಎನ್ನುವುದರ ಮೂಲಕ ಒಬ್ಬರನ್ನೊಬ್ಬರು ಕಾಲೆಳೆಯುವ ಕೆಲಸ ಮಾಡುವುದನ್ನು ಬಿಡಿ ಎಂದು ಪರೋಕ್ಷವಾಗಿ ತಿಳಿಸಿದರು.



'ಈಗ ಕರ್ನಾಟಕದಲ್ಲಿ ಭ್ರಷ್ಟ ಬಿಜೆಪಿ ಸರ್ಕಾರ ಅಧಿಕಾರದಲ್ಲಿದೆ. ಇದು ಜನರಿಂದ ಆಯ್ಕೆಯಾದ ಪರಿಪೂರ್ಣ ಸರ್ಕಾರವಲ್ಲ. ಹಣದ ಬಲದಿಂದ ರಚನೆಯಾಗಿರುವ ಅನೈತಿಕ ಸರ್ಕಾರ.

ನಾವು ಟಿಕೆಟ್ ನೀಡುವಾಗ ಪಕ್ಷದ ಸೇವೆಯನ್ನು ಗಮನಿಸಿ ನೀಡುತ್ತೇವೆ. ಅವರು ಪಕ್ಷಕ್ಕೆ ಪ್ರಾಮಾಣಿಕವಾಗಿದ್ದು, ಪಕ್ಷದ ಪ್ರತಿನಿಧಿಯಾಗಿದ್ದರೆ ಅವರಿಗೆ ಸೂಕ್ತ ಅವಕಾಶ ಸ್ಥಾನಮಾನ ನೀಡಲಾಗುವುದು.

ನಾನು ಮೂರು ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ನಾವು 150 ಸ್ಥಾನ ಗೆಲ್ಲುವ ಗುರಿ ಹೊಂದಬೇಕು, ಪಕ್ಷಕ್ಕೆ ದುಡಿದವರಿಗೆ ಆದ್ಯತೆ ನೀಡಬೇಕು, ಬಹುಮತದ ಆಧಾರದ ಮೇಲೆ ನಿರ್ಧಾರ ಕೈಗೊಳ್ಳಬೇಕು. ನಮ್ಮ ಕಾರ್ಯಕರ್ತರಿಗೆ ಸೂಕ್ತವಾದ ಮಾನ್ಯತೆ ನೀಡಬೇಕು. ಅಧಿಕಾರಕ್ಕೆ ಬಂದ ನಂತರ ಅವರಿಗಾಗಿ ಕೆಲಸ ಮಾಡಬೇಕು. ಇದಿಷ್ಟು ಸಂಘಟನೆ ವಿಚಾರ.

ಇನ್ನು ದೇಶದಲ್ಲಿ ಬಿಜೆಪಿ ಸರ್ಕಾರದ ಆಡಳಿತ ವಿಚಾರದ ಬಗ್ಗೆ ಮಾತನಾಡುವುದಾದರೆ, ದೇಶ ಹಾಗೂ ರಾಜ್ಯದ ಮುಂದೆ ನಿರುದ್ಯೋಗ ಸಮಸ್ಯೆ ದೊಡ್ಡದಾಗಿದೆ. ದೇಶದ ಆರ್ಥಿಕತೆ ಹಾಳಾಗಿದೆ, ಬೆಲೆ ಏರಿಕೆ ಹೆಚ್ಚಾಗಿದೆ. ನಮ್ಮ ಶಕ್ತಿಯಾಗಿದ್ದ ಆರ್ಥಿಕತೆ ದುರ್ಬಲವಾಗಿದೆ. ಇದೆಲ್ಲವೂ ನಮ್ಮ ಮುಂದಿರುವ ಸವಾಲು.

ನೋಟು ರದ್ದತಿ, ಕೆಟ್ಟ ಜಿಎಸ್‌ಟಿ ಪದ್ಧತಿ, ಕರಾಳ ಕೃಷಿ ಕಾಯ್ದೆಯಿಂದ ದೇಶಕ್ಕೆ ನಷ್ಟವಾಗಿದೆ. ಈಗಿನ ಬಿಜೆಪಿ ಸರ್ಕಾರ ಯಾವುದೇ ಕಾರಣಕ್ಕೂ ಜನರಿಗೆ ಉದ್ಯೋಗ ನೀಡಲು ಸಾಧ್ಯವಿಲ್ಲ. ಕಾರಣ, ಉದ್ಯೋಗ ನೀಡುವ ಶಕ್ತಿಯಾಗಿದ್ದ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಬಿಜೆಪಿ ನಾಶ ಮಾಡಿದೆ.

ಇಂದಿನ ಭಾರತ ತನ್ನ ಯುವಕರಿಗೆ ಉದ್ಯೋಗ ನೀಡಲು ಸಾಧ್ಯವಾಗುತ್ತಿಲ್ಲ. ಇದರಿಂದ ದೇಶಕ್ಕೆ ನಷ್ಟವಾಗಿದ್ದು, ಮುಂದೆ ಇನ್ನು ಅಪಾಯ ಎದುರಾಗಲಿದೆ. ಈ ವಿಚಾರಗಳ ಬಗ್ಗೆ ಬಿಜೆಪಿ ಎಂದೂ ಮಾತನಾಡುವುದಿಲ್ಲ.

ಪ್ರಧಾನಿ ಭ್ರಷ್ಟಾಚಾರದ ವಿರುದ್ಧ ಹೋರಾಡ್ತಿನಿ ಅಂದರೆ ಜನ ನಗ್ತಾರೆ...

ಮೊದಲು ಮೋದಿ ಅವರು ಚುನಾವಣೆ ಸಮಯದಲ್ಲಿ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಿದ್ದರು. ಆದರೆ ಇಂದು ಅವರು ಕರ್ನಾಟಕಕ್ಕೆ ಬಂದು ಭ್ರಷ್ಟಾಚಾರದ ಬಗ್ಗೆ ಮಾತನಾಡಿದರೆ, ಶೇ. 40 ಕಮಿಷನ್ ಭ್ರಷ್ಟಾಚಾರ ಸರ್ಕಾರದ ಬಗ್ಗೆ ಹೇಳಿ, ನಾನು ಭ್ರಷ್ಟಾಚಾರದ ವಿರುದ್ಧ ಹೋರಾಡುತ್ತೇನೆ ಎಂದರೆ ಇಡೀ ರಾಜ್ಯವೇ ನಗಲಿದೆ ಎಂದು ರಾಹುಲ್ ಗಾಂಧಿ ಅಭಿಪ್ರಾಯಪಟ್ಟರು.

ದೇಶದ ಅತೀ ದೊಡ್ಡ ಭ್ರಷ್ಟ ಸರ್ಕಾರ ಕರ್ನಾಟಕದಲ್ಲಿದೆ. ಇದು 40% ಸರ್ಕಾರ ಎಂದು ನಾವು ಹೇಳುತ್ತಿಲ್ಲ, ಗುತ್ತಿಗೆದಾರರ ಸಂಘ ಹೇಳುತ್ತಿದೆ. ಆದರೆ ಮೋದಿ ಅವರು ಬಂದು ಭ್ರಷ್ಟಾಚಾರದ ವಿರುದ್ಧ ಮಾತನಾಡಿದರೆ ಅದೊಂದು ಅಪಹಾಸ್ಯವಾಗಲಿದೆ. ಕೇವಲ ಕರ್ನಾಟಕ ಮಾತ್ರವಲ್ಲ ದೇಶದ ಯಾವುದೇ ಭಾಗದಲ್ಲಿ ಭ್ರಷ್ಟಾಚಾರ ವಿರುದ್ಧ ಹೋರಾಡುತ್ತೇನೆ ಎಂದು ಹೇಳಲು ಸಾಧ್ಯವಿಲ್ಲ.

ಕರ್ನಾಟಕದ ಯಾವುದೇ ಬಿಜೆಪಿ ನಾಯಕ, ರಾಷ್ಟ್ರೀಯ ನಾಯಕರು ನಿರುದ್ಯೋಗ, ಆರ್ಥಿಕತೆ, ಭ್ರಷ್ಟಾಚಾರದ ವಿಚಾರವಾಗಿ ಮಾತನಾಡಲು ಸಾಧ್ಯವಿಲ್ಲ. ಬಿಜೆಪಿಯ ಉದ್ದೇಶ ಬಡವರ ಹಣವನ್ನು ಕಿತ್ತುಕೊಂಡು ದೊಡ್ಡ ಉದ್ಯಮಿಗಳಿಗೆ ನೀಡುವುದಾಗಿದೆ. ಇವರು ಕೆಲವು ಉದ್ಯಮಿಗಳಿಗೆ ಹಣ ಸಂದಾಯ ಮಾಡುವ ಕೆಲಸ ಮಾಡುತ್ತಿದ್ದಾರೆ. ದೇಶವನ್ನು ಒಡೆದು ಈ ಕೆಲಸ ಮಾಡುತ್ತಿದ್ದಾರೆ.

ಬಿಜೆಪಿ ಧರ್ಮಗಳ ನಡುವೆ, ಜಾತಿಗಳ ನಡುವೆ ಸಂಘರ್ಷ ತರುತ್ತಿದೆ. ಈ ಪರಿಸ್ಥಿತಿಯಲ್ಲಿ ನಮ್ಮ ನಿಜವಾದ ಜವಾಬ್ದಾರಿ ಏನು ಎಂದರೆ, ರಾಜ್ಯ ಹಾಗೂ ದೇಶಕ್ಕೆ ಅಗತ್ಯವಿರುವ ವಿಚಾರಗಳನ್ನು ಎತ್ತುವುದಾಗಿದೆ. ಉದ್ಯೋಗ ನೀಡುವುದು, ಆರ್ಥಿಕತೆ ಸರಿಪಡಿಸುವುದು, ದೇಶದ ವಿವಿಧ ಸಮುದಾಯದವರನ್ನು ಒಟ್ಟಿಗೆ ತರುವುದಾಗಿದೆ. ಬಿಜೆಪಿ ಕೆಲಸ ಒಡೆಯುವುದಾದರೆ, ನಮ್ಮ ಕೆಲಸ ಒಂದುಗೂಡಿಸುವುದಾಗಿದೆ. ಇದನ್ನು ಕರ್ನಾಟಕದಲ್ಲಿ ಮಾಡಿ ತೋರಿಸಬೇಕಿದೆ.

ದೇಶದಲ್ಲಿ ಅತೀ ಹೆಚ್ಚು ಸದಸ್ಯತ್ವವನ್ನು ಮಾಡಿರುವ ರಾಜ್ಯ ಕರ್ನಾಟಕವಾಗಿದೆ. 70 ಲಕ್ಷ ಸಂಖ್ಯೆಯಲ್ಲಿ ಬಹುತೇಕರು ಯುವಕರಾಗಿದ್ದಾರೆ. ನಾವು ಈ ಚುನಾವಣೆಯಲ್ಲಿ ಎರಡು ವಿಚಾರದ ಬಗ್ಗೆ ಗಮನಹರಿಸಬೇಕಿದೆ. ಒಂದು ಯುವಕರು ಮತ್ತೊಂದು ಮಹಿಳೆಯರು. ನಾವು ಟಿಕೆಟ್ ನೀಡುವುದಾಗಿರಲಿ, ಸಂಘಟನೆ ಮಾಡುವುದರಲ್ಲಾಗಲಿ ಯುವಕರು ಹಾಗೂ ಮಹಿಳೆಯರಿಗೆ ಹೆಚ್ಚು ಅವಕಾಶ ನೀಡ ಬೇಕು. ಪ್ರಮುಖ ವಿಚಾರವಾಗಿ ಹೋರಾಡಬೇಕು, ಬಿಜೆಪಿಯ ಸುಳ್ಳನ್ನು ಜನರ ಮುಂದೆ ಇಡಬೇಕು.

ಸಿದ್ದರಾಮಯ್ಯ ಅವರ ಸರ್ಕಾರ ಅತ್ಯುತ್ತಮ ಪ್ರಗತಿ ಸಾಧಿಸಿತ್ತು. ಇದನ್ನು ನಾವು ಜನರಿಗೆ ತಿಳಿಸಬೇಕು. ನಾವು ಏನು ಮಾಡಿದ್ದೆವು, ಮುಂದೆ ಏನು ಮಾಡುತ್ತೇವೆ ಎಂದು ಹೇಳಬೇಕು. 150ಕ್ಕಿಂತ ಒಂದು ಕ್ಷೇತ್ರವೂ ಕಡಿಮೆ ಆಗಬಾರದು. ಇನ್ನು ನಮ್ಮ ಎಲ್ಲ ಹಿರಿಯ ನಾಯಕರನ್ನು ನಾನು ಸಾಕಷ್ಟು ಬಲ್ಲೆ. ನೀವು ಎಲ್ಲರೂ ಒಟ್ಟಾಗಿ ಹೋರಾಡಲೇಬೇಕು. ಇದು ನಿಮ್ಮ ಬಹುದೊಡ್ಡ ಜವಾಬ್ದಾರಿ. ನೀವದನ್ನು ಮಾಡುತ್ತಿದ್ದು, ನೀವೆಲ್ಲರೂ ಸೇರಿ 150 ಸೀಟು ತರಬೇಕು. ನೀವು ಯಾವಾಗ ಬಯಸುತ್ತೀರೋ ಆಗ ಎಲ್ಲಿ ಬೇಕಾದರೂ ನಾನು ಬರುತ್ತೇನೆ ಎಂದರು.

ಏ.15ರ ಒಳಗೆ ಬ್ಲೂ ಪ್ರಿಂಟ್ ಸಿದ್ಧಪಡಿಸಿ

ಅವಧಿಗೆ ಮುನ್ನ ಚುನಾವಣೆ ಇಲ್ಲ: ಅಮಿತ್ ಶಾ



ಬೆಂಗಳೂರು, ಏ. 1– ರಾಜ್ಯದ ಆಡಳಿತ ಪಕ್ಷ ಬಿಜೆಪಿ ಈಗಿನಿಂದಲೇ ಚುನಾವಣೆ ಕಾರ್ಯತಂತ್ರ ಆರಂಭಿಸಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜ್ಯ ನಾಯಕರಿಗೆ 2023 ವಿಧಾನಸಭೆ ಚುನಾ ವಣೆಯಲ್ಲಿ 150 ಸ್ಥಾನ ಗೆಲ್ಲಲು ಬೇಕಾದ ನೀಲ ನಕ್ಷೆಯನ್ನು ಏಪ್ರಿಲ್ 16 ರೊಳಗೆ ಸಿದ್ಧಪಡಿಸುವಂತೆ ಕಟ್ಟು ನಿಟ್ಟಿನ ಸೂಚನೆ ನೀಡಿದ್ದಾರೆ.

ಶುಕ್ರವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದಲ್ಲಿ ನಡೆದ ರಾಜ್ಯ ಬಿಜೆಪಿ ಕೋರ್ ಕಮಿಟಿ ಸಭೆಯಲ್ಲಿ ಮುಂಬರುವ ವಿಧಾನಸಭೆ ಚುನಾವಣೆಯ ಕಾರ್ಯತಂತ್ರದ ಕುರಿತು ಸುದೀರ್ಘ ಚರ್ಚೆ ನಡೆದಿದೆ. ಹಾಲಿ ಇರುವ 120 ಶಾಸಕರ ಸಂಖ್ಯೆಯನ್ನು ಮುಂದಿನ ಚುನಾವಣೆಯಲ್ಲಿ 150ಕ್ಕೆ ಹೆಚ್ಚಿಸಲು ಬೇಕಾದ ನೀಲ ನಕ್ಷೆಯನ್ನು ಏಪ್ರಿಲ್ 16 ರೊಳಗೆ ಸಿದ್ಧಪಡಿಸಿಕೊಂಡು ಏಪ್ರಿಲ್ 16ಕ್ಕೆ ರಾಜ್ಯಕ್ಕೆ ಆಗಮಿಸುತ್ತಿರುವ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಕೈಗೆ ನೀಡುವಂತೆ ಅಮಿತ್ ಶಾ ರಾಜ್ಯ ನಾಯಕರಿಗೆ ಟಾರ್ಗೆಟ್ ನೀಡಿದ್ದಾರೆ.

ಈ ಹಿಂದೆ ಎರಡು ಬಾರಿ ಆದಂತೆ ಬಿಜೆಪಿ ಬಹುಮತದ ಕೊರತೆ ಎದುರಿಸದಂತೆ ನೋಡಿಕೊಳ್ಳಬೇಕು. ಟಾರ್ಗೆಟ್ 150 ಎಂದು ಕೇವಲ ಬಾಯಿ ಮಾತಲ್ಲೇ ಹೇಳಿದರೆ ಸಾಲದು. ಅಷ್ಟು ಶಾಸಕರನ್ನು ಗೆಲ್ಲಿಸಿಕೊಂಡು ಬರಲು ಎಲ್ಲ ನಾಯಕರಿಗೂ ಜವಾಬ್ದಾರಿ ಹಂಚಿಕೆ ಮಾಡಿಕೊಳ್ಳಬೇಕು. ಹಳೇ ಮೈಸೂರು ಭಾಗ, ಉತ್ತರ ಕರ್ನಾಟಕ, ಕರಾವಳಿ, ಮಧ್ಯ ಕರ್ನಾಟಕ ಭಾಗಗಳಲ್ಲಿ ಪಕ್ಷ ನ್ಯೂನ್ಯತೆಗಳನ್ನು ಪತ್ತೆ ಹಚ್ಚಿ ಪಕ್ಷವನ್ನು ಬಲಗೊಳಿಸುವಂತೆ ಸೂಚಿಸಿದ್ದಾರೆ ಎಂದು ತಿಳಿದು ಬಂದಿದೆ.

ರಾಜ್ಯ ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸಲು ಈಗಿನಿಂದಲೇ ಕಾರ್ಯತಂತ್ರ ರೂಪಿಸುವಂತೆ ಸೂಚಿಸಿದ್ದಾರೆ. ಬಿಜೆಪಿ ಶಾಸಕರು ಇಲ್ಲದಿರುವ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ಬರಲು ಬೇಕಾದ ಸಿದ್ಧತೆ ಮಾಡಿಕೊಳ್ಳಲು ಸೂಚಿಸಿದ್ದಾರೆ ಎಂದು ತಿಳಿದು ಬಂದಿದೆ. ಪಕ್ಷದವರೇ ಗೆಲ್ಲುವ ಅಭ್ಯರ್ಥಿಗಳಿದ್ದರೆ, ಅಂತಹ ಕ್ಷೇತ್ರಗಳಿಗೆ ಬೇರೆ ಪಕ್ಷಗಳಿಂದ ಕರೆದುಕೊಂಡು ಬಾರದಂತೆ ಸೂಚನೆ ನೀಡಿದ್ದಾರೆ ಎನ್ನಲಾಗಿದೆ. ಪಕ್ಷದಲ್ಲಿ ಗೆಲ್ಲುವ ಸಾಮರ್ಥ್ಯ ಇರುವ ಅಭ್ಯರ್ಥಿಗಳಿಲ್ಲದ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್‌ನಿಂದ ಬಿಜೆಪಿಗೆ ಬರುವವರನ್ನು ಸೇರಿಸಿಕೊಳ್ಳುವಂತೆ ಅಮಿತ್ ಶಾ ಸೂಚಿಸಿದ್ದಾರೆ ಎಂದು ತಿಳಿದು ಬಂದಿದೆ.

2023ಕ್ಕೆ ಯಾವುದೇ ಕಾರಣಕ್ಕೂ ಬಿಜೆಪಿ ಕರ್ನಾಟಕದಲ್ಲಿ ಅಧಿಕಾರ ಕಳೆದುಕೊಳ್ಳಬಾರದು. ಆ ನಿಟ್ಟಿನಲ್ಲಿ ಎಲ್ಲ ನಾಯಕರು ಒಗ್ಗಟ್ಟು ಪ್ರದರ್ಶನ ಮಾಡುವಂತೆ ಅಮಿತ್ ಶಾ ನಾಯಕರುಗಳಿಗೆ ಸೂಚನೆ ನೀಡಿದ್ದಾರೆ. ಸಂಘಟಿತ ಪ್ರಯತ್ನ ನಡೆಸಿದರೆ ಮಾತ್ರ ಮರಳಿ ಅಧಿಕಾರಕ್ಕೆ ಬರಲು ಸಾಧ್ಯ. ಆ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗುವಂತೆ ಅಮಿತ್ ಶಾ ಸೂಚಿಸಿದ್ದಾರೆ ಎಂದು ತಿಳಿದು ಬಂದಿದೆ.

ಅವಧಿ ಪೂರ್ವ ಚುನಾವಣೆ ಇಲ್ಲ ಪಂಚ ರಾಜ್ಯಗಳ ಚುನಾವಣೆಯ ಗೆಲುವಿನಿಂದ ಬೀಗುತ್ತಿರುವ ಬಿಜೆಪಿ, ಡಿಸೆಂಬರ್‌ನಲ್ಲಿ ಗುಜರಾತ್ ವಿಧಾನಸಭೆಗೆ ಚುನಾವಣೆ ನಡೆಯಲಿದ್ದು, ಅದೇ ವೇಳೆ, ಕರ್ನಾಟಕ ವಿಧಾನ ಸಭೆಗೂ ಚುನಾವಣೆ ನಡೆಸಲು ಚಿಂತನೆ ನಡೆದಿದೆ ಎಂಬ ಮಾತುಗಳು ಕೇಳಿ ಬರುತ್ತಿದೆ. ಈ ಕುರಿತಂತೆಯೂ ಸಭೆಯಲ್ಲಿ ಚರ್ಚೆ ನಡೆದಿದೆ ಎನ್ನಲಾಗಿದೆ. ಆದರೆ ಅವಧಿ ಪೂರ್ವ ಚುನಾವಣೆ ನಡೆಸದಿರಲು ಬಿಜೆಪಿ ನಾಯಕರು ನಿರ್ಧರಿಸಿದ್ದಾರೆ ಎಂದು ತಿಳಿದು ಬಂದಿದೆ.

ಸಂಪುಟ ಚರ್ಚೆಯಿಲ್ಲ: ಬಹು ನಿರೀಕ್ಷಿತ ಸಂಪುಟ ಪುನಾರಚನೆ ಅಥವಾ ವಿಸ್ತರಣೆ ಕುರಿತು ಕೋರ್ ಕಮಿಟಿ ಸಭೆಯಲ್ಲಿ ಯಾವುದೇ ಪ್ರಸ್ತಾಪ ಮಾಡಿಲ್ಲ ಎಂದು ತಿಳಿದು ಬಂದಿದೆ. ಈ ಬಗ್ಗೆ ಅಮಿತ್ ಶಾ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪ್ರತ್ಯೇಕವಾಗಿ ಸೂಚನೆ ನೀಡುವ ಸಾಧ್ಯತೆ ಇದೆ ಎಂಬ ಮಾಹಿತಿ ಲಭ್ಯವಾಗಿದೆ ಅಲ್ಲದೇ ಹಾಲಿ ಇರುವ ನಿಗಮ ಮಂಡಳಿ ಅಧ್ಯಕ್ಷರ ಬದಲಾವಣೆ ಕುರಿತಂತೆಯೂ ರಾಜ್ಯ ಮಟ್ಟದ ನಾಯಕರುಗಳೇ ಚರ್ಚಿಸಿ ತೀರ್ಮಾನ ಕೈಗೊಳ್ಳುವಂತೆ ಅಮಿತ್ ಶಾ ಸೂಚನೆ ನೀಡಿದ್ದಾರೆ ಎಂದು ತಿಳಿದು ಬಂದಿದೆ.

ದೇಶದಲ್ಲಿ ಹಾಲು ಉತ್ಪಾದಕರಿಗೆ ಪ್ರತ್ಯೇಕ ಬ್ಯಾಂಕ್ ಸ್ಥಾಪನೆ

ಕ್ರೆಡಿಟ್ ಕಾರ್ಡ್ ನೀಡಲು ಯೋಜನೆ

ಬೆಂಗಳೂರು, ಏ. 1– ದೇಶದಲ್ಲಿ ಹಾಲು ಉತ್ಪಾದಕರಿಗೆ ಪ್ರತ್ಯೇಕ ಬ್ಯಾಂಕ್ ಸ್ಥಾಪನೆ ಹಾಗೂ ಪ್ರತ್ಯೇಕ ಕ್ರೆಡಿಟ್ ಕಾರ್ಡ್ ನೀಡಲು ಯೋಜನೆ ರೂಪಿಸಲಾಗುತ್ತಿದೆ ಎಂದು ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಹೇಳಿದ್ದಾರೆ.

ಅರಮನೆ ಅವರಣದಲ್ಲಿ ಇಂದು ಆಯೋಜಿಸಲಾಗಿದ್ದ ಸಹಕಾರ ಸಮ್ಮೇಳನದಲ್ಲಿ ಮಾತನಾಡಿದ ಅಮಿತ್ ಶಾ, ಸಹಕಾರ ಕ್ಷೇತ್ರದಲ್ಲಿ ಪಾರದರ್ಶಕತೆ ತರಲು ಎಲ್ಲಾ ರೀತಿಯ ಪ್ರಯತ್ನ ಮಾಡಲಾಗುತ್ತಿದೆ. ಹಾಲು ಉತ್ಪಾದಕರಿಗೆ ಪ್ರತ್ಯೇಕ ಬ್ಯಾಂಕ್ ಸ್ಥಾಪನೆ ಹಾಗೂ ಪ್ರತ್ಯೇಕ ಕ್ರೆಡಿಟ್ ಕಾರ್ಡ್ ನೀಡುವುದರಿಂದ ಹಾಲು ಉತ್ಪಾದಕರ ಸಮಗ್ರ ಅಭಿವೃದ್ಧಿಗೆ ಅನುಕೂಲವಾಗಲಿದೆ ಎಂದರು.

ಸಹಕಾರ ಕ್ಷೇತ್ರದಲ್ಲಿ ಕರ್ನಾಟಕ ಎ ಗ್ರೇಡ್ ಹೊಂದಿದೆ. ಕರ್ನಾಟಕ ಸಹಕಾರ ಕ್ಷೇತ್ರ ಐತಿಹಾಸಿಕವಾಗಿದೆ. ಕರ್ನಾಟಕಕ್ಕೆ ಬಂದಾಗಲೆಲ್ಲ ಸಹಕಾರ ಮೂಲ ಪುರುಷ ಗದಗ ಜಿಲ್ಲೆಯ ಸಿದ್ದನಗೌಡ ಸಂಗನಗೌಡ ಪಾಟೀಲರನ್ನು ನೆನಪಿಸುತ್ತೇನೆ. ಸಹಕಾರ ಸೌಹಾರ್ದ ಕೋ ಆಪರೇಟಿವ್ ಬ್ಯಾಂಕ್ ಕಟ್ಟಡ ಉದ್ಘಾಟಿಸಲಾಗಿದೆ. ನಂದಿನಿ 17, 000 ಕೋಟಿ ವ್ಯವಹಾರ ಮಾಡಿ ದೊಡ್ಡ ಸಂಸ್ಥೆಯಾಗಿ ಬೆಳೆಯಲಿದೆ. ಮುಂಬರುವ ದಿನಗಳಲ್ಲಿ ಸಹಕಾರಿ ಕ್ಷೇತ್ರ ದೊಡ್ಡ ಮಟ್ಟದಲ್ಲಿ ಬೆಳೆಯಲಿದೆ ಎಂಬ ಆಶಯ ವ್ಯಕ್ತಪಡಿಸಿದರು. ಇದು ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ವರ್ಷವಾಗಿದ್ದು, 100 ವರ್ಷಗಳವರೆಗೆ ಅಮೃತ ಘಳಿಗೆ ಎಂದು ಆಚರಿಸಲಾಗುತ್ತದೆ. ದೇಶದ ಸ್ವಾತಂತ್ರ್ಯೋತ್ಸವಕ್ಕೆ 100 ವರ್ಷ ತುಂಬಿದಾಗ ಕರ್ನಾಟಕದ ಪ್ರತಿಯೊಂದು ಗ್ರಾಮದಲ್ಲಿ ಸಹಕಾರ ಬ್ಯಾಂಕ್ ಇರುವಂತೆ ನೋಡಿಕೊಳ್ಳಲಾಗುವುದು, ಸಹಕಾರ ಕ್ಷೇತ್ರದಲ್ಲಿ ಹಾಲು ಉತ್ಪಾದನೆ, ಮೀನು ಸಾಕಾಣಿಕೆಯನ್ನು ಪ್ರೋತ್ಸಾಹಿಸಲಾಗುವುದು ಎಂದು ಅವರು ತಿಳಿಸಿದರು. ಸಹಕಾರ ಇಲಾಖೆಗೆ ಕೇಂದ್ರದ ಹಣಕಾಸು ಸಚಿವರು 900 ಕೋಟಿ ರೂ. ನೀಡಿದ್ದಾರೆ. ದೇಶದ 63 ಸಾವಿರ ಪ್ಯಾಕ್ಸ್‌ಗಳನ್ನು ಕಂಪ್ಯೂಟರೀಕರಣ ಮಾಡಲು ತೀರ್ಮಾನಿಸಲಾಗಿದ್ದು, ಎಲ್ಲ ಪ್ರಾದೇಶಿಕ ಭಾಷೆಗಳಲ್ಲಿ ಜಾರಿಗೆ ತರುತ್ತೇವೆ ಎಂದು ಅಮಿತ್ ಶಾ ಹೇಳಿದರು.

ವೀರಶೈವ ಬಳಗ



ಚಾಮುಂಡಿಪುರಂ ವೀರಶೈವ ಬಳಗದ ವತಿಯಿಂದ ಡಾ.ಶ್ರೀ ಶಿವಕುಮಾರ ಸ್ವಾಮೀಜಿ 115ನೇ ಜಯಂತಿ ಅಂಗವಾಗಿ ಮೈಸೂರಿನ ಚಾಮುಂಡಿಪುರಂ ವೃತ್ತದಲ್ಲಿ ಉಚಿತ ಆರೋಗ್ಯ ತಪಾಸಣೆ, ನೇತ್ರ ತಪಾಸಣೆ ಮತ್ತು ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಪಾಲಿಕೆ ಸದಸ್ಯ ಮ.ವಿ.ರಾಮ್‌ಪ್ರಸಾದ್, ಮಾಜಿ ಸದಸ್ಯ ಸುನೀಲ್, ಮೈಸೂರು ಟಾರ್ಪಾಲಿನ್ ಮಾಲೀಕ ವೀರಭದ್ರಪ್ಪ, ರೈತ ಸಂಘದ ಮುಖಂಡ ಸರಗೂರು ನಟರಾಜ್, ಪರಿಸರವಾದಿ ಭಾನುಮೋಹನ್, ಬಳಗದ ಅಧ್ಯಕ್ಷ ನಾಗೇಂದ್ರ ಮತ್ತಿತರರು ಹಾಜರಿದ್ದರು.

ಮಂಡಿ ಮೊಹಲ್ಲಾದಲ್ಲಿ ಶ್ರೀಗಳ ಜಯಂತಿ



ಡಾ.ಶ್ರೀ ಶಿವಕುಮಾರ ಸ್ವಾಮೀಜಿಯವರ 115ನೇ ಜಯಂತಿಯನ್ನು ಮೈಸೂರಿನ ಮಂಡಿ ಮೊಹಲ್ಲಾದಲ್ಲಿ ಇಲ್ಲಿನ ನಿವಾಸಿಗಳು ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಆಚರಿಸಿದರು. ಮಿಷನ್ ಆಸ್ಪತ್ರೆ ರಸ್ತೆಯ ರಂಗಪಾಪಣ್ಣಿ ಚೌಕದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಹಾಗೂ ಬಿಜೆಪಿ ಮುಖಂಡ ರವಿ ರಾಜಕೀಯ, ಶ್ರೀಗಳಿಗೆ ಭಾರತ ರತ್ನ ಪ್ರಶಸ್ತಿ ನೀಡಬೇಕು. ಈಗಾಗಲೇ ಅವರ ಸೇವೆಯ ಮಹತ್ವ ಪರಿಗಣಿಸಿ ಆಳುವ ಸರ್ಕಾರಗಳು ಅವರಿಗೆ ಭಾರತ ರತ್ನ ಪ್ರಶಸ್ತಿ ನೀಡಬೇಕಿತ್ತು. ಇನ್ನಾದರೂ ಸರ್ಕಾರ ಎಚ್ಚೆತ್ತು ಶ್ರೀಗಳಿಗೆ ಈ ಉನ್ನತ ಪುರಸ್ಕಾರ ನೀಡಿ ಗೌರವಿಸಬೇಕು ಎಂದು ಒತ್ತಾಯಿಸಿದರು.

ಚಾಮರಾಜ ಕ್ಷೇತ್ರದ ಬಿಜೆಪಿ ಉಪಾಧ್ಯಕ್ಷ ಕುಮಾರ್‌ಗೌಡ. ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ರವಿ, ಎಸ್.ಆರ್.ಅರವಿಂದ, ಸೂರಜ್, ತಾಯಿಗೌಡ, ವಿಠಲ, ವಿಜಯ್, ಶೇಖರ, ಗೋಪಾಲ್, ಅನಿಲ್, ರವಿ ನಾಯಕ್ ಮತ್ತಿತರರು ಹಾಜರಿದ್ದರು.

ಒಂದನೇ ಪುಟದಿಂದ

ಸ್ವಾಮಿಗಳ ಹಾದಿಯಲ್ಲಿ ಮೋದಿ

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರವೂ ಶಿವಕುಮಾರ ಸ್ವಾಮೀಜಿಯವರ ತತ್ವಗಳನ್ನು ದೇಶಾದ್ಯಂತ ಜಾರಿಗೆ ತಂದಿದೆ. ಬಡವರಿಗೆ ಉಚಿತವಾಗಿ ಐದು ಕೆಜಿ ಅಕ್ಕಿ ನೀಡುತ್ತಿದ್ದೇವೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಮೂಲಕ ಶಿಕ್ಷಣಕ್ಕೆ ಹೊಸ ಆಯಾಮವನ್ನು ನೀಡಿದ್ದೇವೆ. ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ವನ್ನು ಯಾರು ಬೇಕಾದರೂ ಅವರದೇ ಭಾಷೆಯಲ್ಲಿ ಪಡೆಯಬಹುದು. ಕಳೆದ ಏಳು ವರ್ಷಗಳಲ್ಲಿ ಮೂರು ಕೋಟಿ ಜನರಿಗೆ ಸೂರು ಕಲ್ಪಿಸಿ ಕೊಡಲಾಗಿದೆ ಎಂದು ಶಾ ಹೇಳಿದರು.

ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ 80 ಕೋಟಿ ಜನರಿಗೆ ಉಚಿತ ಪಡಿತರವನ್ನು ನೀಡಲಾಗಿದೆ. ಸಮಾಜದ ಪ್ರತಿಯೊಂದು ವರ್ಗವೂ ಪ್ರಗತಿ ಹೊಂದಲು ಕೇಂದ್ರವು ಶ್ರಮಿಸುತ್ತಿದೆ ಎಂದ ಅಮಿತ್ ಷಾ, ಭಾರತವು ಪ್ರಾಚೀನ ರಾಷ್ಟ್ರವಾಗಿದ್ದು, ಭೌಗೋಳಿಕ ಸ್ಥಳಗಳು ಮತ್ತು ಗುಣ ಮಟ್ಟವನ್ನು ಆಧರಿಸಿ ಅನೇಕ ಯಾತ್ರಾ ಕೇಂದ್ರಗಳು ಹುಟ್ಟಿಕೊಂಡಿವೆ. ಆದಾಗ್ಯೂ, ಕೆಲವು ಸಂತರ ಉತ್ತಮ ಕಾರ್ಯದಿಂದ ಹೊಸ ಯಾತ್ರಾ ಕೇಂದ್ರಗಳು ಸಹ ಬಂದಿವೆ. ಅಂತಹ ಒಂದು ಕೇಂದ್ರವು ಸಿದ್ದಗಂಗಾ ಮಠವಾಗಿದ್ದು, ಅಲ್ಲಿ ಶಿವ ಕುಮಾರ ಸ್ವಾಮೀಜಿ ಅವರು ಬಸವೇಶ್ವರರ ಉಪದೇಶ ವನ್ನು ಜಾರಿಗೆ ತಂದಿದ್ದಾರೆ ಎಂದರು. ಇದಕ್ಕೂ ಮುನ್ನ ಶಾ ಅವರು ಶಿವಕುಮಾರಸ್ವಾಮೀಜಿ ಗದ್ದುಗೆಗೆ ಪೂಜೆ ಸಲ್ಲಿಸಿದರು.

ಅಮಿತ್ ಶಾ ಸಂಚರಿಸುವ ಮಾರ್ಗದಲ್ಲಿ ಸ್ಫೋಟದ ಸದ್ದು

ಬೆಂಗಳೂರು, ಏ. 1– ರಾಜ್ಯ ಪ್ರವಾಸದಲ್ಲಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸಂಚರಿಸುವ ಬೆಂಗಳೂರಿನ ಹೃದಯಭಾಗದ ಮಾರ್ಗದಲ್ಲಿ ಶುಕ್ರವಾರ ಸ್ಫೋಟ ಸಂಭವಿಸಿದ್ದು, ಕೆಲ ಕಾಲ ಭದ್ರತಾ ಸಿಬ್ಬಂದಿ ಆತಂಕಕ್ಕೀಡಾಗಿದ್ದರು. ಈ ಸ್ಫೋಟಕ್ಕೆ ಶಾರ್ಟ್ ಸರ್ಕ್ಯೂಟ್ ಕಾರಣ ಎಂದು ತಿಳಿದ ಬಳಿಕ ಭದ್ರತಾ ಸಿಬ್ಬಂದಿ ನಿಟ್ಟುಸಿರು ಬಿಟ್ಟಿದ್ದಾರೆ. ಚಿಕ್ಕಬಳ್ಳಾಪುರ ಕಾರ್ಯಕ್ರಮದ ಬಳಿಕ ಸಂಜೆ 4.30ರ ಸುಮಾರಿಗೆ ಅಮಿತ್ ಶಾ ಬರುತ್ತಿದ್ದ ಮೌಂಟ್ ಕಾರ್ಮೆಲ್ ಕಾಲೇಜು ಬಳಿ ಮಾರ್ಗದಲ್ಲಿ ಸದ್ದು ಕೇಳಿಬಂದಿತ್ತು. ಪೊಲೀಸರು ಸ್ಫೋಟದ ಸದ್ದು ಕೇಳಿ ಪರಿಶೀಲಿಸಿದಾಗ ಭೂಮಿಯೊಳಗಿನ ಎಲೆಕ್ಟ್ರಿಕ್ ಕೇಬಲ್‌ಗಳು ಒಳಚರಂಡಿಯಲ್ಲಿ ಶಾರ್ಟ್ ಸರ್ಕ್ಯೂಟ್ ಆಗಿ ಸ್ಫೋಟದೊಂದಿಗೆ ದಟ್ಟ ಹೊಗೆ ಕಾಣಿಸಿಕೊಂಡಿರುವುದು ಸ್ಪಷ್ಟವಾಯಿತು.

ಐಪಿಎಸ್ ವೃತ್ತಿಯಿಂದ ನಿವೃತ್ತಿ ಪಡೆದ ಭಾಸ್ಕರ್ ರಾವ್

ರಾಜಕೀಯಕ್ಕೆ ಎಂಟ್ರಿ ಸಾಧ್ಯತೆ!

ಬೆಂಗಳೂರು, ಏ. 1– ರೈಲ್ವೆ ಪೊಲೀಸ್ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ(ಎಡಿಜಿಪಿ)ರಾಗಿ ಸೇವೆ ಸಲ್ಲಿಸುತ್ತಿರುವ ಭಾಸ್ಕರ್ ರಾವ್, ಐಪಿಎಸ್ ವೃತ್ತಿಗೆ ನಿವೃತ್ತಿ ಘೋಷಿಸಿದ್ದಾರೆ. 1954ರಂದು ಜನಿಸಿದ ಭಾಸ್ಕರ್ ರಾವ್ ಅವರು 2019–20ರ ಅವಧಿಯಲ್ಲಿ ಬೆಂಗಳೂರು ನಗರ ಪೊಲೀಸ್ ಆಯುಕ್ತರಾಗಿದ್ದರು. ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆ, ಆಂತರಿಕ ಭದ್ರತಾ ವಿಭಾಗದಲ್ಲಿ ಕೂಡ ಕೆಲಸ ನಿರ್ವಹಿಸಿದ್ದರು.



ಪ್ರಸ್ತುತ ರೈಲ್ವೆ ಪೊಲೀಸ್ ವಿಭಾಗದ ಎಡಿಜಿಪಿ ಆಗಿ ಸೇವೆ ಸಲ್ಲಿಸುತ್ತಿದ್ದರು. ಸ್ವಯಂ ನಿವೃತ್ತಿ ಪಡೆದಿರುವ ಭಾಸ್ಕರ್ ರಾವ್ ಅವರು ಮುಂಬರುವ ದಿನಗಳಲ್ಲಿ ರಾಜಕೀಯಕ್ಕೆ ಪಾದಾರ್ಪಣೆ ಮಾಡಲಿದ್ದಾರೆಂದು ಎಂಬ ಸುದ್ದಿಗಳು ಕೇಳಿಬರುತ್ತಿವೆ.

ಭಾರೀ ರಿಯಾಯ್ತಿ ಮಾರಾಟ: ಏ.3ಕ್ಕೆ ಅಂತ್ಯ



ಮೈಸೂರು, ಏ.1– ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಬ್ರಾಂಡ್‌ಗಳು ಸೇರಿದಂತೆ ಬ್ರಾಂಡೆಡ್ ರೆಡಿಮೇಡ್ ಬಟ್ಟೆಗಳ ಭಾರೀ ರಿಯಾಯ್ತಿ ಮಾರಾಟ ಏ.3ರವರೆಗೆ ವಿಸ್ತರಣೆಯಾಗಿದೆ.

ಮೈಸೂರಿನ ವಿನೋಬಾ ರಸ್ತೆಯ ಹೋಟೆಲ್ ಸದರನ್ ಸ್ಟಾರ್‌ನಲ್ಲಿ ಮಹಿಳೆಯರ, ಪುರುಷರ ಹಾಗೂ ಮಕ್ಕಳ ನಾನಾ ಬ್ರಾಂಡೆಡ್ ರೆಡಿಮೇಡ್ ಬಟ್ಟೆಗಳು, ಶರ್ಟ್ಸ್, ಪ್ಯಾಂಟ್ಸ್, ಟಿ–ಶರ್ಟ್ಸ್, ಬರ್ಮುಡಾಗಳು, ಲೇಡಿಸ್ ಕುರ್ತಾ, ಪೈಜಾಮಾಸ್, ಮಕ್ಕಳ ಡ್ರೆಸ್‌ಗಳು, ಕಿಡ್ಸ್ ಶರ್ಟ್ಸ್, ಪ್ಯಾಂಟ್ಸ್ ಮತ್ತು ಬೆಡ್‌ಶೀಟ್ಸ್ ಭಾರೀ ರಿಯಾಯ್ತಿ ಯೊಂದಿಗೆ ಕಡಿಮೆ ಬೆಲೆಯಲ್ಲಿ ಮಾರಾಟವಾಗುತ್ತಿವೆ. ಹೆಣ್ಣುಮಕ್ಕಳ ಟಾಪ್ಸ್, ಜೀನ್ಸ್ ಪ್ಯಾಂಟ್ಸ್, ಕಾಟನ್ ಪ್ಯಾಂಟ್ಸ್, ಟಿ–ಶರ್ಟ್, ಫ್ಯಾನ್ಸಿ ಡ್ರೆಸಸ್, ಜಾಕೆಟ್ಸ್, ಮತ್ತು ವಿವಿಧ ಪ್ಯಾಂಟೀಸ್‌ಗಳು, ಬ್ರಾಗಳು ಲಭ್ಯವಿದೆ. ಇದರ ಜೊತೆಗೆ ದಿವಾನ್ ಸೆಟ್, ಸೋಫಾ ಕವರ್, ಸೋಫಾ ಸೆಟ್ ಮತ್ತು ಟೇಬಲ್ ಕ್ಲಾತ್ ಸಹ ಮಾರಾಟಕ್ಕಿವೆ.

ಬಾಲ್ಯವಿವಾಹ: ತಾಳಿ ತೆಗೆಸಿ ಪರೀಕ್ಷೆಗೆ ಕಳಿಸಿದ ಪೋಷಕರು

ಮಧುಮಗ ಸೇರಿ ಐವರ ವಿರುದ್ಧ ಕೇಸ್

ಶ್ರೀರಂಗಪಟ್ಟಣ, ಏ.1(ವಿನಯ್ ಕಾರೇಕುರ)– ಬಾಲ್ಯ ವಿವಾಹ ಮಾಡದಂತೆ ಅಧಿಕಾರಿಗಳ ಎಚ್ಚರಿಕೆಯ ನಡುವೆಯೂ ಪೋಷಕರು ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿಗೆ ಗುಟ್ಟಾಗಿ ಮದುವೆ ಮಾಡಿ ಪರೀಕ್ಷೆ ಬರೆಯಲು ತಾಳಿ, ಕಾಲುಂಗುರ ತೆಗೆಸಿ ಕಳುಹಿಸಿರುವ ಘಟನೆ ಜಿಲ್ಲೆಯಲ್ಲಿ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ.

ಮಾ.27 ರಂದು ಶ್ರೀರಂಗಪಟ್ಟಣದ ವಿದ್ಯಾರ್ಥಿನಿಗೆ ಕೆ.ಆರ್.ಪೇಟೆ ತಾಲೂಕಿನ ಸಂಬಂಧಿಕ ಯುವಕನೊಂದಿಗೆ ಪೋಷಕರು ಮನೆಯಲ್ಲೇ ಗುಟ್ಟಾಗಿ ಮದುವೆ ಮಾಡಿದ್ದಾರೆ ಎನ್ನಲಾಗಿದೆ. ನಂತರ ಮಾ.28 ರಂದು ಎಸ್ಸೆಸ್ಸೆಲ್ಸಿ ಪರೀಕ್ಷೆ ಪ್ರಾರಂಭವಾದ ಹಿನ್ನೆಲೆಯಲ್ಲಿ ಬರೆಯಲು ತಾಳಿ ಹಾಗೂ ಕಾಲುಂಗುರ ತೆಗೆಸಿ ಕಳುಹಿಸಿದ್ದಾರೆ. ಪರೀಕ್ಷೆ ಬರೆಯಲು ಬಂದ ವಿದ್ಯಾರ್ಥಿನಿ ತನ್ನ ಸ್ನೇಹಿತೆಯರಿಗೆ ಮದುವೆ ಬಗ್ಗೆ ಹೇಳಿಕೊಂಡಿದ್ದಳು. ಇದರಿಂದ ಅಪ್ರಾಪ್ತ ವಯಸ್ಸಿನ ವಿದ್ಯಾರ್ಥಿನಿಯ ಮದುವೆಯ ಬಗ್ಗೆ ಸ್ನೇಹಿತೆಯರು ಬಹಿರಂಗಗೊಳಿಸಿದ್ದಾರೆ. ಬಳಿಕ ಶಿಕ್ಷಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದು ಕೂಡಲೇ ಬಾಲಕಿಯನ್ನು ರಕ್ಷಿಸಿದ್ದಾರೆ.

ಇದಕ್ಕೂ ಮೊದಲು ಮಾ.18ರಂದು ವಿದ್ಯಾರ್ಥಿನಿಗೆ ಬಾಲ್ಯ ವಿವಾಹ ನಿಶ್ಚಯವಾಗಿರುವ ಬಗ್ಗೆ ಅಧಿಕಾರಿಗಳಿಗೆ ದೂರು ಬಂದ ಹಿನ್ನೆಲೆಯಲ್ಲಿ ತಕ್ಷಣ ಅಧಿಕಾರಿಗಳು ಮಾ.18 ಹಾಗೂ 25 ರಂದು ವಿದ್ಯಾರ್ಥಿನಿಯ ಮನೆಗೆ ಭೇಟಿ ನೀಡಿ ಪೋಷಕರಿಗೆ ಮದುವೆ ಮಾಡದಂತೆ ಎಚ್ಚರಿಕೆ ನೀಡಿದ್ದರು. ಅಲ್ಲದೆ, ಬಾಲ್ಯ ವಿವಾಹದಿಂದ ಆಗುವ ತೊಂದರೆಗಳ ಬಗ್ಗೆಯೂ ತಿಳಿ ಹೇಳಲಾಗಿತ್ತು. ಈ ಎಚ್ಚರಿಕೆಯನ್ನು ನಿರ್ಲಕ್ಷಿಸಿರುವ ಬಾಲಕಿಯ ಪೋಷಕರು ಮನೆಯಲ್ಲಿಯೇ ಗುಟ್ಟಾಗಿ ಮಾ.27 ರಂದು ಮದುವೆ ಮಾಡಿದ್ದಾರೆ. ಸದ್ಯ ಸಂತ್ರಸ್ತ ವಿದ್ಯಾರ್ಥಿನಿಯನ್ನು ಮಂಡ್ಯದ ಬಾಲಮಂದಿರದಲ್ಲಿರಿಸಲಾಗಿದ್ದು, ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯಲು ಎಲ್ಲಾ ರೀತಿಯ ಅನುಕೂಲ ಕಲ್ಪಿಸಲಾಗಿದೆ. ಇತ್ತ ಬಾಲ್ಯ ವಿವಾಹ ಮಾಡಿದವರ ವಿರುದ್ಧ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ಪೊಲೀಸರಿಗೆ ದೂರು ನೀಡಿದ್ದು, ಮದುವೆ ಮಾಡಿದವರ ವಿರುದ್ಧ ಕೆಆರ್‌ಎಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಎಸ್.ರಾಜಮೂರ್ತಿ ತಿಳಿಸಿದರು.

ರುದ್ರೇಶ್ ನಿಧನ



ನಾಗಮಂಗಲ, ಏ.1– ಮಂಡ್ಯ ಜಿಲ್ಲೆ ನಾಗಮಂಗಲ ಪಟ್ಟಣದ ನಿವಾಸಿ ರುದ್ರೇಶ್(72) ಅವರು ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯ ಕ್ರಿಯೆ ನಾಗಮಂಗಲದ ಅವರ ತೋಟದಲ್ಲಿ ನೆರವೇರಿತು.

ಚಿನಕುರಳಿಯಲ್ಲಿ ಸಾಧನಾ ಸಮಾವೇಶ, ಕೆರೆ ಹಸ್ತಾಂತರ ಕಾರ್ಯಕ್ರಮಕ್ಕೆ ಚಾಲನೆ

ಯೋಜನೆಗಳು ದೇವರು ಕೊಡುವ ವರದಂತೆ: ವೀರೇಂದ್ರ ಹೆಗ್ಗಡೆ



ಕಳೆದ 16 ವರ್ಷಗಳ ಹಿಂದೆ ನಾನು ಬೇಬಿಬೆಟ್ಟದಲ್ಲಿ ನಡೆದ ಸರಳ ವಿವಾಹ ಕಾರ್ಯಕ್ರಮಕ್ಕೆ ಬಂದಾಗ ತಾಲೂಕು ಅಭಿವೃದ್ಧಿಯಲ್ಲಿ ಬಹಳ ಹಿಂದುಳಿದಿತ್ತು. ಈಗ ಬಹಳಷ್ಟು ಅಭಿವೃದ್ಧಿ ಆಗಿದೆ. ಇದಕ್ಕೆ ಶಾಸಕರಾಗಿರುವ ಪುಟ್ಟರಾಜುರವರ ಅಭಿವೃದ್ಧಿ ದೃಷ್ಟಿಕೋನವೇ ಕಾರಣ. ಇಂದು ಪಾಂಡವಪುರ ತಾಲೂಕು ಇತರೆ ತಾಲೂಕಿಗೆ ಮಾದರಿಯಾಗಿರುವುದು ಮೆಚ್ಚುವ ವಿಚಾರ ಎಂದು ಡಾ.ಹೆಗ್ಗಡೆ ಬಣ್ಣಿಸಿದರು. ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬರುವ ಎಲ್ಲಾ ಯೋಜನೆಗಳನ್ನೂ ಪುಟ್ಟರಾಜುರವರು ಸಮರ್ಪಕವಾಗಿ ಬಳಕೆ ಮಾಡಿಕೊಂಡಿದ್ದಾರೆ. ಎಲ್ಲರೂ ಇದೇ ರೀತಿ ಬಳಕೆ ಮಾಡಿಕೊಂಡು ರಾಜ್ಯದ ಅಭಿವೃದ್ಧಿಗೆ ಮುಂದಾಗಬೇಕು. – ಡಾ. ವೀರೇಂದ್ರಹೆಗ್ಗಡೆ, ಧರ್ಮಾಧಿಕಾರಿ, ಧರ್ಮಸ್ಥಳ.

ಚಿನಕುರಳಿ, ಏ.1(ಸಿ.ಎ.ಲೋಕೇಶ್/ಮೋಹನ್ ರಾಜ್)– ಸರ್ಕಾರಗಳು, ವಿವಿಧ ಸಂಘ ಸಂಸ್ಥೆಗಳು ನೀಡುವ ಯೋಜನೆಗಳು ದೇವರು ಕೊಟ್ಟಿರುವ ವರದಂತೆ. ಪ್ರತಿಯೊಬ್ಬರೂ ಯೋಜನೆಗಳ ಸದುಪಯೋಗಕ್ಕೆ ಮುಂದಾಗಬೇಕೆಂದು ಧರ್ಮಸ್ಥಳ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಕರೆ ನೀಡಿದರು.

ಪಾಂಡವಪುರ ತಾಲೂಕಿನ ಚಿನಕುರುಳಿಯಲ್ಲಿ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಕೆರೆ ಪುನಶ್ಚೇತನ ವ್ಯವಸ್ಥಾಪನಾ ಸಮಿತಿ ವತಿಯಿಂದ ನಡೆದ ಸಾಧನಾ ಸಮಾವೇಶ ಮತ್ತು ಕೆರೆ ಹಸ್ತಾಂತರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರದ ಯೋಜನೆ ಬಳಕೆಗಳ ಬಗ್ಗೆ ಯಾರೂ ಉದಾಸೀನ ಮಾಡಬಾರದು. ಪ್ರತಿಯೊಬ್ಬರೂ ಯೋಜನೆ ಸದುಪಯೋಗ ಮಾಡಿಕೊಂಡು ಅಭಿವೃದ್ಧಿ ಕಡೆ ಮುನ್ನಡೆಯಬೇಕು ಎಂದರು.

ಮಂಡ್ಯ ಜಿಲ್ಲೆಯ ಜನತೆ ಸಾಲವನ್ನು ಶೂಲ ಮಾಡಿಕೊಳ್ಳದೆ ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಂಡಿರುವುದು ಮೆಚ್ಚುಗೆಯ ವಿಚಾರ. ಅವಕಾಶ ಬಂದಾಗ ಬಾಚಿಕೊಳ್ಳಬೇಕು. ಬಡತನ ದೂರವಾಗಬೇಕಾದರೆ ಹೃದಯ ಶ್ರೀಮಂತಿಕೆ ಬೆಳೆಸಿಕೊಳ್ಳಬೇಕೆಂದು ಡಾ.ವೀರೇಂದ್ರ ಹೆಗ್ಗಡೆ ತಿಳಿಹೇಳಿದರು.

ದಾನಗಳಲ್ಲೇ ಅನ್ನದಾನ, ಔಷಧ ದಾನ, ವಿದ್ಯಾದಾನ ಹಾಗೂ ಅಭಯದಾನ ಅತ್ಯಂತ ಶ್ರೇಷ್ಠವಾದದ್ದು, ಸಂಕಷ್ಟ ಎಂದು ಬಂದವರಿಗೆ ಅಭಯದಾನ ನೀಡಬೇಕು. ಭಯ ಪಡುವವರಿಗೆ ಧೈರ್ಯ ತುಂಬುವ ಕೆಲಸ ಮಾಡಬೇಕು. ಜನರು ಎಂತಹದ್ದೇ ಕಷ್ಟ ಬರಲಿ ದಿಟ್ಟತನದಿಂದ ಎದುರಿಸಿ ಜೀವನ ನಡೆಸಬೇಕು. ಜನರು ನಾನಾ ಸಮಸ್ಯೆಗಳನ್ನು ಹೊತ್ತು ಧರ್ಮಸ್ಥಳಕ್ಕೆ ಬರುತ್ತಾರೆ. ಧರ್ಮಸ್ಥಳ ಮಂಜುನಾಥ ಸ್ವಾಮಿಯ ಆಶೀರ್ವಾದವಿದೆ ಎಂಬ ಅಭಯ ನೀಡಿ ಅವರು ಸಮಸ್ಯೆಗಳನ್ನು ದಿಟ್ಟವಾಗಿ ಎದುರಿಸುವಂತೆ ಮಾಡಲಾಗುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಾಕಷ್ಟು ಯೋಜನೆಗಳನ್ನು ಬಳಸಿಕೊಂಡು ಅಭಿವೃದ್ಧಿ ಹೊಂದಬೇಕು. ಮನುಷ್ಯನಲ್ಲಿ ಸಾಧಿಸುವ ಛಲ ಇದ್ದರೆ ಬಡತನ ಹತ್ತಿರವೂ ಸುಳಿಯುವುದಿಲ್ಲ ಎಂದು ತಿಳಿಸಿದರು.

ರಾಜ್ಯದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಗೆ 50 ಲಕ್ಷ ಸದಸ್ಯರಿದ್ದಾರೆ. ಜನರ ಸಮಸ್ಯೆಗಳನ್ನು ಬಗೆಹರಿಸಲು ಆರ್ಥಿಕ ಸಹಾಯ ಮಾಡುವುದು ಸಂಸ್ಥೆಯ ಉದ್ದೇಶವಾಗಿದೆ. ಮಂಡ್ಯ ಜಿಲ್ಲೆ ರಾಜ್ಯದಲ್ಲೇ ಉತ್ತಮ ಸಾಧನೆ ಮಾಡಿದೆ. ಜಿಲ್ಲೆಯಲ್ಲಿ 2,40,000 ಸದಸ್ಯರಿದ್ದು, 94 ಕೋಟಿ ರೂ. ಹಣ ಉಳಿತಾಯ ಮಾಡಿದ್ದಾರೆ. ಪಾಂಡವಪುರ ತಾಲೂಕಿನಲ್ಲೂ 12 ಕೋಟಿಯಷ್ಟು ಹಣ ಉಳಿತಾಯ ಮಾಡಿದ್ದಾರೆ. ಜನರು ಸಾಲವನ್ನು ಸರಿಯಾಗಿ ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಸಬಲರಾಗಬೇಕು ಎಂದರು.



ಚಿತ್ರಗಳು: ನಾಗಸುಂದರ್

ಕೆರೆಗಳ ಅಭಿವೃದ್ಧಿಗೆ ಪೂಜ್ಯರ ಕೊಡುಗೆ ಅಪಾರ: ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ರಾಜ್ಯದ ಅನೇಕ ಕೆರೆಗಳ ಅಭಿವೃದ್ಧಿಗೆ ಡಾ.ವೀರೇಂದ್ರ ಹೆಗ್ಗಡೆಯವರು ಶ್ರಮಿಸುತ್ತಿದ್ದಾರೆ. ಶ್ರೀಗಳ ಮಾರ್ಗದರ್ಶನದಲ್ಲಿ ತಾಲೂಕಿನ ಎಲ್ಲಾ ಕೆರೆಗಳ ಅಭಿವೃದ್ಧಿಗೆ ಮುಂದಾಗಲಾಗುವುದು. ಮೊದಲಿಗೆ ಸಾಕಷ್ಟು ವರ್ಷಗಳ ಕಾಲ ನೆನೆಗುದಿಗೆ ಬಿದ್ದಿದ್ದ ಹೊನಗನಹಳ್ಳಿ ಕೆರೆಯನ್ನು ಬಹಳ ಸುಂದರವಾಗಿ ಅಭಿವೃದ್ಧಿ ಪಡಿಸಲಾಗಿದೆ. ಸುಂಕತೊಣ್ಣೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೆರೆಗಳ ಅಭಿವೃದ್ಧಿ ಪಡಿಸಲಾಗಿದೆ. ಮುಂದೆ ತಾಲೂಕಿನ ಎಲ್ಲಾ ಕೆರೆಗಳ ಅಭಿವೃದ್ಧಿಯನ್ನು ಶ್ರೀಗಳ ಸಹಕಾರದಲ್ಲಿ ಮಾಡಲಾಗುವುದು ಎಂದರು.

ಕಳೆದ 16 ವರ್ಷಗಳ ಹಿಂದೆ ಬೇಬಿ ಬೆಟ್ಟದಲ್ಲಿ ನಡೆದ ಸರಳ ಸಾಮೂಹಿಕ ವಿವಾಹ ಕಾರ್ಯಕ್ರಮಕ್ಕೆ ಬಂದು ಆಶೀರ್ವದಿಸಿ ಹೋಗಿದ್ದರು. ಅಂದಿನಿಂದ ಇಂದಿನ ವರೆಗೂ ಸರಳ ಸಾಮೂಹಿಕ ಕಾರ್ಯಕ್ರಮವನ್ನು ಅತ್ಯುತ್ತಮವಾಗಿ ನಡೆಸಿಕೊಂಡು ಬರಲಾಗುತ್ತಿದೆ. ಹೆಣ್ಣು ಮಕ್ಕಳು ತಮ್ಮ ಭವಿಷ್ಯ ರೂಪಿಸಿಕೊಳ್ಳಲು ಶ್ರೀ ಕ್ಷೇತ್ರದ ಕೊಡುಗೆ ಅಪಾರವಾಗಿದೆ ಎಂದು ಹೇಳಿದರು. ವೇದಿಕೆಯಲ್ಲಿ ಸಿ.ಎಸ್.ಪುಟ್ಟರಾಜು ಧರ್ಮಪತ್ನಿ, ಜಿ.ಪಂ. ಮಾಜಿ ಸದಸ್ಯೆ ನಾಗಮ್ಮ ಪುಟ್ಟರಾಜು, ಯೂನಿಯನ್ ಬ್ಯಾಂಕ್‌ನ ಡಿಜಿಎಂ ಜ್ಯೋತಿ ಕೃಷ್ಣನ್, ಧರ್ಮಸ್ಥಳ ಯೋಜನಾ ಸಂಸ್ಥೆಯ ಪ್ರಾದೇಶಿಕ ನಿರ್ದೇಶಕ ಪಿ.ಗಂಗಾಧರ ಪೈ ಉಪಸ್ಥಿತರಿದ್ದರು.

ಸಾಂಸ್ಕೃತಿಕ ತಂಡದೊಂದಿಗೆ ಮೆರವಣಿಗೆ: ಧರ್ಮಸ್ಥಳ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರನ್ನು ವೇದಿಕೆಗೆ ಕಲಾ ಸಾಂಸ್ಕೃತಿಕ ತಂಡಗಳ ಮೆರವಣಿಗೆಯೊಂದಿಗೆ ಕರೆತರಲಾಯಿತು. 5 ಸಾವಿರಕ್ಕೂ ಹೆಚ್ಚು ಮಂದಿಗೆ ಹೋಳಿಗೆ ಊಟವನ್ನು ಮಾಡಲಾಗಿತ್ತು. ಶಾಸಕ ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ಬಹಳ ಅಚ್ಚುಕಟ್ಟಾಗಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಜಿಂಕೆ ಬೇಟೆಯಾಡಿದ ಇಬ್ಬರ ಬಂಧನ



ಕುಶಾಲನಗರ, ಏ.1– ಉತ್ತರ ಕೊಡಗಿನ ಸೋಮವಾರಪೇಟೆ ವಲಯದ ಜೇನುಕೊಲ್ಲಿ ಬೆಟ್ಟ ಮೀಸಲು ಅರಣ್ಯ ಪ್ರದೇಶದಲ್ಲಿ ಜಿಂಕೆ ಬೇಟೆಯಾಡಿದ ಇಬ್ಬರು ಆರೋಪಿಗಳನ್ನು ಗುರುವಾರ ಅರಣ್ಯ ಇಲಾಖೆ ಸಿಬ್ಬಂದಿ ಬಂಧಿಸಿದ್ದಾರೆ.

ತಾಲೂಕಿನ ಹೊಸಹಳ್ಳಿ ಗ್ರಾಮದ ಕಾವೇರಪ್ಪ ಅಲಿಯಾಸ್ ತಮ್ಮು, ಎಂ.ಟಿ.ಹರೀಶ್ ಬಂಧಿತರಾಗಿದ್ದು, ಇವರಿಂದ ಜಿಂಕೆ ಚರ್ಮ, ಹತ್ತು ಕೆಜಿ ಮಾಂಸ, ಎರಡು ಒಂಟಿನಳಿಕೆ ಕೋವಿ ಹಾಗೂ ಆಟೋ ರಿಕ್ಷಾವನ್ನು ವಶಪಡಿಸಿಕೊಳ್ಳಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದ ಡಿ.ಇ.ಪ್ರವೀಣ್, ಕೆ.ಆರ್.ಕೃಷ್ಣಪ್ಪ, ಪ್ರೀತು ಆಲಿಯಾಸ್ ಪ್ರೇಮನಾಥ್, ಮೋನಿಸ್ ಆಲಿಯಾಸ್ ಮೋನಿ ಸೇರಿದಂತೆ ನಾಲ್ವರು ಆರೋಪಿ ಗಳು ಪರಾರಿಯಾಗಿದ್ದು, ಅವರ ಪತ್ತೆಗೆ ಅಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ.

ಸೋಮವಾರಪೇಟೆ ಉಪ ವಿಭಾಗ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನೆಹರೂ ಮಾರ್ಗದರ್ಶನದಲ್ಲಿ ವಲಯ ಅರಣ್ಯಾಧಿಕಾರಿ ಶಮಾ ಮತ್ತು ಹೆಬ್ಬಾಲೆ ವಲಯದ ಉಪ ವಲಯ ಅರಣ್ಯಾಧಿಕಾರಿ ಎಂ.ಕೆ. ಭರತ್ ನೇತೃತ್ವದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಜಿಂಕೆ ಬೇಟೆಯಾಡಿದ ಆರೋಪಿಗಳನ್ನು ಮಾಲು ಸಮೇತ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬಂಧಿತ ಆರೋಪಿಗಳ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ.

ಕಾರ್ಯಾಚರಣೆಯಲ್ಲಿ ಅರಣ್ಯ ರಕ್ಷಕರಾದ ಎಂ.ಕೆ. ಮನು, ರಾಜಣ್ಣ, ಭೀಮಣ್ಣ, ಲೋಕೇಶ್, ಕಾವಲುಗಾರ ರಾದ ರಾಜಪ್ಪ, ದಿವಾಕರ್, ಸಿಬ್ಬಂದಿಗಳಾದ ದೀಕ್ಷಿತ್, ಹರ್ಷಿತ್, ರಕ್ಷಿತ್ ಪಾಲ್ಗೊಂಡಿದ್ದರು.

ಆನೆ ದಂತ ಮಾರಲು ಯತ್ನ; ಮೂವರ ಬಂಧನ





ಮಡಿಕೇರಿ, ಏ.1– ಅಕ್ರಮವಾಗಿ 2 ಆನೆ ದಂತಗಳನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ 3 ಮಂದಿ ಆರೋಪಿಗಳನ್ನು ಮಡಿಕೇರಿಯ ಸಿಐಡಿ ಪೊಲೀಸ್ ಅರಣ್ಯ ಘಟಕದ ಪೊಲೀಸರು ಬಂಧಿಸಿದ್ದಾರೆ. ವುಜೈರ್ ಅಹಮದ್, ನಯಾಜುದ್ದೀನ್ ಖಾನ್ ಮತ್ತು ಅಶ್ರಫ್ ಎಂ.ಎ. ಬಂಧಿತ ಆರೋಪಿಗಳಾಗಿದ್ದಾರೆ.

ಗುಡ್ಡೆಹೊಸೂರು ಹಾರಂಗಿ ರಸ್ತೆಯ ಬೊಳ್ಳೂರಿನಿಂದ ಮಾದಾಪಟ್ಟಣ ಕಡೆಗೆ ತೆರಳುವ ರಸ್ತೆಯ ಜಂಕ್ಷನ್ ಬಳಿ 3 ಮಂದಿ ಆನೆ ದಂತವನ್ನು ಮಾರಾಟ ಮಾಡಲು ಯತ್ನಿಸುತ್ತಿರುವ ಬಗ್ಗೆ ಮಡಿಕೇರಿಯ ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ಘಟಕಕ್ಕೆ ಖಚಿತ ಮಾಹಿತಿ ಲಭಿಸಿತ್ತು. ಈ ಮಾಹಿತಿ ಆಧರಿಸಿ ದಾಳಿ ನಡೆಸಿದ ಸಂದರ್ಭ ಆರೋಪಿಗಳು ಸೆರೆ ಸಿಕ್ಕಿದ್ದಾರೆ. ಆರೋಪಿಗಳ ವಿರುದ್ಧ ವನ್ಯ ಜೀವಿ ಸಂರಕ್ಷಣಾ ಕಾಯಿದೆ ಅಡಿ ಪ್ರಕರಣ ದಾಖಲಿಸಲಾಗಿದೆ. ಕೃತ್ಯಕ್ಕೆ ಬಳಸಿದ್ದ ಒಂದು ದ್ವಿಚಕ್ರ ವಾಹನ ಸಹಿತ 2 ಆನೆ ದಂತಗಳನ್ನು ವಶಕ್ಕೆ ಪಡೆಯಲಾಗಿದ್ದು, ಆರೋಪಿಗಳ ವಿರುದ್ಧ ತನಿಖೆ ಮುಂದುವರೆದಿದೆ ಎಂದು ಅರಣ್ಯ ಸಂಚಾರಿ ದಳ ತಿಳಿಸಿದೆ.

ಸಿ.ಐ.ಡಿ ಪೊಲೀಸ್ ಅರಣ್ಯ ಘಟಕದ ಪೊಲೀಸ್ ಮಹಾ ನಿರೀಕ್ಷಕ ಕೆ.ವಿ.ಶರತ್‌ಚಂದ್ರ ನಿರ್ದೇಶನದ ಮೇರೆಗೆ ಮಡಿಕೇರಿ ಸಿ.ಐ.ಡಿ ಪೊಲೀಸ್ ಅಧೀಕ್ಷಕ ಚಂದ್ರಕಾಂತ್ ಮಾರ್ಗದರ್ಶನದಲ್ಲಿ ಪಿಎಸ್‌ಐ ಸಿ.ಯು. ಸವಿ, ಸಿಬ್ಬಂದಿಗಳಾದ ಶೇಖರ್, ರಾಜೇಶ್, ರಾಘವೇಂದ್ರ, ಯೋಗೇಶ್, ಮೋಹನ, ಸ್ವಾಮಿ ಮತ್ತು ಮಂಜುನಾಥ್, ದೇವಯ್ಯ, ನಂದ ಅವರುಗಳು ಕಾರ್ಯಾಚರಣೆ ನಡೆಸಿದ್ದಾರೆ.

ಬೆಂಡೆಬೆಟ್ಟ ಗಿರಿಜನ ಹಾಡಿಯಲ್ಲಿ ಸಿದ್ದಗಂಗಾ ಶ್ರೀಗಳ ಜಯಂತಿ

ಹಾಡಿ ನಿವಾಸಿಗಳನ್ನು ಸಿದ್ಧಗಂಗಾ ದರ್ಶನಕ್ಕೆ ಕರೆದೊಯ್ಯಲು ಕ್ರಮ: ತಹಸೀಲ್ದಾರ್ ಪ್ರಕಾಶ್



ಕುಶಾಲನಗರ, ಏ.1– ತಾಲೂಕಿನ ಬೆಂಡೆಬೆಟ್ಟ ಆದಿವಾಸಿ ಗಿರಿಜನ ಕಾಲೋನಿಗೆ ಹೋಗಿ ಅವರ ಸಮಸ್ಯೆ ಆಲಿಸುವ ಮೂಲಕ ತ್ರಿವಿಧ ದಾಸೋಹಿ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಜನ್ಮ ದಿನವನ್ನು ವಿಶಿಷ್ಟವಾಗಿ ಶುಕ್ರವಾರ ಆಚರಣೆ ಮಾಡಲಾಯಿತು.

ಪಟ್ಟಣದ ಸಿದ್ಧಗಂಗಾ ಶ್ರೀ ಭಕ್ತ ಮಂಡಳಿ ವತಿಯಿಂದ ಬೆಂಡಬೆಟ್ಟ ಹಾಡಿ ಯಲ್ಲಿ ಲಿಂಗೈಕ್ಯ ಶ್ರೀ ಶಿವಕುಮಾರ ಸ್ವಾಮೀಜಿ ಜನ್ಮದಿನ ಆಚರಿಸಿದ್ದು, ತಾಲೂಕು ಆಡಳಿತದ ವಿವಿಧ ಅಧಿಕಾರಿಗಳನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿತ್ತು. ಆ ಮೂಲಕ ಹಾಡಿ ಜನರ ಸಮಸ್ಯೆ ಆಲಿಸಲು ತಾಲೂಕು ಆಡಳಿತವೇ ಹಾಡಿಗೆ ಬಂದಂತಾಗಿತ್ತು. ಶಿವಕುಮಾರ ಸ್ವಾಮೀಜಿಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದ ತಹಸೀಲ್ದಾರ್ ಟಿ ಎಂ ಪ್ರಕಾಶ್ ಕಾರ್ಯಕ್ಕೆ ಚಾಲನೆ ನೀಡಿದರು. ಬೆಂಡಬೆಟ್ಟ ಹಾಡಿಯ ಜನರು ತಮ್ಮ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸಬೇಕು ಎಂದು ಸಲಹೆ ನೀಡಿದರು. ಜೊತೆಗೆ ತಾಲೂಕು ಆಡಳಿತದಿಂದ ಹಾಡಿಯ ಜನರನ್ನು ಉಚಿತವಾಗಿ ಸಿದ್ಧಗಂಗಾ ಮಠಕ್ಕೆ ಕರೆದೊಯ್ಯಲಾಗುವುದು. ಆ ಮೂಲಕ ಪೋಷಕರು ಮತ್ತವರ ಮಕ್ಕಳಿಗೆ ಶಿಕ್ಷಣದ ಅರಿವು ಮೂಡಿಸಿ ಆ ವಿದ್ಯಾರ್ಥಿಗಳನ್ನು ಸಿದ್ಧಗಂಗಾ ಮಠಕ್ಕೆ ಸೇರಿಸಲಾಗುವುದು ಎಂದು ಹೇಳಿದರು.

ಅರಣ್ಯ ಇಲಾಖೆಯಿಂದ ಗಿರಿಜನರಿಗೆ ಸಿಗುವ ವಿವಿಧ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಆರ್‌ಎಫ್‌ಓ ಶಿವರಾಂ ಭರವಸೆ ನೀಡಿದರು. ಸಿದ್ಧಗಂಗಾ ಭಕ್ತ ಮಂಡಳಿ ಅಧ್ಯಕ್ಷ ಕೆ ಎಸ್ ಮೂರ್ತಿ ಮಾತನಾಡಿ, ಶಿವಕುಮಾರ ಸ್ವಾಮೀಜಿ ಅವರ ತತ್ವ, ಆದರ್ಶಗಳು ಇಂತಹ ಕಟ್ಟ ಕಡೆಯ ಜನರಿಗೂ ತಲುಪಬೇಕು. ಈ ಉದ್ದೇಶದಿಂದಲೇ ಇಲ್ಲಿ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ ಎಂದರು.

ಹೆಬ್ಬಾಲೆ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಮೆ.ನಾ.ವೆಂಕಟನಾಯಕ್ ಡಾ. ಶಿವಕುಮಾರಸ್ವಾಮೀಜಿ ಕುರಿತಾಗಿ ಮಾತನಾಡಿ, ರಾಜ್ಯದಲ್ಲಿ ಏನಾದರೂ ಪ್ರಜ್ಞಾವಂತ ಸಮುದಾಯ ಉಳಿದಿದ್ದರೆ ಅದು ಸಿದ್ಧಗಂಗಾ ಶ್ರೀಗಳ ಕೊಡುಗೆ. ಜ್ಞಾನವಂತರು, ಶಿಕ್ಷಣವಂತರು ಹಾಗೂ ವಿದ್ಯಾವಂತರ ಸಮಾಜ ನಾಡು ಕಟ್ಟಲು ತ್ರಿವಿಧ ದಾಸೋಹದಂತಹ ಮಹತ್ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದ ಡಾ.ಶಿವಕುಮಾರ ಶ್ರೀಗಳು ಜೋಳಿಗೆ ಹಿಡಿದು ನಾಡನ್ನು ಸುತ್ತಿ ತಂದಂತಹ ಧಾನ್ಯದಲ್ಲಿ ಮಠದಲ್ಲಿನ ಹತ್ತಾರು ಸಾವಿರ ಮಕ್ಕಳಿಗೆ ನಿತ್ಯವೂ ಅನ್ನದಾನ ನಡೆಯುತ್ತಿದೆ. ರಾಜಕಾರಣಿಗಳು ಹಾಗೂ ಚುನಾಯಿತ ಜನಪ್ರತಿನಿಧಿಗಳಿಗೆ ಸಂಸ್ಕಾರ ಹಾಗೂ ಆಡಳಿತದ ನೀತಿ ಪಾಠ ಹೇಳುತ್ತಿದ್ದ ಶ್ರೀಗಳ ಬಳಿ ದೇಶ ಹಾಗೂ ರಾಜ್ಯದ ರಾಜಕಾರಣಿಗಳ ಸಮೂಹವೇ ಧಾವಿಸುತ್ತಿತ್ತು ಎಂದರು.

ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಕೆ.ಪಿ. ಚಂದ್ರಕಲಾ ಮಾತನಾಡಿ, ಗಿರಿಜನ ವಾಸಿಗಳು ಹಾಗೂ ಮಕ್ಕಳನ್ನು ಸಿದ್ಧಗಂಗಾ ಕ್ಷೇತ್ರಕ್ಕೆ ಕರೆದೊಯ್ಯಲು ತಾಲೂಕು ಆಡಳಿತಕ್ಕೆ ಮನವಿ ಮಾಡಿದರು.

ಕುಶಾಲನಗರ ಪಟ್ಟಣ ಪಂಚಾಯಿತಿ ಅಧ್ಯಕ್ಷ ಬಿ.ಜೈವರ್ಧನ್, ಅರಣ್ಯ ಇಲಾಖೆ ಸಹಾಯಕ ಅಧಿಕಾರಿ ಅನಿಲ್, ಪ್ರಗತಿಪರ ಕೃಷಿಕ ಅತ್ತೂರಿನ ಜರ್ಮಿ ಡಿಸೋಜಾ, ರಾಮಕೃಷ್ಣ, ಕೂಡ್ಲೂರು ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕ ಟಿ.ಜಿ.ಪ್ರೇಮಕುಮಾರ, ನಂಜರಾಯಪಟ್ಟಣ ಶಾಲಾ ಶಿಕ್ಷಕ ಎಸ್. ನಾಗರಾಜು, ಹೆಬ್ಬಾಲೆ ಶಾಲೆಯ ಶಿಕ್ಷಕ ಲೋಕೇಶ್, ಕೂಡುಮಂಗಳೂರು ಗ್ರಾಮ ಪಂಚಾಯಿತಿ ಸದಸ್ಯೆ ಪಾರ್ವತಮ್ಮ, ಪಂಚಾಯಿತಿ ಪಿಡಿಒ ಸಂತೋಷ್, ಪುರುಷೋತ್ತಮ, ಬೆಂಡೆಬೆಟ್ಟ ಹಾಡಿಯ ಅಧ್ಯಕ್ಷ ಹರೀಶ್, ತಮ್ಮಯ್ಯ, ರವಿ, ಕೀರ್ತನಾ, ಮಣಿ, ಶಾಂತಿ, ಮುತ್ತ, ಉದಯ, ಶಿವಮಣಿ ಉಪಸ್ಥಿತರಿದ್ದರು.

ಇಂದು ಪೊಲೀಸ್ ಧ್ವಜ ದಿನಾಚರಣೆ

ಮಡಿಕೇರಿ, ಏ.1– ಕರ್ನಾಟಕ ರಾಜ್ಯ ಪೊಲೀಸ್, ಕೊಡಗು ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಏ.2 ರಂದು ಬೆಳಗ್ಗೆ 8.30 ಗಂಟೆಗೆ ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಧ್ವಜ ದಿನಾಚರಣೆ ಹಾಗೂ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಟ್ರೋಫಿ ವಿತರಣಾ ಕಾರ್ಯಕ್ರಮ ನಡೆಯಲಿದೆ. ನಿವೃತ್ತ ಮಹಿಳಾ ಎ.ಎಸ್.ಐ ಮೇರಿ ಇಮಾಕ್ಯುಲೇಟ್ ಎ., ನಿವೃತ್ತ ಏರ್ ಮಾರ್ಷಲ್ ಕೆ.ಸಿ.ಕಾರ್ಯಪ್ಪ, ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಎಂ.ಎ.ಅಯ್ಯಪ್ಪ ಇತರರು ಪಾಲ್ಗೊಳ್ಳಲಿದ್ದಾರೆ.

ಕೊಳ್ಳೇಗಾಲ ಬಳಿ ಶೀಲ ಶಂಕಿಸಿ ಪತ್ನಿ ಹತ್ಯೆಗೈದ ಪತಿ

ಮಕ್ಕಳ ಮುಂದೆಯೇ ಹೆಂಡತಿ ಉಸಿರುಗಟ್ಟಿಸಿ ಕೊಂದ ಪತಿರಾಯನ ಬಂಧನ



ಚಿನ್ನಮ್ಮ



ಕುಮಾರ್

ಕೊಳ್ಳೇಗಾಲ, ಏ.1(ಎನ್.ನಾಗೇಂದ್ರ ಸ್ವಾಮಿ)– ಪತಿಯೋರ್ವ ಪತ್ನಿ ಶೀಲ ಶಂಕಿಸಿ ಆಕೆ ಮಲಗಿದ್ದ ವೇಳೆ ಮಕ್ಕಳ ಎದುರೇ ಆಕೆಯನ್ನು ಉಸಿರುಗಟ್ಟಿಸಿ ಹತ್ಯೆಗೈದಿರುವ ಘಟನೆ ತಾಲೂಕಿನ ಮುಡಿಗುಂಡ ಗ್ರಾಮದ ನಾಯಕರ ಬೀದಿಯಲ್ಲಿ ಶುಕ್ರವಾರ ಮುಂಜಾನೆ ನಡೆದಿದೆ.

ಗ್ರಾಮದ ನಿವಾಸಿ ಕುಮಾರ ಎಂಬಾತನೇ ತನ್ನ ಪತ್ನಿ ಚಿನ್ನಮ್ಮ(30) ಎಂಬಾಕೆಯನ್ನು ಹತ್ಯೆಗೈದವನಾಗಿದ್ದು, ಆತನನ್ನೂ ಬಂಧಿಸಿದ್ದಾರೆ. ಮುಳ್ಳೂರು ಗ್ರಾಮದ ಚಿನ್ನಮ್ಮ ಅವರನ್ನು ಕಳೆದ 10 ವರ್ಷಗಳ ಹಿಂದೆ ಮುಡಿಗುಂಡ ಗ್ರಾಮದ ನಿವಾಸಿ ಕೊಪ್ಪಾಳಿ ನಾಯಕ ಅವರ ಪುತ್ರ ಕುಮಾರ ಎಂಬಾತನೊಂದಿಗೆ ವಿವಾಹ ಮಾಡಿಕೊಡಲಾಗಿತ್ತು. ಈ ದಂಪತಿಗೆ 7 ವರ್ಷದ ದರ್ಶನ ಹಾಗೂ 4 ವರ್ಷದ ದರ್ಶಿನಿ ಎಂಬ ಇಬ್ಬರು ಮಕ್ಕಳಿದ್ದರು. ಪತ್ನಿಯನ್ನು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದ ಕುಮಾರ ಇತ್ತೀಚೆಗೆ ಪತ್ನಿ ಚಿನ್ನಮ್ಮಳ ಶೀಲದ ಬಗ್ಗೆ ಅನುಮಾನಪಟ್ಟು ಆಗಾಗ್ಗೆ ಕುಡಿದು ಬಂದು ಜಗಳ ಮಾಡುತ್ತಿದ್ದ ಎನ್ನಲಾಗಿದೆ.

ಈ ಸಂಬಂಧ ಮುಳ್ಳೂರು, ಮುಡಿಗುಂಡ ಗ್ರಾಮದ ಯಜಮಾನರ ನೇತೃತ್ವದಲ್ಲಿ ಸುಮಾರು ಐದಾರು ಬಾರಿ ನ್ಯಾಯ ಪಂಚಾಯ್ತಿ ನಡೆದು ಬುದ್ದಿವಾದ ಹೇಳಿದ್ದರು. ಆದರೂ ತನ್ನ ಚಾಳಿ ಬಿಡದ ಕುಮಾರ ತನ್ನ ಪತ್ನಿಗೆ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡುವುದನ್ನು ಮುಂದುವರೆಸಿದ್ದ. ಇದರಿಂದ ಮನನೊಂದ ಚಿನ್ನಮ್ಮ ಗಂಡನ ಮನೆ ತೊರೆದು ಮಕ್ಕಳೊಂದಿಗೆ ತನ್ನ ತವರು ಮನೆ ಸೇರಿದ್ದಳು ಎನ್ನಲಾಗಿದೆ.

ಈ ಮಧ್ಯೆ ಮಾ.31ರಂದು ಮುಳ್ಳೂರಿಗೆ ತೆರಳಿದ್ದ ಕುಮಾರ, ನಾನು ಇನ್ನು ಮುಂದೆ ನನ್ನ ಪತ್ನಿ, ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ. ನಾಳೆ ಯುಗಾದಿ ಹಬ್ಬವಿದೆ ಎಲ್ಲವನ್ನೂ ಮರೆತು ನೆಮ್ಮದಿಯಾಗಿ ಒಟ್ಟಾಗಿ ಬಾಳುತ್ತೇವೆ ಎಂದು ಚಿನ್ನಮ್ಮಳ ಮನೆಯವರ ಮನವೊಲಿಸಿ, ಮುಡಿಗುಂಡಕ್ಕೆ ಕರೆದೊಯ್ದಿದ್ದ. ಆದರೂ ಗುರುವಾರ ರಾತ್ರಿ ಮತ್ತೆ ಪತ್ನಿ ಚಿನ್ನಮ್ಮಳ ಜೊತೆ ಜಗಳ ತೆಗೆದು, ಹಲ್ಲೆ ನಡೆಸಿದ ಕುಮಾರ ತನ್ನ ಮಕ್ಕಳ ಎದುರೇ ಆಕೆಯ ಕತ್ತು ಹಿಸುಕಿ ಹತ್ಯೆಗೈದಿದ್ದಾನೆ. ಈ ದೃಶ್ಯ ಕಂಡ ಮಗ ದರ್ಶನ್ ಜೋರಾಗಿ ಕೂಗಿಕೊಂಡಾಗ ಕುಮಾರ ಮಗನನ್ನು ಮತ್ತೊಂದು ರೂಂಗೆ ಕೂಡಿ ಹಾಕಿದ್ದಾನೆ ಎನ್ನಲಾಗಿದೆ.

ಶುಕ್ರವಾರ ಮುಂಜಾನೆ ತನ್ನ ಸೋದರ ಮಾವ ಭೈರನಾಯಕನಿಗೆ ಕರೆ ಮಾಡಿದ ಚಿನ್ನಮ್ಮಳ ಪುತ್ರ ದರ್ಶನ್ ನಡೆದ ವಿಚಾರವನ್ನೆಲ್ಲಾ ತಿಳಿಸಿ ಬೇಗ ಬರುವಂತೆ ತಿಳಿಸಿದ್ದಾನೆ. ವಿಷಯ ತಿಳಿದು ಸ್ಥಳಕ್ಕಾಗಮಿಸುವಷ್ಟರಲ್ಲಿ ಚಿನ್ನಮ್ಮ ಪ್ರಜ್ಞಾಹೀನಳಾಗಿ ಬಿದ್ದಿದ್ದಳು. ತಕ್ಷಣ ಆಕೆಯನ್ನು ಚಿಕಿತ್ಸೆಗಾಗಿ ಸ್ಥಳೀಯ ಆಸ್ಪತ್ರೆಗೆ ಕರೆದೊಯ್ದರಾದರೂ, ಅಷ್ಟರಲ್ಲಿ ಆಕೆ ಮೃತಪಟ್ಟಿದ್ದಳು. ಈ ಸಂಬಂಧ ಮೃತಳ ಸಹೋದರ ಭೈರನಾಯಕ ನನ್ನ ಅಕ್ಕನ ಸಾವಿಗೆ ಕಾರಣನಾದ ಆಕೆಯ ಗಂಡ ಕುಮಾರನನ್ನು ಬಂಧಿಸಿ, ಆತನಿಗೆ ಶಿಕ್ಷೆ ನೀಡುವಂತೆ ಕೊಳ್ಳೇಗಾಲ ಪೊಲೀಸರಿಗೆ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಯನ್ನು ಬಂಧಿಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.

ಇಂದು ನಗರದಲ್ಲಿ ಪೊಲೀಸ್ ಧ್ವಜ ದಿನಾಚರಣೆ

ಚಾಮರಾಜನಗರ, ಏ.1– ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಏ.2ರಂದು ಬೆಳಗ್ಗೆ 8.30ಕ್ಕೆ ಪೊಲೀಸ್ ಧ್ವಜ ದಿನಾಚರಣೆ ಏರ್ಪಡಿಸಲಾಗಿದೆ. ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ತೆರಕಣಾಂಬಿ ಪೊಲೀಸ್ ಠಾಣೆ ನಿವೃತ್ತ ಎಸ್‌ಐ ಸಿ.ಎಸ್.ನಟರಾಜು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

'ಪರೀಕ್ಷಾ ಪೇ ಚರ್ಚಾ' ಸಂವಾದ ವೀಕ್ಷಿಸಿದ ವಿದ್ಯಾರ್ಥಿಗಳು






ಚಾಮರಾಜನಗರ, ಏ.1– ನವದೆಹಲಿಯ ತಾಳ್ಕಟೋರ ಕ್ರೀಡಾಂಗಣದಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ವಿದ್ಯಾರ್ಥಿಗಳೊಂದಿಗೆ ನಡೆಸಿದ ಪರೀಕ್ಷಾ ಪೇ ಚರ್ಚಾ ನೇರ ಸಂವಾದ ಪ್ರಸಾರ ಕಾರ್ಯಕ್ರಮವನ್ನು ಜಿಲ್ಲೆಯ ಹೊಂಡರಬಾಳುವಿನ ಜವಹಾರ್ ನವೋದಯ ವಿದ್ಯಾಲಯ, ಮಾದಾಪುರದ ಕೇಂದ್ರೀಯ ವಿದ್ಯಾಲಯ ಸೇರಿದಂತೆ ಇತರೆಡೆ ವಿದ್ಯಾರ್ಥಿಗಳು ವೀಕ್ಷಿಸಿದರು.

ವಿದ್ಯಾರ್ಥಿಗಳಲ್ಲಿ ಕಲಿಕಾ ಭಯ ಹೋಗಲಾಡಿಸಲು ಹಾಗೂ ಪರೀಕ್ಷಾ ಆತಂಕ ದೂರ ಮಾಡಿ ಒತ್ತಡ ರಹಿತ ವಾತಾವರಣ ನಿರ್ಮಿಸಲು ಪೂರಕವಾದ ನೇರ ಸಂವಾದದ ಪ್ರಸಾರವನ್ನು ಹೊಂಡರಬಾಳುವಿನಲ್ಲಿರುವ ಜವಾಹರ್ ನವೋದಯ ವಿದ್ಯಾಲಯದ ಸಭಾಂಗಣದಲ್ಲಿ ವಿದ್ಯಾರ್ಥಿಗಳು ಆಸಕ್ತಿಯಿಂದ ವೀಕ್ಷಿಸಿದರು.

ಸಂವಾದದ ಪ್ರಸಾರ ವೀಕ್ಷಣೆಗೆ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಲಾಗಿತ್ತು. ವಿದ್ಯಾರ್ಥಿಗಳು ಶಿಸ್ತುಬದ್ಧವಾಗಿ ಕುಳಿತು ಕಾರ್ಯಕ್ರಮ ವೀಕ್ಷಿಸಿದರು. ನಗರದ ಬಳಿಯಿರುವ ಮಾದಾಪುರದ ಕೇಂದ್ರೀಯ ವಿದ್ಯಾಲಯದಲ್ಲಿಯೂ ಪರೀಕ್ಷಾ ಪೇ ಚರ್ಚಾ ಕಾರ್ಯಕ್ರಮ ಪ್ರಸಾರವನ್ನು ವಿದ್ಯಾರ್ಥಿಗಳು ವೀಕ್ಷಿಸಲು ಸಕಲ ವ್ಯವಸ್ಥೆ ಮಾಡಲಾಗಿತ್ತು. 6 ರಿಂದ 11 ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಸೆಮಿನಾರ್ ಹಾಲ್‌ನಲ್ಲಿ ಹಾಗೂ 1 ರಿಂದ 5ನೇ ತರಗತಿ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಲ್ಯಾಬ್‌ನಲ್ಲಿ ಕಾರ್ಯಕ್ರಮ ವೀಕ್ಷಣೆಗೆ ವ್ಯವಸ್ಥೆ ಕೈಗೊಳ್ಳಲಾಗಿತ್ತು. ವಿದ್ಯಾರ್ಥಿಗಳು ಉತ್ಸಾಹದಿಂದ ಸಂವಾದ ಕಾರ್ಯಕ್ರಮವನ್ನು ವೀಕ್ಷಿಸಿದರು.

ಹೊಂಡರಬಾಳುವಿನ ಜವಹಾರ್ ನವೋದಯ ವಿದ್ಯಾಲಯದ ಪ್ರಾಂಶುಪಾಲರಾದ ವಿ. ಪ್ರಸಾದ್, ಮಾದಾಪುರದ ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲರಾದ ನಿರ್ಮಲಾಕುಮಾರಿ, ಶಿಕ್ಷಣ ಅಧಿಕಾರಿಗಳಾದ ಮಂಜುನಾಥ್, ಲಕ್ಷ್ಮೀಪತಿ, ಬೋಧಕರಾದ ಯಲ್ಲಪ್ಪ ಬೈಯಾಪುರ, ಕುರಿಯನ್ ಥಾಮಸ್ ಇತರರಿದ್ದರು.

ಹನೂರಲ್ಲಿ ಬಸವ ಬಳಗದಿಂದ ತ್ರಿವಿಧ ದಾಸೋಹಿ ಜಯಂತಿ



ಹನೂರು, ಏ.1– ತ್ರಿವಿಧ ದಾಸೋಹಿ, ಕರ್ನಾಟಕ ರತ್ನ, ಲಿಂಗೈಕ್ಯ ಶಿವಕುಮಾರ ಸ್ವಾಮೀಜಿ ಅವರ 115ನೇ ಜನ್ಮ ದಿನಾಚರಣೆ ಅಂಗವಾಗಿ ಹನೂರು ಬಸವ ಬಳಗದಿಂದ ಶ್ರೀಗಳ ನಾಮಸ್ಮರಣೆ ಹಾಗೂ ಇನ್ನಿತರೆ ಪೂಜೆ, ಸೇವಾ ಕಾರ್ಯ ನಡೆಸಲಾಯಿತು.

ಪಟ್ಟಣದ ಖಾಸಗಿ ಬಸ್ ನಿಲ್ದಾಣದಲ್ಲಿ ಶ್ರೀಗಳ ಭಾವಚಿತ್ರವನ್ನಿಟ್ಟು ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಪೂಜಾ ಕೈಂಕರ್ಯ ನಡೆಸಲಾಯಿತು. ಈ ವೇಳೆ ನೆರೆದಿದ್ದ ಗಣ್ಯರು ಶ್ರೀಗಳ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಇದೇ ವೇಳೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ತಾಪಂ ಮಾಜಿ ಅಧ್ಯಕ್ಷ ಮುರುಡೇಶ್ವರಸ್ವಾಮಿ ಮಾತನಾಡಿ, ತುಮಕೂರು ಶ್ರೀ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ ಅವರು ಬಸವಣ್ಣನವರ ಕಾಯಕ ತತ್ವವನ್ನು ಚಾಚೂ ತಪ್ಪದೇ ಪಾಲಿಸಿದವರು. ಯಾವುದೇ ಜಾತಿ, ಮತ, ಧರ್ಮ ಎನ್ನದೇ ಅಕ್ಷರ, ಅನ್ನ ದಾಸೋಹ ನಡೆಸಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಹೆಸರುವಾಸಿಯಾದವರು. ಅವರ ತತ್ವಾದರ್ಶ ಅನುಕರಣೀಯ. ಅಂತಹ ಶ್ರೇಷ್ಠ ಸಂತರ ಜನ್ಮ ದಿನವನ್ನು ಆಚರಿಸುತ್ತಿರುವುದು ನಮ್ಮೆಲ್ಲರ ಸೌಭಾಗ್ಯ ಎಂದರು. ಈ ವೇಳೆ ವೀರಶೈವ ಮಹಾಸಭಾ ಜಿಲ್ಲಾ ಯುವ ಘಟಕದ ಸಹ ಕಾರ್ಯದರ್ಶಿ ಭರತ್, ಬಿಜೆಪಿ ಯುವ ಮುಖಂಡ ರವಿ, ಮಂಜು, ಹನೂರು ಬಸವ ಬಳಗದ ಚಂದನ್, ಕಾರ್ತಿಕ್, ಮನೋಹರ್, ನಂದನ್, ಸಾಗರ್, ಶಿವಕುಮಾರ್, ಟೈಲರ್ ಮಹೇಶ್, ಮಹದೇವಪ್ಪ, ಆನಂದ್, ಕೃಷ್ಣ ಕುಮಾರ್, ಸಿದ್ದರಾಜು, ವೆಂಕಟೇಶ್ ವೀರಶೈವ ಲಿಂಗಾಯತ ಸಮುದಾಯದವರು ಸೇರಿದಂತೆ ಇನ್ನಿತರರಿದ್ದರು.

ಆಕ್ಷೇಪಣೆ ಸಲ್ಲಿಕೆಗೆ ಅವಕಾಶ

ಚಾಮರಾಜನಗರ, ಏ.1– ಸಾರ್ವಜನಿಕ ಶಿಕ್ಷಣ ಇಲಾಖೆಯು 2022ರ ಜ.1ರಲ್ಲಿದ್ದಂತೆ ಸರ್ಕಾರಿ ಪ್ರಾಥಮಿಕ ಶಾಲಾ ಸಹಶಿಕ್ಷಕರ ಮತ್ತು ಮುಖ್ಯ ಶಿಕ್ಷಕರ ಜಿಲ್ಲಾ ಮಟ್ಟದ ಜೇಷ್ಠತಾ ಪಟ್ಟಿಯನ್ನು ಅಂತಿಮ ಗೊಳಿಸುವ ಸಂಬಂಧ ಜೇಷ್ಠತಾ ಪಟ್ಟಿ ಸಿದ್ಧಪಡಿಸಿದ್ದು ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಪ್ರಕಟಿಸಿದೆ.

ಶಿಕ್ಷಕರು ತಮ್ಮ ಜೇಷ್ಠತೆಗೆ ಸಂಬಂಧಿಸಿದಂತೆ ವಿವರಗಳನ್ನು ಪರಿಶೀಲಿಸಿಕೊಂಡು ಆಕ್ಷೇಪಣೆಗಳು ಇದ್ದಲ್ಲಿ ಸಮರ್ಥನೀಯ ಪೂರಕ ದಾಖಲೆಗಳೊಂದಿಗೆ ದ್ವಿಪ್ರತಿಯಲ್ಲಿ ಏ.11 ರೊಳಗೆ ನೇರವಾಗಿ ಆಯಾ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗೆ ಸಲ್ಲಿಸುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಸ್ಲಿಂ ವ್ಯಾಪಾರಿಗಳಿಗೆ ಬಹಿಷ್ಕಾರ ವಿರೋಧಿಸಿ

ಎಸ್‌ಡಿಪಿಐ ಪ್ರತಿಭಟನೆ



ಮೈಸೂರು, ಏ.1(ಜಿಎ)– ಟಿಪ್ಪು ಸುಲ್ತಾನ್ ಸಾಧನೆಗಳನ್ನು ಪಠ್ಯ ಪುಸ್ತಕದಿಂದ ಕೈಬಿಡುವುದು, ಮುಸ್ಲಿಂ ವ್ಯಾಪಾರಿಗಳಿಗೆ ಬಹಿಷ್ಕಾರ, ಹಲಾಲ್ ಮಾಂಸ ಬಹಿಷ್ಕಾರ ಹಾಗೂ ವಿರೋಧ ಪಕ್ಷ ವಿಫಲವಾದೆ ಎಂದು ಆರೋಪಿಸಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ನೂರಾರು ಕಾರ್ಯಕರ್ತರು ನಗರದ ಅಶೋಕ ರಸ್ತೆಯ ಆಝಾಮ್ ಮಸೀದಿಯ ಮುಂಭಾಗದ ಮಿಲಾದ್ ಉದ್ಯಾನವನದ ಬಳಿ ರಾಜ್ಯ ಸರ್ಕಾರದ ವಿರುದ್ಧ ವಿವಿಧ ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ರಾಜ್ಯ ಕಾರ್ಯದರ್ಶಿ ನೂರುದ್ದೀನ್ ಶರೀಫ್ ರಾಜ್ಯದಲ್ಲಿ ಅನೇಕ ಕಾರ್ಖಾನೆಗಳು ಮುಚ್ಚಿ ಜನರು ನಿರುದ್ಯೋಗಿಗಳಾಗಿದ್ದಾರೆ. ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲ. ರಾಜ್ಯದ ಬಸವರಾಜ ಬೊಮ್ಮಾಯಿ ಅವರ ಸರ್ಕಾರ ಈ ಸಮಸ್ಯೆಗಳ ಬಗ್ಗೆ ಪ್ರಾಮುಖ್ಯತೆ ನೀಡದೆ ಹಿಜಾಬ್, ಕಾಶ್ಮೀರ್ ಫೈಲ್ಸ್ ಚಿತ್ರಗಳನ್ನು ಇಟ್ಟುಕೊಂಡು ಅಧಿಕಾರ ನಡೆಸುತ್ತಿದೆ ಎಂದ ಆರೋಪಿಸಿದಲ್ಲದೆ. ನಮ್ಮ ಈ ಪ್ರತಿಭಟನೆ ಬಜರಂಗ ದಳ, ಆರ್‌ಎಸ್‌ಎಸ್, ರಾಜ್ಯ ಬಿಜೆಪಿ ಸರ್ಕಾರ ಹಾಗೂ ವಿರೋಧ ಪಕ್ಷಗಳ ವಿರುದ್ಧವೇ ಹೊರತು ಹಿಂದೂಗಳ ವಿರುದ್ಧವಲ್ಲ ಎಂದರು. ರಾಜ್ಯದಲ್ಲಿ 1470ಕ್ಕೂ ಹೆಚ್ಚು ಕಾರ್ಖಾನೆಗಳು ಮುಚ್ಚಿವೆ. ಅಲ್ಲಿ ಕೆಲಸ ಮಾಡುತ್ತಿದ್ದ, 4500ಕ್ಕೂ ಹೆಚ್ಚು ಕಾರ್ಮಿಕರು ಬೀದಿ ಪಾಲಾಗಿದ್ದಾರೆ ಹಾಗೂ ರಾಜ್ಯದ ಅನೇಕ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲ. ಕೆಲ ಶಾಲೆಗಳಲ್ಲಿ ಶಿಕ್ಷಕರಿಗೂ ಶೌಚಾಲಯವಿಲ್ಲ. ಈ ವಿಚಾರಗಳ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಿಂತಿಸಿ ಅವರ ಪುನರುಜ್ಜೀವನಗೊಳಿಸಿ. ಸಂವಿಧಾನದ ಅಡಿಯಲ್ಲಿ ನಡೆಯದೆ ಸಂಘ ಪರಿವಾರದ ಗುಲಾಮಗಿರಿಗೆ ಒಳಗಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಜಿಲ್ಲಾಧ್ಯಕ್ಷ ರಫತ್ ಖಾನ್, ಮಾಧ್ಯಮ ಉಸ್ತುವಾರಿ ಇಬ್ರಾಹಿಂ ಪಠಾಣ್, ಚೋರನಹಳ್ಳಿ ಶಿವಣ್ಣ ಪ್ರತಿಭಟನೆಯಲ್ಲಿದ್ದರು.

ಏ.7ರಂದು ಮುಕ್ತ ವಿವಿ ಆವರಣದಲ್ಲಿ ಬೃಹತ್ ಉದ್ಯೋಗ ಮೇಳ

ಮೈಸೂರು, ಏ.1(ಎಂಕೆ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಹಾಗೂ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ ಏ.7ರಂದು ವಿವಿ ಆರಣದಲ್ಲಿ ಬೃಹತ್ ಉದ್ಯೋಗ




ಮೇಳ ಆಯೋಜಿಸಲಾಗಿದೆ ಎಂದು ವಿವಿ ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ತಿಳಿಸಿದರು.

ಕೆಎಸ್‌ಒಯು ಆಡಳಿತ ಭವನದಲ್ಲಿ ಗುರುವಾರ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಉದ್ಯೋಗ ಬಯಸುತ್ತಿರುವವರಿಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಜಂಟಿಯಾಗಿ ಉದ್ಯೋಗ ಮೇಳ ಹಮ್ಮಿಕೊಂಡಿದ್ದೇವೆ. ಹಲವಾರು ಕಂಪನಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಲಿವೆ ಎಂದು ಹೇಳಿದರು.

ಕೌಶಲ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಶ್ವಿನ್‌ಗೌಡ ಮಾತನಾಡಿ, ಉದ್ಯೋಗ ಮೇಳವು ಬೆಳಿಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ನಡೆಯಲಿದೆ. 80ಕ್ಕೂ ಹೆಚ್ಚು ಕಂಪನಿಗಳು ಪಾಲ್ಗೊಳ್ಳುತ್ತಿದ್ದು, ತಾಂತ್ರಿಕ ಮತ್ತು ತಾಂತ್ರಿಕೇತರ ವಿದ್ಯಾರ್ಥಿಗಳು, ನಿರುದ್ಯೋಗಿಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು. ಆಯ್ಕೆಯಾಗದವರಿಗೆ ತಮ್ಮ ಇಚ್ಛೆಯ ಅನುಸಾರವಾಗಿ ತರಬೇತಿ ನೀಡಿ, ಉದ್ಯೋಗವನ್ನು ದೊರಕಿಸಿಕೊಡಲಾಗುವುದು. ಹಾಗೆಯೇ ಸುತ್ತಮುತ್ತಲಿನ ಜಿಲ್ಲೆಗಳ ನಿರುದ್ಯೋಗಿಗಳಿಗೆ ಅವಕಾಶ ಮಾಡಿಕೊಡಲಾಗುವುದು. ಶೇ.70ರಷ್ಟು ಮಂದಿಗೆ ಉದ್ಯೋಗ ನೀಡುವ ಭರವಸೆ ಇದೆ ಎಂದರು. ಜಿಲ್ಲಾ ಕೌಶಲ ಅಭಿವೃದ್ಧಿ ಅಧಿಕಾರಿ ಜಗನಾಥ್, ವಿವಿ ಪ್ಲೇಸ್‌ಮೆಂಟ್ ಆಫೀಸರ್ ಹೆಚ್.ಆರ್.ಪವಿತ್ರ ಮತ್ತಿತರರಿದ್ದರು.

ರಷ್ಯಾ–ಉಕ್ರೇನ್ ಶಾಂತಿ ಮಾತುಕತೆ ಪುನರಾರಂಭ

ಮಾಸ್ಕೋ,ಏ.1–ಉಕ್ರೇನ್ ವಿರುದ್ಧ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಯುದ್ಧ ಘೋಷಿಸಿದ್ದಾರೆ. ರಷ್ಯಾದ ವಾಯುಯಾನ ಅಧಿಕಾರಿಗಳು ವಾಯುಪ್ರದೇಶದ ನಿಯಂತ್ರಣವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಕಾರಣ ಉಕ್ರೇನಿಯನ್ ವಾಯುಯಾನ ಅಧಿಕಾರಿಗಳು ಪೂರ್ವ ಭಾಗದಲ್ಲಿ ಕೆಲವು ವಾಯುಪ್ರದೇಶಗಳನ್ನು



"ಅಪಾಯಕಾರಿ ಪ್ರದೇಶಗಳು" ಎಂದು ಘೋಷಿಸಿದ್ದಾರೆ. ಕಳೆದ ವಾರ, ಇಲ್ಲಿನ ಪೈಲಟ್‌ಗೆ ಎಚ್ಚರಿಕೆ ನೀಡಿದ್ದ ಉಕ್ರೇನ್ ವಾಯುಯಾನ ಅಧಿಕಾರಿಗಳು ವಾಯುಯಾನ ಪ್ರದೇಶಗಳ ನಿಯಂತ್ರಣ ಸಾಧಿಸಲು ಪ್ರಯತ್ನಿಸುತ್ತಿರುವ ರಷ್ಯಾ ಅಧಿಕಾರಿಗಳ ಮೇಲೆ ಹದ್ದಿನ ಕಣ್ಣಿರಿಸುವಂತೆ ಮತ್ತು ಉಕ್ರೇನ್‌ನ ನಿಯಂತ್ರಕರನ್ನು ಮಾತ್ರ ಗುರುತಿಸುವಂತೆ ಎಚ್ಚರಿಕೆ ನೀಡಿದ್ದರು. ರಷ್ಯಾದ ಕಡೆಯಿಂದ ಯುದ್ಧದ ಬೆದರಿಕೆ ಹೆಚ್ಚಾಗುತ್ತಿರುವಂತೆ ಉಕ್ರೇನ್‌ನ ಅಧ್ಯಕ್ಷ ಶಾಂತಿ ಕಾಪಾಡುವಂತೆ ಜನತೆಗೆ ಮನವಿ ಮಾಡಿಕೊಂಡಿದ್ದು, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ತಮ್ಮ ಮನವಿಯನ್ನು ಒಪ್ಪಿಕೊಳ್ಳಲಿಕ್ಕಿಲ್ಲ ಎಂದು ಹೇಳಿದ್ದಾರೆ.

ಉಕ್ರೇನಿನ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ದೇಶದ ಜನತೆಯನ್ನು ಉದ್ದೇಶಿಸಿ ಭಾವನಾತ್ಮಕವಾಗಿ ಮಾತನಾಡಿ, ದೇಶವು ರಷ್ಯಾಕ್ಕೆ ಅಪಾಯವನ್ನುಂಟುಮಾಡುತ್ತದೆ ಎಂಬ ರಷ್ಯಾ ಆರೋಪವನ್ನು ನಿರಾಕರಿಸಿದರು, ರಷ್ಯಾದ ಆಕ್ರಮಣವು ಹತ್ತಾರು ಸಾವಿರ ಜೀವಗಳನ್ನು ಕಳೆದುಕೊಳ್ಳುತ್ತದೆ ಎಂದು ವಿಷಾದ ವ್ಯಕ್ತಪಡಿಸಿದರು.

ಮೇಕೆದಾಟು ಯೋಜನೆಗೆ ಅನುಮತಿ ನೀಡದಂತೆ ಮೋದಿಗೆ ಸ್ಟಾಲಿನ್ ಮನವಿ

ನವದೆಹಲಿ, ಏ.1– ಕರ್ನಾಟಕ ಸರ್ಕಾರ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಲು



ಉದ್ದೇಶಿಸಿರುವ ಮೇಕೆದಾಟು ಅಣೆಕಟ್ಟು ಯೋಜನೆಗೆ ಅನುಮತಿ ನೀಡದಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಮನವಿ ಮಾಡಿದ್ದಾರೆ.

ದೆಹಲಿಯಲ್ಲಿ ಪ್ರಧಾನಿಯನ್ನು ಭೇಟಿ ಮಾಡಿದ ಅವರು, ಜಲಶಕ್ತಿ ಸಚಿವಾಲಯವು ಮೇಕೆದಾಟು ಯೋಜನೆಗೆ ಅಥವಾ ಕಾವೇರಿ ಜಲಾನಯನ ಪ್ರದೇಶದಲ್ಲಿ ಯಾವುದೇ ಹೊಸ ಯೋಜನೆಗಳಿಗೆ ಅನುಮೋದನೆ ನೀಡಬಾರದು. ಅಲ್ಲದೆ ಮೇಕೆದಾಟು ಯೋಜನೆಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಸಮ್ಮತಿ ಸೂಚಿಸಬಾರದು. ತಮಿಳುನಾಡಿನ ಪೂರ್ವಾನುಮತಿ ಇಲ್ಲದೆ ಯಾವುದೇ ಹೊಸ ಯೋಜನೆ ಕೈಗೆತ್ತಿಕೊಳ್ಳದಂತೆ ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದಿದ್ದಾರೆ.

ಇದೇ ವೇಳೆ ಶ್ರೀಲಂಕಾದ ಬಿಕ್ಕಟ್ಟಿನ ಬಗ್ಗೆ ಚರ್ಚಿಸಿದ ಅವರು, ಶ್ರೀಲಂಕಾ ಇತಿಹಾಸದಲ್ಲೇ ಅತ್ಯಂತ ಕೆಟ್ಟ ಆರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿ ಎದುರಿಸುತ್ತಿದೆ. ಈ ನಡುವೆ ಡೀಸೆಲ್ ಪೂರೈಕೆಯಲ್ಲಿ ಕೊರತೆಯಾಗಿದೆ, ನೆನ್ನೆಯಷ್ಟೇ ಷೇರು ಮಾರುಕಟ್ಟೆ ವ್ಯಾಪಾರವನ್ನೂ ನಿರ್ಬಂಧಿಸಿದೆ. ಇದರಿಂದಾಗಿ ಶ್ರೀಲಂಕಾದ ಉತ್ತರ ಮತ್ತು ಪೂರ್ವ ಭಾಗಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿರುವ ತಮಿಳಿಗರು ಆರ್ಥಿಕ ಸಂಕಷ್ಟಕ್ಕೀಡಾಗಿದ್ದಾರೆ. ಅವರಿಗೆ ತಮಿಳುನಾಡಿನಿಂದ ಔಷಧಿ ಸೇರಿದಂತೆ ಕೆಲವು ಅಗತ್ಯ ವಸ್ತುಗಳನ್ನು ಕಳಿಸಿಕೊಡಲು ನಮ್ಮ ರಾಜ್ಯ ಸರ್ಕಾರ ಇಚ್ಛಿಸುತ್ತಿದೆ. ಅದಕ್ಕೆ ಅನುಮತಿ ನೀಡಬೇಕು ಎಂದು ಕೋರಿದ್ದಾರೆ.

ಏ.5, ಪ್ರೊ.ಸಿದ್ಧಾಶ್ರಮರ 4 ಕೃತಿಗಳ ಬಿಡುಗಡೆ


ಮೈಸೂರು,ಏ.1(ಆರ್‌ಕೆಬಿ)–ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಹಾಗೂ ವಾಚಸ್ಪತಿ ಪ್ರಕಾಶನಗಳ ಜಂಟಿ ಆಶ್ರಯದಲ್ಲಿ ಅಧ್ಯಯನ ಸಂಸ್ಥೆಯ ಬಿಎಂಶ್ರೀ ಸಭಾಂಗಣದಲ್ಲಿ ಏ.5ರಂದು ಬೆಳಗ್ಗೆ 11 ಗಂಟೆಗೆ ಪ್ರೊ.ಸಿ.ಪಿ.ಸಿದ್ಧಾಶ್ರಮ ಅವರ 4 ಕೃತಿಗಳ ಬಿಡುಗಡೆ ಸಮಾರಂಭ ಆಯೋಜಿಸಲಾಗಿದೆ ಎಂದು ಉಪನ್ಯಾಸಕ ಡಾ.ಮಹೇಂದ್ರ ಮೂರ್ತಿ ತಿಳಿಸಿದರು. ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ವಾಂಸ ಪ್ರೊ.ರಾಮೇಗೌಡ ಕಾರ್ಯಕ್ರಮ ಉದ್ಘಾಟಿಸುವರು. ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಅಧ್ಯಕ್ಷತೆ ವಹಿಸುವರು. ಪ್ರೊ.ಬಿ.ವಿ. ವಸಂತಕುಮಾರ್ ಕೃತಿ ಬಿಡುಗಡೆ ಮಾಡುವರು. ಪ್ರೊ. ಮಂಜುನಾಥ್ ಅತಿಥಿಗಳಾಗಿ ಭಾಗವಹಿಸುವರು. ಕೃತಿಗಳ ಕುರಿತು ಪ್ರೊ.ಕೃಷ್ಣಕುಮಾರಿ ಮನವಳ್ಳಿ, ಪ್ರೊ. ತಿಮ್ಮಯ್ಯ, ಡಾ.ಶೈಲಾ, ಡಾ.ಮಹೇಂದ್ರಮೂರ್ತಿ, ಮಾತನಾಡುವರು. ಕಂಬಾರರ ಕಾದಂಬರಿ ಲೋಕ ಸಾಹಿತ್ಯ ಶಿಕ್ಷಣ ಸಂಸ್ಕೃತಿ, ಸಾಹಿತ್ಯ ಸೌರಭ ಅಸ್ಮಿತೆ ಕೃತಿಗಳು ಬಿಡುಗಡೆಗೊಳ್ಳಲಿವೆ ಎಂದರು. ಗೋಷ್ಠಿಯಲ್ಲಿ ಡಾ.ಶ್ರೀನಿವಾಸ್, ಡಾ.ಮಾದಪ್ಪ, ಓಂಕಾರಪ್ಪ ಇದ್ದರು.

ಮೈಸೂರಿನ ಡಿಎಂಜಿ ಹಳ್ಳಿ ನವೋದಯದ ವಿದ್ಯಾರ್ಥಿಗೆ ಪ್ರಶ್ನೆ ಕೇಳಲು ಸಿಕ್ಕಿದ ಅವಕಾಶ

ಭಯ ಬಿಡಿ, ಹಬ್ಬದ ಮನಸ್ಥಿತಿಯಿಂದ ಪರೀಕ್ಷೆ ಎದುರಿಸಿ

'ಪರೀಕ್ಷಾ ಪೆ ಚರ್ಚಾ' ಸಂವಾದದಲ್ಲಿ ವಿದ್ಯಾರ್ಥಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಕರೆ





"ಪ್ರಧಾನಮಂತ್ರಿಯವರಿಗೆ ಪ್ರಶ್ನೆ ಕೇಳುವ ಅವಕಾಶ ಸಿಕ್ಕಿದ್ದಕ್ಕೆ ಖುಷಿಯಾಗಿದೆ. ಮೈಗೌ ವೆಬ್‌ನಲ್ಲಿ ಪರೀಕ್ಷಾ ಪೆ ಚರ್ಚಾ ಕುರಿತ ಪ್ರಬಂಧ ಇತ್ತು. ಅದನ್ನು ಬರೆದಿದ್ದೆ. ಆಯ್ಕೆಯಾದ ಬಳಿ ನಿಮ್ಮ ಶಾಲೆಗೆ ಮಾಹಿತಿ ನೀಡುವುದಾಗಿ ಹೇಳಿದ್ದರು. ಅದರಂತೆ ನನ್ನ ಆಯ್ಕೆಯಾದ ಬಗ್ಗೆ ಶಾಲೆಗೆ ಮಾಹಿತಿ ಬಂದಿತ್ತು. ನನಗೆ ಮತ್ತು ನಮ್ಮ ಶಾಲೆಯ ವಿದ್ಯಾರ್ಥಿಗಳು, ಶಿಕ್ಷಕರಿಗೆ ಖುಷಿಯಾಯಿತು.

- ಎಂ.ಬಿ.ತರುಣ್, ವಿದ್ಯಾಲಯದ ವಿದ್ಯಾರ್ಥಿ

ಮೈಸೂರು, ಏ.1(ಆರ್‌ಕೆಬಿ)– ವಿದ್ಯಾರ್ಥಿಗಳು ಪರೀಕ್ಷೆಯ ಭಯ ಬಿಟ್ಟು, ಹಬ್ಬದ ಮನಸ್ಥಿತಿಯೊಂದಿಗೆ ಪರೀಕ್ಷೆಯನ್ನು ಧೈರ್ಯದಿಂದ ಎದುರಿಸುವಂತೆ ವಿದ್ಯಾರ್ಥಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.

ನವದೆಹಲಿಯಲ್ಲಿ ನಡೆದ 'ಪರೀಕ್ಷಾ ಪೆ ಚರ್ಚಾ' ಕಾರ್ಯಕ್ರಮದಲ್ಲಿ ದೇಶದ ನಾನಾ ರಾಜ್ಯಗಳ, ನಾನಾ ಜಿಲ್ಲೆಗಳ ವಿದ್ಯಾರ್ಥಿಗಳು ಪರೀಕ್ಷೆಗೆ ಸಂಬಂಧಿಸಿದಂತೆ ತಮಗಿರುವ ಸಮಸ್ಯೆಗಳಿಗೆ ಪರಿಹಾರ ಹೇಗೆ ಕಂಡುಕೊಳ್ಳಬೇಕು ಎಂಬ ಬಗ್ಗೆ ಪ್ರಧಾನಿ ನರೇಂದ್ರ ಮೋದಿಯವರಿಗೆ ಪ್ರಶ್ನೆಗಳ ಮೂಲಕ ಚರ್ಚಿಸಲು ಅವಕಾಶ ನೀಡಲಾಗಿತ್ತು. ಆ ಪೈಕಿ ಮೈಸೂರಿನ ದೊಡ್ಡಮಾರಗೌಡನಹಳ್ಳಿ (ಡಿಎಂಜಿ ಹಳ್ಳಿ)ಯಲ್ಲಿರುವ ಜವಾಹರ್ ನವೋದಯ ವಿದ್ಯಾಲಯದ ವಿದ್ಯಾರ್ಥಿ ಎಂ.ಬಿ.ತರುಣ್ ಅವರಿಗೂ ಪ್ರಧಾನಿಯವರಿಗೆ ಪ್ರಶ್ನೆ ಕೇಳಲು ಅವಕಾಶ ದೊರೆಯಿತು. ಇದನ್ನು ಸದುಪಯೋಗಪಡಿಸಿಕೊಂಡು ವಿದ್ಯಾರ್ಥಿ ತರುಣ್, ಆನ್‌ಲೈನ್ ಶಿಕ್ಷಣದ ಸಮಯದಲ್ಲಿ ಸಾಮಾಜಿಕ ಮಾಧ್ಯಮಗಳು ಹಲವು ವಿನಾಶಗಳ ನಡುವೆ ಪರೀಕ್ಷೆಯನ್ನು ಕೇಂದ್ರೀಕರಿಸುವುದಕ್ಕೆ ಆಗುತ್ತಿರುವ ಅಡ್ಡಿ ನಿವಾರಿಸುವುದು ಹೇಗೆ? ಎಂದು ಪ್ರಶ್ನಿಸಿದರು. ಇದೇ ರೀತಿಯ ಹಲವು ಪ್ರಶ್ನೆಗಳು ದೇಶದ ವಿವಿಧ ರಾಜ್ಯಗಳ ವಿದ್ಯಾರ್ಥಿಗಳಿಂದ ಬಂದಿತು. ಪ್ರಶ್ನೆಗಳನ್ನು ಆಲಿಸಿದ ಬಳಿಕ ಅದಕ್ಕೆ ಉತ್ತರಿಸಿದ ಪ್ರಧಾನಿ ಮೋದಿ, ಆತಂಕದಿಂದ ದೂರವಿದ್ದು, ಹಬ್ಬದ ಮನಸ್ಥಿತಿಯಲ್ಲಿಯೇ ಪರೀಕ್ಷೆಯನ್ನು ಎದುರಿಸುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಇಂದು ನಾವು ಡಿಜಿಟಲ್ ಮಾಧ್ಯಮದ ಮೂಲಕ ಬಹಳ ಸುಲಭವಾಗಿ ಮತ್ತು ವ್ಯಾಪಕವಾಗಿ ವಿಷಯಗಳನ್ನು ಗ್ರಹಿಸಬಹುದು. ನಾವು ಅದನ್ನು ಒಂದು ಅವಕಾಶ ಎಂದು ಪರಿಗಣಿಸಬೇಕೇ ಹೊರತು, ಸಮಸ್ಯೆ ಎಂದು ಕೊಳ್ಳಬಾರದು ಎಂದು ಪ್ರಧಾನಿ ಮೋದಿ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ನಿಮಗೆ ಇದೇ ಮೊದಲ ಪರೀಕ್ಷೆ ಅಲ್ಲ. ಈಗಾಗಲೇ ಸಾಕಷ್ಟು ಬಾರಿ ಪರೀಕ್ಷೆಗಳಲ್ಲಿ ಬರೆದಿದ್ದೀರಿ. ಹಾಗಾಗಿ ಯಾವುದೇ ಒತ್ತಡ, ಆತಂಕಗಳಿಗೆ ಒಳಗಾಗದೆ ಪರೀಕ್ಷೆಯನ್ನು ಹಬ್ಬದ ಮೂಡ್‌ನಲ್ಲಿ ಬರೆಯಿರಿ ಎಂದು ಸಲಹೆ ನೀಡಿದರು.

ಇಲ್ಲಿ ಮೊದಲ ಬಾರಿಗೆ ಪರೀಕ್ಷೆಗೆ ಹಾಜರಾಗುವವರು ಯಾರೂ ಇಲ್ಲ. ಪರೀಕ್ಷೆಗಳು ನಮ್ಮ ಜೀವನದ ಮೆಟ್ಟಿಲು. ನಿಮ್ಮ ಈ ಅನುಭವಗಳನ್ನು, ನೀವು ಹಾದುಹೋದ ಪ್ರಕ್ರಿಯೆಯನ್ನು ಸಣ್ಣದಾಗಿ ತೆಗೆದುಕೊಳ್ಳಬೇಡಿ. ಎರಡನೆಯದಾಗಿ, ನಿಮ್ಮ ಮನಸ್ಸಿನಲ್ಲಿರುವ ಗಾಬರಿಯಿಂದ ಯಾವುದೇ ಒತ್ತಡಕ್ಕೆ ಒಳಗಾಗಬೇಡಿ. ನಿಮ್ಮ ಮುಂಬರುವ ಪರೀಕ್ಷೆಯ ಸಮಯವನ್ನು ನಿಮ್ಮ ದಿನಚರಿಯಂತೆಯೇ ಸುಲಭವಾಗಿ ಕಳೆಯಿರಿ ಎಂದು ಕರೆ ನೀಡಿದರು.

ವಿದ್ಯಾರ್ಥಿಗಳು ಪರೀಕ್ಷೆಯ ಸಮಯದಲ್ಲಿ ಭಯಭೀತ ವಾತಾವರಣದಿಂದ ದೂರವಿರಬೇಕು. ಸ್ನೇಹಿತರ ಉತ್ತರ ಪತ್ರಿಕೆಯನ್ನು ನೋಡಿ ನಕಲು ಮಾಡುವುದರಿಂದ ದೂರವಿರಿ. ನಮ್ಮ ದೇಹವೂ ನಮಗೆ ಮೋಸ ಮಾಡುತ್ತದೆ ನೀವು ನೇರವಾಗಿ ಕುಳಿತುಕೊಳ್ಳಬೇಕು ಎಂದುಕೊಂಡಿದ್ದರೂ ದೇಹ ಗೂನಾಗುತ್ತೆ. ಇದೇ ಥರ ಮನಸ್ಸೂ ಅಷ್ಟೇ, ನಮಗೆ ಮೋಸ ಮಾಡುತ್ತದೆ. ನಮ್ಮ ಮನಸ್ಸು ನಮಗೆ ಮೋಸ ಮಾಡಲು ಬಿಡಬಾರದು. ಮನಸ್ಸಿಗೆ ಯಾವುದು ಒಳ್ಳೆಯದು ಎನಿಸುತ್ತದೆಯೋ ಅದರ ಹಿಂದೆಯೇ ಓಡುತ್ತದೆ. ಹಾಗಾಗಿ ನಿಮಗೆ ಶ್ರೇಯಸ್ಕರ ಎನಿಸುವಂಥದಕ್ಕೆ ಹೆಚ್ಚು ಗಮನ ನೀಡಿ ಎಂದು ಹೇಳಿದರು.

ಶಿಕ್ಷಕರು ಮತ್ತು ಪೋಷಕರ ಒತ್ತಡಕ್ಕೆ ಒಳಗಾಗಿದ್ದೇವೆ ಎಂಬ ಭಾವನೆಯನ್ನು ಬಿಟ್ಟು, ವಿದ್ಯಾರ್ಥಿಗಳು ತಮ್ಮ ಭವಿಷ್ಯ ರೂಪಿಸುವತ್ತ ಮನಸ್ಸನ್ನು ಕೇಂದ್ರೀಕರಿಸಬೇಕು. ಪೋಷಕರು ಸಹ ಅವರ ಭವಿಷ್ಯ ರಚನೆಗೆ ಅವರಿಗೆ ಸ್ವತಂತ್ರವಾಗಿ ನಿರ್ಧರಿಸಲು ಅವಕಾಶ ನೀಡಬೇಕು ಎಂದು ಸಲಹೆ ನೀಡಿದರು.

ಡಿಎಂಜಿ ಹಳ್ಳಿ ನವೋದಯ ವಿದ್ಯಾಲಯದಲ್ಲಿ ಸಂಭ್ರಮ

ಮೈಸೂರು, ಏ.1– ತಮ್ಮ ವಿದ್ಯಾಲಯದ ವಿದ್ಯಾರ್ಥಿ ಎಂ.ಬಿ.ತರುಣ್ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಪರೀಕ್ಷಾ ಪೆ ಚರ್ಚಾ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆಂಬ ವಿಷಯ ಶುಕ್ರವಾರ ವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ಸಂಭ್ರಮಕ್ಕೆ ಅವಕಾಶವಾಗಿತ್ತು. ಬೆಳಗ್ಗೆ 11ಕ್ಕೆ ಪ್ರಧಾನಿ ನರೇಂದ್ರ ಮೋದಿ ನವದೆಹಲಿಯಲ್ಲಿ ಪರೀಕ್ಷಾ ಪೆ ಚರ್ಚಾ ಕಾರ್ಯಕ್ರಮದಲ್ಲಿ ದೇಶದ ಹಲವಾರು ವಿದ್ಯಾರ್ಥಿಗಳೊಂದಿಗೆ ನಡೆಸುವ ಸಂವಾದದಲ್ಲಿ ತಮ್ಮ ಶಾಲೆಯ ವಿದ್ಯಾರ್ಥಿಯೂ ಪ್ರಶ್ನೆ ಕೇಳಲು ಅವಕಾಶ ಸಿಕ್ಕಿದ್ದನ್ನು ವಿದ್ಯಾರ್ಥಿ ಎಂ.ಬಿ.ತರುಣ್ ಸದ್ಬಳಕೆ ಮಾಡಿಕೊಂಡಿದ್ದ.

ಈ ಸಂಬಂಧ ಕಳೆದ ಮಾ.28ರಂದು ಪ್ರಧಾನಿ ಕಾರ್ಯಾಲಯದ ಸಿಬ್ಬಂದಿ ಮೈಸೂರಿನ ಡಿಎಂಜಿ ಹಳ್ಳಿಯ ಜವಾಹರ್ ನವೋದಯ ವಿದ್ಯಾಲಯಕ್ಕೆ ಭೇಟಿ ನೀಡಿ, ವಿದ್ಯಾರ್ಥಿ ಎಂ.ಬಿ.ತರುಣ್ ಪ್ರಧಾನಿಯವರನ್ನು ಕೇಳಲಿರುವ ಪ್ರಶ್ನೆಯ ವೀಡಿಯೋ ಧ್ವನಿ ಮುದ್ರಿಸಿಕೊಂಡು ಹೋಗಿದ್ದರು. ಕಾರ್ಯಕ್ರಮದ ನಡುವೆ ಮೈಸೂರಿನ ವಿದ್ಯಾರ್ಥಿಯ ಮುದ್ರಿತ ವೀಡಿಯೋ ಹಾಕಿ ಪ್ರಧಾನಿಯಿಂದ ಉತ್ತರ ಪಡೆಯಲಾಯಿತು. ಈ ವೇಳೆ ವಿದ್ಯಾಲಯದ ಪ್ರಾಂಶುಪಾಲ ಜೆ.ಮಧುಸೂದನ್, ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಶ್ರದ್ಧೆಯಿಂದ ಆಲಿಸಿದರು.

ವಾಮಾಚಾರದ ಅಡ್ಡೆಯಾಗಿರುವ ಪುಟ್ಟಣ್ಣ ಪಾರ್ಕ್





ಮೈಸೂರು, ಏ.1(ಜಿಎ)– ಉದ್ಯಾನವನಗಳು ಎಂದರೆ ವಾಯುವಿಹಾರ ಮಾಡಿ ಆರೋಗ್ಯ ವೃದ್ಧಿಸಿಕೊಳ್ಳುವ ಮತ್ತು ಮಕ್ಕಳಿಗೆ ಆಟೋಟಕ್ಕೆ ಮೀಸಲಿರುವ ಸ್ಥಳ. ಆದರೆ ಮೈಸೂರಿನ ಪುಟ್ಟಣ್ಣ ಪಾರ್ಕ್ ವಾಮಾಚಾರದ ಅಡ್ಡೆಯಾಗಿ ಪರಿವರ್ತನೆಯಾಗಿದೆ ಎಂದು 'ಮೈಸೂರು ಮಿತ್ರ' ನಡೆಸಿದ ರಿಯಾಲಿಟಿ ಚೆಕ್‌ನಲ್ಲಿ ತಿಳಿದುಬಂದಿದೆ.

ಮೈಸೂರಿನ ವಾರ್ಡ್ ನಂ 56ರ ವ್ಯಾಪ್ತಿಯಲ್ಲಿ ಬರುವ ಗೋಪಾಲಸ್ವಾಮಿ ಶಿಶುವಿಹಾರ ಬಳಿ ಎರಡು ಉದ್ಯಾನವನಗಳಿದ್ದು, ಅದರಲ್ಲಿ ಒಂದು ಉದ್ಯಾನವನವಂತೂ ವಾಮಾಚಾರಕ್ಕೆ ಮೀಸಲಿರುವ ಉದ್ಯಾನವನದಂತೆ ಕಾಣುತ್ತಿದೆ. 1ನೇ ಮುಖ್ಯರಸ್ತೆಯ ಬಲ ಭಾಗದಲ್ಲಿರುವ ಉದ್ಯಾನವನ ಸುಸಜ್ಜಿತವಾಗಿದೆ. ಆದರೆ, ಉದ್ಯಾನವನದ ಎಲೆಗಳ ರಾಶಿ ಜೊತೆಗೆ ಸಾರ್ವಜನಿಕರು ತಂದು ಹಾಕಿರುವ ಕಸದ ರಾಶಿ ಒಂದು ಬೆಟ್ಟದ ರೂಪದಲ್ಲಿ ನಿರ್ಮಾಣವಾಗಿದೆ.

ಕುಡುಕರ ವಿಶ್ರಾಂತಿ ತಾಣ : ಪುಟ್ಟಣ್ಣ ಉದ್ಯಾನವನದಲ್ಲಿ ಒಂದು ಬೃಹತ್ ನೀರಿನ ಟ್ಯಾಂಕ್ ಇದೆ ಅದರ ಸುತ್ತಲೂ ನಾಲ್ಕು ವಾಟರ್ ವಾಲ್‌ಗಳನ್ನು ನಿರ್ಮಿಸಲಾಗಿದೆ. ಉದ್ಯಾನವನದ ಪ್ರವೇಶದ್ವಾರಕ್ಕೆ ಸೂಕ್ತ ಭದ್ರತೆ ಇಲ್ಲದಿರುವುದರಿಂದ ಯಾರು ಬೇಕಾದರೂ ನೇರವಾಗಿ ಉದ್ಯಾನವನ್ನು ಪ್ರವೇಶಿಸಬಹುದಾಗಿದೆ. ಇದರ ಪರಿಣಾಮ ಕೆಲ ಪುಂಡರು ಹಾಡುಹಗಲೇ ಇಲ್ಲಿಗೆ ಮದ್ಯವನ್ನು ತಂದು ಸೇವಿಸಿ ನಂತರ ನಿರ್ಮಿಸಿರುವ ನಾಲ್ಕು ವಾಟರ್ ವಾಲ್‌ಗಳ ಮೇಲ್ಛಾವಣಿಯನ್ನು ಹಾಸಿಗೆ ರೀತಿ ಬಳಸಿಕೊಳ್ಳುತ್ತಿದ್ದು, ಈ ಹಿನ್ನೆಲೆ ಉದ್ಯಾನವನದ ಯಾವ ಭಾಗ ನೋಡಿದರೂ ಮದ್ಯದ ಬಾಟಲಿಗಳನ್ನು ಕಾಣಬಹುದಾಗಿದೆ.

ಈಗಾಗಲೇ ಎರಡು ಉದ್ಯಾನವನಗಳ ಪರಿಶೀಲನೆ ನಡೆಸಿದ್ದು, ಬಲ ಭಾಗದ ಉದ್ಯಾನವನ ಸುಸಜ್ಜಿತವಾಗಿದೆ. ಸ್ಥಳೀಯ ನಾಗರಿಕರು ಲೈಟ್ ವ್ಯವಸ್ಥೆ ಮತ್ತು ಉದ್ಯಾನವನದ ಗ್ರಿಲ್‌ಗಳನ್ನು ಎತ್ತರಿಸುವಂತೆ ತಿಳಿಸಿದ್ದಾರೆ. ಪಕ್ಕದ ನೀರಿನ ಟ್ಯಾಂಕ್ ಉದ್ಯಾನವನ ಸಂಪೂರ್ಣ ನಿಷ್ಕ್ರಿಯವಾಗಿದ್ದು, ಈ ಸಂಬಂಧ ಈಗಾಗಲೇ ಪಾಲಿಕೆಯಲ್ಲಿ 3 ಬಾರಿ ಟೆಂಡರ್ ಬಗ್ಗೆ ಚರ್ಚಿಸಲಾಗಿದೆ. ಕೆಲವೇ ದಿನಗಳಲ್ಲಿ ಕಾರ್ಯಾದೇಶ ಬರುವ ಸಾಧ್ಯತೆ ಇದ್ದು, ಅದರ ಅಭಿವೃದ್ಧಿ ಕಾರ್ಯ ಆರಂಭವಾಗಲಿದೆ. ವಾಮಾಚಾರದ ವಿಚಾರವಾಗಿ ಸ್ಥಳೀಯ ಪೊಲೀಸ್ ಠಾಣೆಗೂ ತಿಳಿಸಲಾಗಿದೆ. ಇದಕ್ಕೆ ಪ್ರಮುಖವಾಗಿ ಸಾರ್ವಜನಿಕರೇ ಎಚ್ಚೆತ್ತುಕೊಳ್ಳಬೇಕು.

-ಪಲ್ಲವಿ ಬೇಗಂ, ಪಾಲಿಕೆ ಸದಸ್ಯೆ, ವಾರ್ಡ್ ನಂ.56



ಮಕ್ಕಳನ್ನು ಕರೆದುಕೊಂಡು ಬರಲು ಭಯ : ಪುಟ್ಟಣ್ಣ ಉದ್ಯಾನವನದ ಒಂದು ಬೃಹತ್ ನೀರಿನ ಟ್ಯಾಂಕ್‌ನ ಪಕ್ಕದಲ್ಲಿ ಪ್ರತ್ಯೇಕವಾಗಿ ಮಕ್ಕಳ ಆಟಿಕೆಯನ್ನು ಅಳವಡಿಸಲಾಗಿದೆ. ಆದರೆ ಇದನ್ನು ಬಳಸಲು ಮಕ್ಕಳೇ ಬರುವುದಿಲ್ಲ. ಮಧ್ಯಾಹ್ನ ಮತ್ತು ಸಂಜೆ ವೇಳೆ ಮಕ್ಕಳನ್ನು ಉದ್ಯಾನವನಕ್ಕೆ ಕರೆದುಕೊಂಡು ಬರಲು ಭಯವಾಗುತ್ತದೆ. ಈ ಸಮಯದಲ್ಲಿ ಬಂದರೆ ಕುಡುಕರು ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೆ. ಈ ವೇಳೆ ಮಕ್ಕಳನ್ನು ಇಲ್ಲಿಗೆ ಕರೆದುಕೊಂಡು ಬರಲು ಭಯವಾಗುತ್ತದೆ ಎಂದು ಸ್ಥಳೀಯ ಮಹಿಳೆಯೊಬ್ಬರು ಆತಂಕ ವ್ಯಕ್ತಪಡಿಸಿದರು.

ವಾಮಾಚಾರದ ಉದ್ಯಾನವನ : ಉದ್ಯಾನವನ್ನು ಕೆಲ ದುಷ್ಕರ್ಮಿಗಳು ವಾಮಾಚಾರದ ಕೃತ್ಯ ನಡೆಸಲು ಬಳಸುತ್ತಿದ್ದು, ಉದ್ಯಾನವನದ ಯಾವ ಭಾಗಗಳು ನೋಡಿದರೂ, ಆರು ಕಲ್ಲುಗಳಿಗೆ ಬಿಳಿಯ ದಾರ ಸುತ್ತಿ ಅದರ ಮೇಲೆ ಅರಿಶಿನ ಕುಂಕುಮ ಹಚ್ಚಿ ಎರಡು ಮೂರು ನಿಂಬೆ ಹಣ್ಣು, ಬಾಳೆ ಹಣ್ಣು ಇಟ್ಟು ಗಂಧದ ಕಡ್ಡಿ ಇಟ್ಟು ವಾಮಾಚಾರ ಮಾಡಿದ್ದಾರೆ. ಸ್ಥಳೀಯರು ಹೇಳುವ ಪ್ರಕಾರ ಅಮಾವಾಸ್ಯೆ, ಹುಣ್ಣಿಮೆಯ ದಿನಗಳಲ್ಲಂತೂ ಪಾರ್ಕ್‌ನಲ್ಲಿ ಈ ವಾಮಾಚಾರ ವಸ್ತುಗಳು ಹೆಚ್ಚಿನ ಪ್ರಮಾಣದಲ್ಲಿ ಕಾಣಿಸುತ್ತದೆ. ಆದ್ದರಿಂದ ಈ ಉದ್ಯಾನಕ್ಕೆ ಪೊಲೀಸರು ಭೇಟಿ ನೀಡಿದರೆ ಉತ್ತಮ ಎಂದು ತಿಳಿಸಿದರು.

ಪುನಶ್ಚೇತನಗೊಂಡ ಆಲನಹಳ್ಳಿ ಕೆರೆ ಸ್ಥಳೀಯ ಆಡಳಿತದ ವಶಕ್ಕೆ



ಮೈಸೂರು, ಏ.1(ಎಂಕೆ)– ಏಷ್ಯನ್ ಪೇಂಟ್ಸ್, ಐಐಟಿ ಫಾರ್ ಐಐಟಿ ಹಾಗೂ ಕ್ರೆಡಿಟ್–ಐ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಪುನಶ್ಚೇತನಗೊಳಿಸಿದ ಮೈಸೂರಿನ ಆಲನಹಳ್ಳಿ ಕೆರೆಯನ್ನು ಗುರುವಾರ ಸ್ಥಳೀಯ ಆಡಳಿತಕ್ಕೆ ಹಸ್ತಾಂತರಿಸಲಾಯಿತು.

ಸುಮಾರು 2 ತಿಂಗಳ ಕಾಲ ನಡೆದ ಕೆರೆಯ ಪುನಶ್ಚೇತನ ಕಾರ್ಯದಲ್ಲಿ ಕೆರೆಯಲ್ಲಿ ತುಂಬಿದ್ದ ಕಟ್ಟಡ ತ್ಯಾಜ್ಯ, ಪ್ಲಾಸ್ಟಿಕ್ ವಸ್ತುಗಳನ್ನು ಪ್ರತ್ಯೇಕಗೊಳಿಸಿ, ಕೆರೆಯ ಹೂಳನ್ನು ಅಕ್ಕಪಕ್ಕದ ಗ್ರಾಮಗಳಾದ ಚಿಕ್ಕಹಳ್ಳಿ, ವಾಜಮಂಗಲ, ದಂಡೀಕೆರೆ, ಆಲನಹಳ್ಳಿ, ಭುಗತಗಳ್ಳಿ ಇನ್ನಿತರ ಗ್ರಾಮಗಳ ರೈತರ ಜಮೀನಿಗೆ ನೀಡಲಾಯಿತು. ಸುಮಾರು 8 ಲಕ್ಷ ರೂ., ವೆಚ್ಚದಲ್ಲಿ ಸುಮಾರು 4,214 ಟ್ರಾಕ್ಟರ್‌ಗಳಷ್ಟು ಮಣ್ಣು ತೆಗೆದು ಕೆರೆಯನ್ನು ಪುನರುಜ್ಜೀವನಗೊಳಿಸಲಾಯಿತು. ಈ ವೇಳೆ ಏಷ್ಯನ್ ಪೇಂಟ್ಸ್ ಸಂಸ್ಥೆಯ ಸಹಾಯಕ ಪ್ರಧಾನ ವ್ಯವಸ್ಥಾಪಕ ಕಮಲ್ ಚೌಡ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ರಮೇಶ್, ನರೇಗಾ ಯೋಜನೆ ಸಹಾಯಕ ನಿರ್ದೇಶಕ ರಘುನಾಥ್, ಆಲನಹಳ್ಳಿ ಗ್ರಾಪಂ ಪಿಡಿಓ ರವಿ, ಕ್ರೆಡಿಟ್–ಐ ಸಂಸ್ಥೆಯ ಎಂ.ಪಿ.ವರ್ಷ, ಕಿರಣ್ ರಾಬರ್ಟ್, ಅಶ್ವಥಿ ಜೋಷಿ ಸೇರಿದಂತೆ ಆಲನಹಳ್ಳಿ ಗ್ರಾಮಸ್ಥರು ಉಪಸ್ಥಿತರಿದ್ದರು.

ಏ.9ಕ್ಕೆ ಮೈಸೂರು ಮೆಡಿಕಲ್ ಕಾಲೇಜು ಹಳೆ ವಿದ್ಯಾರ್ಥಿಗಳ ಸಂಘದಿಂದ ಮಾ ಉತ್ಸವ–22

ದೇಶ-ವಿದೇಶಗಳ ವಿದ್ಯಾರ್ಥಿಗಳು ಭಾಗಿ



ಮೈಸೂರು,ಏ.1(ಎಂಟಿವೈ)– ಮೈಸೂರು ವೈದ್ಯಕೀಯ ಕಾಲೇಜಿನ ಹಳೆ ವಿದ್ಯಾರ್ಥಿಗಳ ಸಂಘದ ವತಿಯಿಂದ ಜೆ.ಕೆ.ಮೈದಾನದಲ್ಲಿರುವ ಅಮೃತೋತ್ಸವ ಭವನದಲ್ಲಿ ಏ.9ರಂದು ಹಳೆ ವಿದ್ಯಾರ್ಥಿಗಳ ಸಮಾವೇಶ 'ಮಾ ಉತ್ಸವ–2022' ಆಯೋಜಿಸಲಾಗಿದೆ.

ಮಾ ಉತ್ಸವ ಸಂಘಟನಾ ಸಮಿತಿ ಅಧ್ಯಕ್ಷ ಡಾ.ಬಿ.ಎನ್.ಆನಂದ ರವಿ ಅವರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ಪ್ರತಿಷ್ಠಿತ ಮೈಸೂರು ಮೆಡಿಕಲ್ ಕಾಲೇಜಿನ ಹಳೆ ವಿದ್ಯಾರ್ಥಿಗಳೆಲ್ಲಾ ಸೇರಿ ಹಳೆ ವಿದ್ಯಾರ್ಥಿಗಳ ಸಂಘವನ್ನೂ ರಚಿಸಿಕೊಂಡಿದ್ದು, ಪ್ರತಿ ವರ್ಷ ಮಾ ಉತ್ಸವ ನಡೆಸಿಕೊಂಡು ಬರಲಾಗುತ್ತಿತ್ತು. ಆದರೆ ಕಳೆದ ಎರಡು ವರ್ಷಗಳಿಂದ 'ಮಾ ಉತ್ಸವ'ವನ್ನು ಅದ್ಧೂರಿಯಾಗಿ ನಡೆಸಲು ಸಾಧ್ಯವಾಗಿರಲಿಲ್ಲ ಎಂದರು.

ವಿಶ್ವದ ಅನೇಕ ರಾಷ್ಟ್ರಗಳಲ್ಲೂ ಮೈಸೂರು ಮೆಡಿಕಲ್ ಕಾಲೇಜಿನ ಹಳೆ ವಿದ್ಯಾರ್ಥಿಗಳಿದ್ದು, ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ, ಸುಮಾರು 10 ಸಾವಿರಕ್ಕೂ ಹೆಚ್ಚು ಮಂದಿ ಹಳೆ ವಿದ್ಯಾರ್ಥಿಗಳು ಸಂಘಕ್ಕೆ ಹೆಸರು ನೋಂದಾಯಿಸಿಕೊಂಡಿದ್ದಾರೆ. ಪ್ರತಿ ವರ್ಷ ನಡೆಯುತ್ತಿದ್ದ ಮಾ ಉತ್ಸವದಲ್ಲಿ ವಿದೇಶದಲ್ಲಿ ನೆಲೆಸಿರುವ ಹಳೆ ವಿದ್ಯಾರ್ಥಿಗಳು ಬರುತ್ತಿದ್ದಾರೆ. ಕಳೆದ ವರ್ಷ ಕೋವಿಡ್ ಎರಡನೇ ಅಲೆ ತೀವ್ರಗೊಂಡಿದ್ದರಿಂದ ವೈದ್ಯರೆಲ್ಲರೂ ಕೋವಿಡ್ ಸೋಂಕಿತರ ಚಿಕಿತ್ಸೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರಿಂದ 'ಮಾ ಉತ್ಸವ'ವನ್ನು ಆನ್‌ಲೈನ್ ಮೂಲಕವೂ ನಡೆಸಲು ಸಾಧ್ಯವಾಗಿರಲಿಲ್ಲ ಎಂದು ವಿಷಾದಿಸಿದರು.

ಪ್ರಸ್ತುತ ಕೊರೊನಾ ಸೋಂಕಿನ ಪ್ರಕರಣಗಳ ಸಂಖ್ಯೆ ಕ್ಷೀಣಿಸಿರುವುದರಿಂದ ಈ ವರ್ಷ ಮಾ–ಉತ್ಸವವನ್ನು ಅರ್ಥಗರ್ಭಿತವಾಗಿ ನಡೆಸಲು ತೀರ್ಮಾನಿಸಲಾಗಿದೆ. ಪ್ರತಿ ವರ್ಷ ಮೂರು ದಿನ ನಡೆಯುತ್ತಿದ್ದ ಈ ಉತ್ಸವವನ್ನು ಈ ಬಾರಿ ಕೇವಲ ಒಂದೇ ದಿನಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ ಇರುವ ಕಾಲಮಿತಿಯೊಳಗೆ ವೈಜ್ಞಾನಿಕ ವಿಚಾರ ಸಂಕಿರಣದಲ್ಲಿ ಕೊರೊನಾ ಸೇರಿದಂತೆ ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದ ಹಲವು ವಿಷಯ ಮಂಡನೆ ಮಾಡಲಿದ್ದಾರೆ ಎಂದರು.

ಜೆ.ಕೆ.ಮೈದಾನದ ಅಮೃತೋತ್ಸವ ಭವನದಲ್ಲಿ ಏ.9ರಂದು ಬೆಳಗ್ಗೆ 10 ಗಂಟೆಗೆ ಮಾ–ಉತ್ಸವವನ್ನು ವೈದ್ಯಕೀಯ ಶಿಕ್ಷಣ ಇಲಾಖೆ ಮಾಜಿ ನಿರ್ದೇಶಕರಾದ ಡಾ.ಆರ್. ಸೀತಾಲಕ್ಷ್ಮಿ ಉದ್ಘಾಟಿಸಲಿದ್ದಾರೆ. ಹಳೆ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಡಾ.ಬಿ.ಎನ್.ಆನಂದ ರವಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮಾ ಉತ್ಸವದ ಕಾರ್ಯದರ್ಶಿ ಡಾ.ಪಿ.ಮಾಲೇಗೌಡ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ. ಬಳಿಕ ವೈಜ್ಞಾನಿಕ ವಿಚಾರ ಸಂಕಿರಣ, ಮಾ– ಓರೇಷನ್, ವಾರ್ಷಿಕ ಸಭೆ ಸಂಘಕ್ಕೆ 2022–24ರ ಅವಧಿಗೆ ನೂತನ ಪದಾಧಿಕಾರಿಗಳ ಆಯ್ಕೆಗೆ ಚುನಾವಣೆ ಜರುಗಲಿದೆ ಎಂದು ತಿಳಿಸಿದರು.

ಅಂದು ಸಂಜೆ 5.15ಕ್ಕೆ ಬೆಂಗಳೂರಿನ ಆರ್‌ಜಿಯುಹೆಚ್‌ಎಸ್ ಪ್ರಥಮ ಕುಲಪತಿಗಳಾದ ಡಾ.ಕಾಂತ ಎಸ್.ಜಾದವ್ ಅವರು ನೂತನವಾಗಿ ನಿರ್ಮಿಸಿರುವ ಡೈನಿಂಗ್ ಹಾಲ್ ಅನ್ನು ಉದ್ಘಾಟಿಸಲಿದ್ದಾರೆ. ಸಂಜೆ 5.30ಕ್ಕೆ ಮಾ–ಉತ್ಸವದ ಸಭಾ ಕಾರ್ಯಕ್ರಮವನ್ನು ಆರ್‌ಜಿಯುಹೆಚ್‌ಎಸ್ ಕುಲಪತಿ ಡಾ.ಎಂ.ಕೆ.ರಮೇಶ್ ಉದ್ಘಾಟಿಸಲಿದ್ದಾರೆ. ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾ ಟ್ರಸ್ಟ್ ಅಧ್ಯಕ್ಷ ಡಾ.ಎಸ್.ಚಂದ್ರಶೇಖರ್ ಶೆಟ್ಟಿ, ಟ್ರಸ್ಟ್ ಕಾರ್ಯದರ್ಶಿ ಡಾ.ಎಂ.ಎ.ಶೇಖರ್, ಮೆಡಿಕಲ್ ಕಾಲೇಜಿನ ಡೀನ್ ಡಾ.ಹೆಚ್.ಎನ್.ದಿನೇಶ್, ಮೆಡಿಕಲ್ ಕಾಲೇಜಿನ ಪ್ರಾಂಶುಪಾಲರಾದ ಡಾ.ಕೆಆರ್.ದಾಕ್ಷಾಯಣಿ, ಮಾ ಉತ್ಸವದ ಕಾರ್ಯದರ್ಶಿ ಡಾ.ಪಿ. ಮಾಲೇಗೌಡ ಹಾಗೂ ಇನ್ನಿತರರು ಭಾಗವಹಿಸುವ ಕಾರ್ಯಕ್ರಮದಲ್ಲಿ ಹಳೆ ವಿದ್ಯಾರ್ಥಿ ಸಂಘದ 10 ಮಂದಿ ಸದಸ್ಯರಿಗೆ ಹಾಗೂ ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆ ಮಾಡಿರುವವರನ್ನು ಸನ್ಮಾನಿಸಲಾಗುವುದು. ನಂತರ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದೆ ಎಂದು ವಿವರಿಸಿದರು.

ಕೆ.ಆರ್.ಆಸ್ಪತ್ರೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಪತ್ರಕರ್ತರು ಕೇಳಿದ ಪ್ರಶ್ನೆಗೆ ಮಾ ಉತ್ಸವದ ಕಾರ್ಯದರ್ಶಿ ಡಾ.ಪಿ.ಮಾಲೇಗೌಡ ಪ್ರತಿಕ್ರಿಯಿಸಿ, ಮೈಸೂರು ಮೆಡಿಕಲ್ ಕಾಲೇಜಿನ ಶತಮಾನೋತ್ಸವ ಸಮಾರಂಭಕ್ಕೆ ಇನ್ನು ಎರಡು ವರ್ಷವಿದೆ. ಇದಕ್ಕಾಗಿ ಸರ್ಕಾರ ಹಣ ಬಿಡುಗಡೆ ಮಾಡಲಿದ್ದು, ಎರಡು ವರ್ಷದೊಳಗೆ ಮೈಸೂರು ಮೆಡಿಕಲ್ ಕಾಲೇಜು, ವಿದ್ಯಾರ್ಥಿನಿಲಯ, ಕೆಆರ್.ಆಸ್ಪತ್ರೆಯಲ್ಲಿ ಹಲವು ಅಭಿವೃದ್ಧಿ ಕಾರ್ಯ ನಡೆಸಲು ಮೆಡಿಕಲ್ ಕಾಲೇಜಿನ ಮುಖ್ಯಸ್ಥರು, ಹಿರಿಯ ವೈದ್ಯರು ಸೇರಿ ಪಟ್ಟಿ ಮಾಡಿದ್ದಾರೆ. ಮುಂದಿನ ಎರಡು ವರ್ಷದ ನಂತರ ಆಸ್ಪತ್ರೆಯ ಚಿತ್ರಣ ಬದಲಾಗುವುದು ಖಚಿತ ಆ ನಿಟ್ಟಿನಲ್ಲಿ ಮೆಡಿಕಲ್ ಕಾಲೇಜು ದಿಟ್ಟ ಹೆಜ್ಜೆ ಇಡುತ್ತಿದೆ. ಈಗಾಗಲೇ ಆಸ್ಪತ್ರೆಗೆ ಏನೆಲ್ಲಾ ಯಂತ್ರೋಪಕರಣ ಬೇಕು, ಏನೆಲ್ಲಾ ಸೌಲಭ್ಯ ಕಲ್ಪಿಸಬೇಕು ಎನ್ನುವುದರ ಬಗ್ಗೆ ಗಮನ ಹರಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹಳೆ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳಾದ ಡಾ.ಪಿ. ಮಾಲೇಗೌಡ, ಡಾ. ಪ್ರಸನ್ನಶಂಕರ್, ಡಾ.ಹರೀಶ್, ಡಾ.ಶಶಿಧರ್, ಡಾ.ಮರುಳಸಿದ್ದಪ್ಪ ಇದ್ದರು.

ಪ್ರಧಾನಿ ಮೋದಿ ಹತ್ಯೆಗೆ ಸಂಚು

20 ಕೆ.ಜಿ. ಆರ್‌ಡಿಎಕ್ಸ್, 20 ಸ್ಲೀಪರ್ ಸೆಲ್: ಎನ್‌ಐಎಗೆ ಇ-ಮೇಲ್ ರವಾನೆ

ನವದೆಹಲಿ, ಏ.1–ಪ್ರಧಾನಿ ಮೋದಿಯವರನ್ನು ಹತ್ಯೆಗೆ ಸಂಚು ರೂಪಿಸಿರುವುದು ಬಯಲಾಗಿದೆ. ಈ ಸಂಬಂಧ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ)ಗೆ



ಅನಾಮಧೇಯ ಐಡಿಯಿಂದ ಇ-ಮೇಲ್ ರವಾನೆಯಾಗಿದೆ.

ಮೇಲ್ ರವಾನಿಸಿರುವ ವ್ಯಕ್ತಿಯು ಪ್ರಧಾನಿ ಮೋದಿಯವರನ್ನು ಅತೀ ಶೀಘ್ರದಲ್ಲೇ ಹತ್ಯೆ ಮಾಡುವುದಾಗಿ ಬೆದರಿಕೆ ಹಾಕಿದ್ದಾನೆ. ಪ್ರಧಾನಿ ಮೋದಿ ನನ್ನ ಜೀವನವನ್ನು ಸರ್ವ ನಾಶ ಮಾಡಿದ್ದು, ಆದಷ್ಟು ಬೇಗ ಅವರ ಮೇಲೆ ಬಾಂಬ್ ಮಳೆ ಸುರಿದು ಹತ್ಯೆ ಮಾಡುತ್ತೇನೆ ಎಂದು ಆತ ತಿಳಿಸಿದ್ದಾನೆ. ತನಗೆ ಭಯೋತ್ಪಾದಕ ಸಂಘಟನೆಗಳ ಸಂಪರ್ಕವಿದ್ದು, ಅವರು ನನಗೆ ಆರ್‌ಡಿಎಕ್ಸ್ ನೀಡಿ ಸಹಕರಿಸಿದ್ದಾರೆ. ನನ್ನ ಬಳಿ 20 ಕೆ.ಜಿ. ಆರ್‌ಡಿಎಕ್ಸ್‌ಗಳಿವೆ. 20 ಸ್ಲೀಪರ್ ಸೆಲ್‌ಗಳು ಫೆ.28ರಿಂದಲೇ ಕಾರ್ಯೋನ್ಮುಖರಾಗಿದ್ದು, ದೇಶದ ಪ್ರಮುಖ ನಗರಗಳಲ್ಲಿ ಆರ್‌ಡಿಎಕ್ಸ್ ಸ್ಫೋಟಿಸಲಾಗುತ್ತದೆ. ಅದಕ್ಕಾಗಿ ಈಗಾಗಲೇ ನಗರಗಳನ್ನು ಗುರುತಿಸಲಾಗಿದೆ. 2 ಕೋಟಿಗೂ ಹೆಚ್ಚು ಜನರನ್ನು ಆರ್‌ಡಿಎಕ್ಸ್ ಸ್ಫೋಟಿಸಿ ಹತ್ಯೆ ಮಾಡಲು ಪ್ಲಾನ್ ಮಾಡಿಕೊಳ್ಳಲಾಗಿದೆ. ಜನರು ಹ್ಯಾಗಿದ್ದರೂ ಸಾಯುತ್ತಾರೆ. ಅವರು ನಾನು ಸ್ಫೋಟಿಸುವ ಆರ್‌ಡಿಎಕ್ಸ್‌ನಿಂದಲೇ ಸಾಯಲಿ. ನನ್ನ ಜೀವದ ಸರ್ವ ನಾಶ ಮಾಡಿದ ಯಾರನ್ನೂ ಬಿಡುವುದಿಲ್ಲ ಎಂದು ಎನ್‌ಐಎಗೆ ರವಾನೆಯಾಗಿರುವ ಇ-ಮೇಲ್‌ನಲ್ಲಿ ತಿಳಿಸಲಾಗಿದೆ. ಎನ್‌ಐಎ ಅಧಿಕಾರಿಗಳು ಇ-ಮೇಲ್ ಬಂದಿರುವ ಐಡಿಯ ಜಾಡನ್ನು ಹಿಡಿದು ತನಿಖೆ ಆರಂಭಿಸಿದ್ದಾರೆ. ಅಲ್ಲದೇ ಪ್ರಧಾನಿ ಮೋದಿಯವರ ಭದ್ರತೆಯನ್ನು ಹೆಚ್ಚಿಸಲಾಗಿದೆ.

ವಾಣಿಜ್ಯ ಬಳಕೆ ಸಿಲಿಂಡರ್ ಬೆಲೆಯಲ್ಲಿ 250 ರೂ. ಏರಿಕೆ

ನವದೆಹಲಿ,ಏ.1–19 ಕೆ.ಜಿ ತೂಕದ ವಾಣಿಜ್ಯ ಬಳಕೆಯ ಅಡುಗೆ ಅನಿಲ ದರದಲ್ಲಿ ರೂ. 250 ಏರಿಕೆ ಮಾಡಲಾಗಿದ್ದು, ಪರಿಷ್ಕೃತ ದರ ಶುಕ್ರವಾರದಿಂದಲೇ ಜಾರಿಗೆ ಬರಲಿದೆ. ಗೃಹ ಬಳಕೆಯ ಗ್ಯಾಸ್ ಸಿಲಿಂಡರ್ ಬೆಲೆಯಲ್ಲಿ ಯಾವುದೇ ರೀತಿಯ ಏರಿಕೆ ಕಂಡು ಬಂದಿಲ್ಲ. ಆದರೆ, ವಾಣಿಜ್ಯ ಸಿಲಿಂಡರ್ ಬೆಲೆಯಲ್ಲಿ ಏರಿಕೆಯಾಗಿರುವ ಕಾರಣ ಇದೀಗ ಗ್ರಾಹಕರು 250 ಹೆಚ್ಚುವರಿ ಸೇರಿದಂತೆ 2,253 ರೂ. ಪಾವತಿ ಮಾಡಬೇಕಾಗಿದೆ. ಕಳೆದ ಮಾರ್ಚ್ ತಿಂಗಳಲ್ಲಿ ದೆಹಲಿಯಲ್ಲಿ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರ 105 ರೂ. ಹೆಚ್ಚಳ ಮಾಡಲಾಗಿತ್ತು. ಇದರ ಬೆನ್ನಲ್ಲೇ ಇದೀಗ ಮತ್ತೊಮ್ಮೆ ಏರಿಕೆಯಾಗಿದೆ. ಅಂತರರಾಷ್ಟ್ರೀಯ ತೈಲ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಯಲ್ಲಿ ಗಣನೀಯವಾದ ಹೆಚ್ಚಳ ಕಂಡು ಬರುತ್ತಿರುವ ಕಾರಣ ಅನಿಲ ಬೆಲೆ ಏರಿಕೆಯಾಗಿದೆ. ಮುಂಬರುವ ದಿನಗಳಲ್ಲಿ ಅಡುಗೆ ಅನಿಲ ದರದಲ್ಲಿ ಮತ್ತಷ್ಟು ಹೆಚ್ಚಳವಾಗುವ ಸಾಧ್ಯತೆ ಇದೆ. ಈ ನಡುವೆ ಪೆಟ್ರೋಲ್ ಮತ್ತು ಡೀಸಲ್ ದರ ಕೂಡ ಏರಿಕೆಯಾಗಿದೆ. ಬೆಂಗಳೂರಿನಲ್ಲಿ ಲೀಟರ್ ಪೆಟ್ರೋಲ್ ದರ 107.30 ರೂ. ಹಾಗೂ ಲೀಟರ್ ಡೀಸೆಲ್ ದರ 91.27 ರೂ. ದಾಖಲಾಗಿದೆ. ಹೈದರಾಬಾದ್‌ನಲ್ಲಿ ಲೀಟರ್ ಪೆಟ್ರೋಲ್ ದರ 115.42 ರೂ. ಹಾಗೂ ಲೀಟರ್ ಡೀಸೆಲ್ ದರ 101.58 ರೂ., ಕೇರಳದ ತಿರುವನಂತಪುರಂನಲ್ಲಿ ಲೀಟರ್ ಪೆಟ್ರೋಲ್‌ಗೆ 113.27 ರೂ. ಇದ್ದು, ಲೀಟರ್ ಡೀಸೆಲ್ ಬೆಲೆ 100.16 ರೂ. ನಿಗದಿಯಾಗಿದೆ.

ನಿರೀಕ್ಷಣಾ ಜಾಮೀನು ಕೋರಿ ಸಚಿವ ವಿ.ಸೋಮಣ್ಣ ಸಲ್ಲಿಸಿದ್ದ ಅರ್ಜಿ ವಜಾ



ಬೆಂಗಳೂರು, ಏ. 1– ಆದಾಯ ಮೀರಿ ಆಸ್ತಿ ಗಳಿಕೆ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ವಿ.ಸೋಮಣ್ಣ ನಿರೀಕ್ಷಣಾ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಜನಪ್ರತಿನಿಧಿಗಳ ವಿಶೇಷ ಕೋರ್ಟ್ ವಜಾಗೊಳಿಸಿದೆ. ಸಚಿವ ಸೋಮಣ್ಣ ವಿರುದ್ಧ ಆದಾಯ ಮೀರಿ ಆಸ್ತಿಗಳಿಕೆ ಆರೋಪದ ಮೇಲೆ 2013ರಲ್ಲಿ ರಾಮಕೃಷ್ಣ ಎಂಬುವವರು ದೂರು ನೀಡಿದ್ದರು. ಈ ಸಂಬಂಧ 2016ರಲ್ಲಿ ತನಿಖೆ ನಡೆಸಿ ವರದಿ ನೀಡುವಂತೆ ಲೋಕಾಯುಕ್ತ ಪೊಲೀಸರಿಗೆ ಕೋರ್ಟ್ ಸೂಚನೆ ನೀಡಿತ್ತು. ತನಿಖೆ ನಡೆಸಿ ಪೊಲೀಸರು ಸಲ್ಲಿಸಿದ್ದ ಬಿ ರಿಪೋರ್ಟ್ ಅನ್ನು ಕೋರ್ಟ್ ತಿರಸ್ಕರಿಸಿ ಸಮನ್ಸ್ ಜಾರಿ ಮಾಡಿತ್ತು.

21ನೇ ರಾಷ್ಟ್ರೀಯ ಜ್ಯೂ. ಚಾಂಪಿಯನ್ ಷಿಪ್ ಪಂದ್ಯಾವಳಿಯಲ್ಲಿ

ಮೈಸೂರಿನ ಬಾಲಕಿಗೆ ಕಂಚಿನ ಪದಕ

ಮೈಸೂರು,ಏ.1(ಆರ್‌ಕೆಬಿ)– ತಮ್ಮ ವುಶು ಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಿರುವ ಏಳು ವರ್ಷ ವಯಸ್ಸಿನ ಜಿ.ಪ್ರಣತಿ ರಾಜ್ಯ ಮಟ್ಟದ 21ನೇ ರಾಷ್ಟ್ರೀಯ ಸಬ್ ಜ್ಯೂನಿಯರ್ ಚಾಂಪಿಯನ್ ಷಿಪ್ ಪಂದ್ಯಾವಳಿಯಲ್ಲಿ ಕಂಚಿನ ಪದಕ ಗಳಿಸಿದ್ದಾಳೆ ಎಂದು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಧರ್ಮ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಾಲಕಿ ಪ್ರಣತಿ ಗಾಯತ್ರಿಪುರಂನ ಪೊಲೀಸ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ. ವಯಸ್ಸಿನ ದೃಷ್ಟಿಯಿಂದ ಗಮನಿಸಿದಲ್ಲಿ ರಾಷ್ಟ್ರ ಮಟ್ಟದಲ್ಲಿ ವುಶು ಕ್ರೀಡೆಯಲ್ಲಿ ಅತಿ ಕಡಿಮೆ ವಯಸ್ಸಿಗೆ ಪದಕ ಪಡೆದ ರಾಷ್ಟ್ರದ ಏಕೈಕ ಪಟುವಾಗಿದ್ದಾರೆ ಎಂದರು.

ವುಶು ಕ್ರೀಡೆ ಸಾಂಪ್ರದಾಯಿಕ ಸಮರ ಕಲೆಯಾಗಿದ್ದು, ಈ ಕ್ರೀಡೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪ್ರೋತ್ಸಾಹವಿದೆ. ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ತರಬೇತಿ ನೀಡುತ್ತಿದ್ದು, ಅತಿ ಕಡಿಮೆ ಆದಾಯವುಳ್ಳವರು ಸಹ ತಮ್ಮ ಮಕ್ಕಳಿಗೆ ಕಲಿಸಬಹುದಾಗಿದೆ. ಇದರಿಂದಾಗಿ ಶಿಕ್ಷಣ ಹಾಗೂ ಉದ್ಯೋಗಗಳಲ್ಲಿ ಉತ್ತಮ ಅವಕಾಶ ದೊರಕುವಂತಾಗುತ್ತದೆ ಎಂದರು. ಗೋಷ್ಠಿಯಲ್ಲಿ ವುಶು ಪಟು ಜಿ.ಪ್ರಣತಿ, ತಂದೆ ಗಿರಿಧರ್, ತಾಯಿ ಸಂಗೀತಾ, ತರಬೇತುದಾದ ಆಸಿಫ್ ಉಪಸ್ಥಿತರಿದ್ದರು.


ಸಮಾನ ಮನಸ್ಕರ ಬಳಗದಿಂದ ಶ್ರೀ ಶಿವಕುಮಾರ ಸ್ವಾಮೀಜಿ ಜಯಂತಿ



ಮೈಸೂರು: ಸಮಾನ ಮನಸ್ಕರ ಬಳಗದ ವತಿಯಿಂದ ಡಾ.ಶ್ರೀ ಶಿವಕುಮಾರ ಸ್ವಾಮೀಜಿಯವರ ಜಯಂತಿಯನ್ನು ಮೈಸೂರಿನ ಗಾಂಧಿಚೌಕದಲ್ಲಿ ಆಚರಿಸಲಾಯಿತು.

ಶ್ರೀಗಳ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಬಿಜೆಪಿ ಮುಖಂಡ ಎಲ್.ಚೌಡಪ್ಪ, ಶ್ರೀಗಳು ಬಸವಣ್ಣನವರ ಭಕ್ತಿ, ಅನ್ನ ಮತ್ತು ಅಕ್ಷರ ದಾಸೋಹದ ಉದಾತ್ತ ಧ್ಯೇಯ ಅಳವಡಿಸಿಕೊಂಡಿದ್ದರು. ಅವರು ಸಾವಿರಾರು ಮಕ್ಕಳಿಗೆ ಶಿಕ್ಷಣ ಕಲ್ಪಿಸಿದ್ದಾರೆ. ರಾಜ್ಯದ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯ ಅಮೂಲಾಗ್ರ ಸುಧಾರಣೆಗೆ ಶ್ರೀಗಳ ಕೊಡುಗೆ ಅಪಾರ ಎಂದು ಸ್ಮರಿಸಿದರು.

ಇದೆ ಸಂದರ್ಭದಲ್ಲಿ ಸಾರ್ವಜನಿಕರಿಗೆ ಸಿಹಿ ಮತ್ತು ಮಜ್ಜಿಗೆ ವಿತರಿಸಲಾಯಿತು. ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷರಾದ ಎಸ್.ಸೋಮಣ್ಣ, ಕೆ.ಉಮಾಶಂಕರ್, ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎಸ್.ಅರವಿಂದ, ಎಂ.ಚಿಕ್ಕವೆಂಕಟು, ಒಕ್ಕಲಿಗರ ಸಂಘದ ನಿರ್ದೇಶಕ ಎ.ರವಿ. ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರಾದ ಸೋಮಣ್ಣ, ಎಸ್.ಕೃಷ್ಣಕುಮಾರ್, ಬಿ.ಕುಮಾರ್, ಸಂತೋಷ್, ಯತಿ, ನಜರಬಾದ್‌ನ ಪೈರಾಜು, ಕ್ಯಾತಮಾರನಹಳ್ಳಿ ರಾಜು, ಹೋಟೆಲ್ ಗಂಗಣ್ಣ, ಅರುಣ, ಮಹೇಶ್ ನಾಯಕ ಮತ್ತಿತರರು ಹಾಜರಿದ್ದರು.



ಮೈಸೂರಿನ ಬಸವ ಸೇನೆ ವತಿಯಿಂದ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಅವರ 115ನೇ ಜಯಂತಿ ಅಂಗವಾಗಿ ಅಗ್ರಹಾರದ 101 ಗಣಪತಿ ದೇವಸ್ಥಾನದ ಎದುರು ಶ್ರೀಗಳ ಭಾವ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಸಾರ್ವಜನಿಕರಿಗೆ ಎಳನೀರು, ಬಾಳೆ ಹಣ್ಣು ವಿತರಿಸಲಾಯಿತು. ಬಿಜೆಪಿ ಕೆ.ಆರ್.ಕ್ಷೇತ್ರದ ಉಪಾಧ್ಯಕ್ಷ ಸಂತೋಷ್ ಶಂಭು, ಸೇನೆಯ ರಾಜ್ಯಾಧ್ಯಕ್ಷ ಮನು ಶೈವ್, ಮುಖಂಡರಾದ ರಾಯಲ್ ಪ್ರಸಾದ್, ಚಂದನ್, ಶಶಾಂಕ್ ಮತ್ತಿತರರಿದ್ದರು.

ತಿ.ನರಸೀಪುರದಲ್ಲಿ ಶಿವಕುಮಾರಶ್ರೀಗಳ ಸ್ಮರಣೆ



ತಿ.ನರಸೀಪುರ, ಏ.1(ಎಸ್‌ಕೆ)– ತ್ರಿವಿಧ ದಾಸೋಹಿ, ನಡೆದಾಡುವ ದೇವರೆಂದೇ ಖ್ಯಾತರಾದ ಡಾ.ಶಿವಕುಮಾರ ಸ್ವಾಮೀಜಿಗಳ 115ನೇ ಜಯಂತೋತ್ಸವ ಅಂಗವಾಗಿ ಪಟ್ಟಣದ ಶಿವಕುಮಾರಶ್ರೀಗಳ ಸ್ಮರಣೆಯೊಂದಿಗೆ ವಿವಿಧೆಡೆ ಪೂಜೆ ಹಾಗೂ ಅನ್ನ ಸಂತರ್ಪಣೆ ನಡೆಯಿತು.

ಪಟ್ಟಣದ ಲಿಂಕ್ ರಸ್ತೆಯಲ್ಲಿರುವ ಪಿಎಸಿಎಸ್ ನಿರ್ದೇಶಕ ಶೇಖರ್ ಅವರು ತಮ್ಮ ಅಂಗಡಿ ಮುಂದೆ ಡಾ.ಶ್ರೀಶಿವಕುಮಾರಸ್ವಾಮೀಜಿ ಜಯಂತಿ ಅಂಗವಾಗಿ ಭಕ್ತರಿಗೆ ಅನ್ನ ದಾಸೋಹ ಏರ್ಪಡಿಸಿದ್ದರು. ಸಿದ್ಧಗಂಗಾ ಶ್ರೀಶಿವಕುಮಾರಸ್ವಾಮೀಜಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಸ್ತೋತ್ರಗಳನ್ನು ಪಠಿಸಲಾಯಿತು. ಈ ವೇಳೆ ಮಾತ ನಾಡಿದ ಪಿಎಸಿಎಸ್ ಅಧ್ಯಕ್ಷ ಡಣಾಯಕನಪುರ ಮಲ್ಲಣ್ಣ ಶ್ರೀಯವರ ಬದುಕಿನಿಂದ ದೊರೆತಿರುವ ಪ್ರೇರಣೆಯ ಆಚರಣೆ ದಿನ ಇದಾಗಿದ್ದು, ಇಂದಿನ ಪೀಳಿಗೆಗೆ ಶ್ರೀಗಳ ವಿಚಾರಧಾರೆ ತಿಳಿಸುವ ಅರ್ಥಪೂರ್ಣ ಕಾರ್ಯ ಕ್ರಮವಾಗಬೇಕಿದೆ ಎಂದರು.

ಶ್ರೀಸಿದ್ಧಗಂಗಾ ಮಠದ ಶಿಕ್ಷಣ ಹಾಗೂ ದಾಸೋಹ ಪರಂಪರೆಗಳು ಇಡೀ ದೇಶಕ್ಕೆ ಮಾದರಿಯಾಗಿದ್ದು, ಶ್ರೀಗಳು ಎಂದೆಂದಿಗೂ ಅಮರವಾಗಿರುತ್ತಾರೆ ಎಂದರು.

ಪಿಎಸಿಎಸ್ ನಿರ್ದೇಶಕ ಶೇಖರ್ ಮಾತನಾಡಿ, ಸಿದ್ಧಗಂಗಾಶ್ರೀಗಳ 115ನೇ ಜಯಂತಿಯನ್ನು ಮೊದಲ ಬಾರಿಗೆ ಆಚರಿಸುತ್ತಿದ್ದು, ಶ್ರೀಗಳ ಆಶೀರ್ವಾದದಿಂದ ಪ್ರತಿ ವರ್ಷ ಪ್ರಸಾದ ವಿನಿಯೋಗ ಮಾಡುವ ಸಂಕಲ್ಪ ಮಾಡಿದ್ದೇನೆ. ಸಿದ್ದಗಂಗಾ ಮಠದಲ್ಲಿ ಪ್ರತಿನಿತ್ಯ 7 ರಿಂದ 8 ಸಾವಿರ ಮಕ್ಕಳಿಗೆ ದಾಸೋಹ ಮಾಡಲಾಗುತ್ತಿದೆ. ಇಂದು ಶ್ರೀಗಳ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಪ್ರಸಾದ ವಿನಿಯೋಗ ಮಾಡಲಾಗುತ್ತಿದೆ. ಅವರು ಇಂದು ನಮ್ಮೊಂದಿಗೆ ಭೌತಿಕವಾಗಿ ಇಲ್ಲದಿದ್ದರೂ, ಶ್ರೀಗಳು ಭಕ್ತರ ಆತ್ಮದಲ್ಲಿ ಎಂದೂ ಚಿರಸ್ಥಾಯಿಯಾಗಿ ಇರುತ್ತಾರೆ ಎಂದರು. ಇದೇ ವೇಳೆ ಭಕ್ತರಿಗೆ ಪ್ರಸಾದ ವ್ಯವಸ್ಥೆ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ವೀರಶೈವ ಸಮಾಜದ ಅಧ್ಯಕ್ಷ ಶಾಂತರಾಜು, ಉಪಾಧ್ಯಕ್ಷ ಶಿವ ಪ್ರಸಾದ್, ಎಂಸಿಡಿಸಿಸಿ ಬ್ಯಾಂಕ್ ಮೇಲ್ವಿಚಾರಕ ರಾಜಪ್ಪ ಟಿಎಪಿಸಿಎಂಎಸ್ ಕಾರ್ಯದರ್ಶಿ ಜಿ.ರಘು ನಂದನ್, ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಟಿಎಪಿಸಿಎಂಎಸ್ ನಿರ್ದೇಶಕ ಫ್ಯಾನ್ಸಿ ಮೋಹನ್, ಗ್ರಾಪಂ ಸದಸ್ಯ ಮಹದೇವಸ್ವಾಮಿ, ನಾಗೇಶ್, ನೂತನ್, ತಿರುಮಕೂಡಲು ಲಕ್ಷ್ಮಣ, ಪ್ರವೀಣ್ ಕುಮಾರ್, ಸಿ.ಬಿ.ಹುಂಡಿ ಸಿದ್ದು, ಮಹೇಶ್ ಮತ್ತಿತರರಿದ್ದರು.

ಬನ್ನಿಕುಪ್ಪೆಯಲ್ಲಿ ವಿದ್ಯಾರ್ಥಿ ನಿಲಯ ಕಟ್ಟಡ ಕಾಮಗಾರಿಗೆ ಚಾಲನೆ



ಹುಣಸೂರು, ಏ.1(ಕೆಕೆ)– ತಾಲೂಕಿನ ಬನ್ನಿಕುಪ್ಪೆಯಲ್ಲಿ ಶಾಸಕ ಹೆಚ್.ಪಿ.ಮಂಜುನಾಥ್ 3.65 ಕೋಟಿ ರೂ. ವೆಚ್ಚದ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದ 3 ಅಂತಸ್ತಿನ ಕಟ್ಟಡ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಕಳೆದ 10 ವರ್ಷಗಳಿಂದ ಬಾಡಿಗೆ ಮನೆಯಲ್ಲಿ ವಿದ್ಯಾರ್ಥಿ ನಿಲಯ ನಡೆಸಲಾಗುತ್ತಿತ್ತು. ಆದರೆ 4 ವರ್ಷಗಳಿಂದ ಸರ್ಕಾರಿ ಭೂಮಿ ವ್ಯಾಜ್ಯ ನ್ಯಾಯಾಲಯದಲ್ಲಿದ್ದ ಕಾರಣ ತಡವಾಗಿ ಕಾಮಗಾರಿಗೆ ಆದೇಶ ಸಿಕ್ಕಿದೆ. ಈ ವಿದ್ಯಾರ್ಥಿ ನಿಲಯ ನಿರ್ಮಾಣದಿಂದ ಇಲ್ಲಿನ ಸುತ್ತಮುತ್ತಲ 26 ಹಳ್ಳಿಗಳ ನೂರಾರು ಶಾಲಾ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಇದರಲ್ಲಿ ಇಲಾಖಾನುಸಾರ ಪರಿಶಿಷ್ಟ ಜಾತಿ, ಪಂಗಡ ಹಾಗೂ ಇತರೆ ಮಕ್ಕಳಿಗೂ ಅವಕಾಶವಿದ್ದು, ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಇದೇ ವೇಳೆ ವಿದ್ಯಾರ್ಥಿಗಳಿಗೆ ಸಂವಿಧಾನ ಪುಸ್ತಕ ವಿತರಿಸಿದರು. ಗ್ರಾಪಂ ಅಧ್ಯಕ್ಷೆ ಹೆಚ್.ಸಿ.ಬೇಬಿ, ಎಸಿ ವರ್ಣಿತ್ ನೇಗಿ, ತಹಸೀಲ್ದಾರ್ ಡಾ.ಅಶೋಕ್, ಸಮಾಜ ಕಲ್ಯಾಣ ಇಲಾಖಾಧಿಕಾರಿ ಮೋಹನ್ ಕುಮಾರ್, ತಾಪಂ ಇಓ ಗಿರೀಶ್, ಕಾಂಗ್ರೆಸ್ ಮುಖಂಡ ಲೋಕೇಶ್ ನಾಯಕ, ಗ್ರಾಪಂ ಸದಸ್ಯ ನಿಂಗೇಗೌಡ, ರೇವಣ್ಣಚಾರಿ, ಚಂದ್ರೇಗೌಡ, ಚಂದ್ರಶೇಖರ್, ಮುಖಂಡರಾದ ಕುಮಾರ್, ರವಿಗೌಡ ಹಾಗೂ ಯಜಮಾನ್ ಕೂಸಪ್ಪ ಮತ್ತು ಇಲಾಖಾಧಿಕಾರಿಗಳು, ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಜಯಪುರ ಹೋಬಳಿ ಡಿ.ಸಾಲುಂಡಿಯಲ್ಲಿ ಅಪ್ಪು ಪುಣ್ಯಸ್ಮರಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ಶಾಸಕ ಜಿ.ಟಿ.ದೇವೇಗೌಡ ಡಾ.ಪುನೀತ್ ರಾಜ್‌ಕುಮಾರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಮೈಸೂರು ತಾಲೂಕು ಎಪಿಎಂಸಿ ಸದಸ್ಯ ಕೋಟೆಹುಂಡಿ ಮಹದೇವು, ಮಾಕಿ ಮಹದೇವು, ಕೆಂಚಪ್ಪ, ಮರೀಗೌಡ, ರವಿ, ಉದ್ಯಮಿ ಬಸಪ್ಪ, ಶಿವಲಿಂಗಪ್ಪ, ನಂಜುಂಡೇಗೌಡ, ಧನಗಹಳ್ಳಿ ಗ್ರಾಪಂ ಸದಸ್ಯರಾದ ಕೋಟೆಹುಂಡಿ ಸುರೇಶ್, ಕೃಷ್ಣ, ಬಸಪ್ಪ ಮತ್ತು ಗ್ರಾಮಸ್ಥರಿದ್ದರು.

ಡಿ.ಬಿ.ಕುಪ್ಪೆಯಲ್ಲಿ ಭಾರೀ ಮಳೆ: ಅಪಾರ ಹಾನಿ



ಹಂಪಾಪುರ, ಏ.1(ರಾಜೇಶ್)– ಭಾರೀ ಮಳೆಗೆ ಮನೆ ಮೇಲ್ಛಾವಣಿ ಹಾರಿ ಹೋಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿರುವ ಘಟನೆ ಹೆಚ್.ಡಿ.ಕೋಟೆ ತಾಲೂಕಿನ ಡಿ.ಬಿ.ಕುಪ್ಪೆ ಗ್ರಾಮದಲ್ಲಿ ಶುಕ್ರವಾರ ಸಂಜೆ ನಡೆದಿದೆ.

ಇಂದು ಸಂಜೆ 5 ಗಂಟೆ ವೇಳೆಗೆ ಆರಂಭವಾದ ಬಿರುಗಾಳಿ ಸಹಿತ ಭಾರೀ ಮಳೆಗೆ ಸಮೀರ್ ಅವರ ಮನೆ ಮೇಲ್ಛಾವಣಿ ಹಾರಿ ಹೋಗಿ ದಿನಬಳಕೆಯ ವಸ್ತುಗಳು ಸಂಪೂರ್ಣ ನಾಶವಾಗಿದ್ದು, ಅಂದಾಜು 5 ಲಕ್ಷ ರೂ. ನಷ್ಟ ಸಂಭವಿಸಿದೆ ಎನ್ನಲಾಗಿದೆ. ಅಲ್ಲದೇ ಈ ವೇಳೆ ಮನೆಯೊಳಗೆ ಶೀಟ್‌ಗಳು ಬಿದ್ದಿದ್ದು, ಸಮೀರ್ ಅವರ ಪತ್ನಿ ಅನ್ಸಿಲ್ಲಾ, ಮಕ್ಕಳಾದ ಸಲ್ಮಾನ್ ಫಾರಿಸ್, ಶಾನುಜಾ, ಸುಲ್ತಾನಾ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಕೂಡಲೇ ಮಳೆಯಿಂದ ಹಾನಿಗೊಳಗಾಗಿ ಮನೆ ಕಳೆದುಕೊಂಡು ನಿರಾಶ್ರಿತರಾಗಿರುವ ಈ ಕುಟುಂಬಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಭೇಟಿ ನೀಡಿ ಪರಿಹಾರ ಕಲ್ಪಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ವಿಜೃಂಭಣೆಯ ಮೂಗುಮಾರಮ್ಮ ಹಬ್ಬ ಆಚರಣೆ

ಹೆಚ್.ಡಿ.ಕೋಟೆ, ಏ.1(ಮಂಜು)– ತಾಲೂಕಿನ ಕ್ಯಾತನಹಳ್ಳಿ ಗ್ರಾಮದೇವತೆ ಮುಗುಮಾರಮ್ಮ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.



ಮಾರಮ್ಮ ದೇವತೆ ಉತ್ಸವ ಮೂರ್ತಿಯನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಭಕ್ತರು ಬಾಯಿಗೆ ಬೀಗ ಹಾಕಿಸಿಕೊಂಡು ತಮಟೆ ಮಂಗಳವಾದ್ಯಗಳೊಂದಿಗೆ ಮೆರವಣಿಗೆ ಮಾಡಲಾಯಿತು. ನಂತರ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಿ ವಿವಿಧ ಪೂಜೆಗಳನ್ನು ನೆರವೇರಿಸಲಾಯಿತು. ಈ ವೇಳೆ ಮುಖಂಡರಾದ ಕ್ಯಾತನಹಳ್ಳಿ ನಾಗರಾಜು, ಎಸ್.ಬೀರೇಗೌಡ, ಜೆ.ಜಗನ್ನಾಥ್, ವೆಂಕಟರಾಜು, ಹೆಚ್.ಪ್ರಕಾಶ್, ಗೋವಿಂದರಾಜು, ನಿಂಗಣ್ಣಸ್ವಾಮಿ, ಕಾಳಸೋಮಪ್ಪ, ಕಲ್ಯಾಣ ಕುಮಾರ್, ವೆಂಕಣ್ಣಸ್ವಾಮಿ, ಸಣ್ಣಸ್ವಾಮಿ, ಶಿವರಾಜು, ಚಿಕ್ಕಮಾಲೇಗೌಡ, ಮಹದೇವಪ್ಪ, ಹೆಚ್.ಮಂಜು, ಪುಟ್ಟೇಗೌಡ, ಕೃಷ್ಣೇಗೌಡ, ಚೆಲುವರಾಜು, ರವಿಕುಮಾರ್, ನಿತ್ಯಾನಂದ, ಮೂರ್ತಿ, ಪ್ರಸನ್ನ, ಕೆ.ಟಿ. ಬಸಪ್ಪ, ಬೀರೇಶ, ಮಹದೇವಶೆಟ್ಟಿ ಉಪಸ್ಥಿತರಿದ್ದರು.

ಶ್ರೀಚಿಕ್ಕದೇವಮ್ಮನವರ ಜಾತ್ರಾ ಮಹೋತ್ಸವ

ಹೆಚ್.ಡಿ.ಕೋಟೆ, ಏ.1(ಮಂಜು)– ತಾಲೂಕಿನ ಹಾಲುಗಡಿ ಮತ್ತು ಇಟ್ನಾ ಗ್ರಾಮದಲ್ಲಿ ಏ.2ರಿಂದ 4 ರವರೆಗೆ ಶ್ರೀಚಿಕ್ಕದೇವಮ್ಮನವರ ಜಾತ್ರಾ ಮಹೋತ್ಸವ ನಡೆಯಲಿದೆ.



ಚಂದ್ರಮಾನ ಯುಗಾದಿ ಹಬ್ಬದ ದಿನ ಬೆಳಗ್ಗೆ ಶ್ರೀಚಿಕ್ಕದೇವಮ್ಮನ ಬೆಟ್ಟದಿಂದ ಅಮ್ಮನವರ ಉತ್ಸವ ಮೂರ್ತಿಯನ್ನು ಹಾಲುಗಡಿ ಜಪದಕಟ್ಟೆ ಗಡಿಗೆ ವಿಶೇಷ ಸಲ್ಲಿಸಲಾಗುವುದು. ನಂತರ ಮಧ್ಯಾಹ್ನ 3 ಗಂಟೆಗೆ ಅಮ್ಮನವರ ಉತ್ಸವ ಮೂರ್ತಿ ಯನ್ನು ಗೂಳಿ ಹಾಗೂ ಹಾಲಿ ಮಂಟಪದಲ್ಲಿ ಪ್ರತಿಷ್ಠಾಪಿಸಿ ಪೂಜಿಸಲಾಗುವುದು. ಸಂಜೆ 4 ಗಂಟೆಗೆ ಹಾಲುಗಡಿಯಿಂದ ಇಟ್ನಾ ಗ್ರಾಮಕ್ಕೆ ಮೆರವಣಿಗೆಯಲ್ಲಿ ತೆರಳುವ ಉತ್ಸವ ಮೂರ್ತಿಯನ್ನು ಮಠದ ಹೊಲದ ಮಂಟಪದಲ್ಲಿ ಪೂಜಿಸಿ ರಾತ್ರಿ 9 ಗಂಟೆಗೆ ಶ್ರೀಚಿಕ್ಕದೇವಮ್ಮನವರನ್ನು ಕುದುರೆ ವಾಹನದ ಮೇಲೆ ಕುರಿಸಿ ಹೂವಿನಿಂದ ಅಲಂಕಾರ ಮಾಡಿ ಸತ್ತಿಗೆ, ಸುರಪಾನಿ, ಕೋಲಾಟ, ನಗಾರಿ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಗುವುದು. ಅಲ್ಲದೇ ಬೆಳಗಿನ ಜಾವ 4 ಗಂಟೆಗೆ ಬಾಣ ಬಿರುಸಿನ ಸಮೇತ ಪಟಾಕಿ ಸಿಡಿಸಿ ಮಾರಮ್ಮನ ದೇವಾಲಯದಲ್ಲಿ ದೇವಿಯನ್ನು ಪೂಜಿಸಲಾಗುವುದು.

ಏ.3 ರಂದು ಬೆಳಗ್ಗೆ 8 ಗಂಟೆಗೆ ಕಪಿಲಾ ನದಿಯಲ್ಲಿ ಚಿಕ್ಕದೇವಮ್ಮನವರಿಗೆ ತೀರ್ಥೋತ್ಸವ, ಕುಂಕುಮಾರ್ಚನೆ, ಮಹಾ ಮಂಗಳಾರತಿ ಮಾಡಲಾಗುವುದು. ನಂತರ ಸತ್ತಿಗೆಗಳು, ಕೀಲುಕುದುರೆ, ಮೈಸೂರಿನ ಬ್ರಾಸ್ ಬ್ಯಾಂಡ್ ಸೆಟ್, ವೀರಗಾಸೆ, ಚಿಕ್ಕಮಗಳೂರಿನ ಹೆಸರಾಂತ ವೀರಗಾಸೆ, ಡೊಳ್ಳುಕುಣಿತ, ವಾದ್ಯಗೋಷ್ಠಿ ಸಮೇತ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಸಂಜೆ 6 ಗಂಟೆಗೆ ಮಠದ ಹೊಲದ ಮಂಟಪದಲ್ಲಿ ಪೂಜೆ ಸಲ್ಲಿಲಾಗುವುದು. ಅಲ್ಲದೆ ಅಂದು ಆಗಮಿಸುವ ಭಕ್ತಾದಿಗಳಿಗೆ ಶಾಸಕ ಅನಿಲ್ ಚಿಕ್ಕಮಾದು ಅನ್ನ ಸಂತರ್ಪಣೆ ಏರ್ಪಡಿಸಿದ್ದಾರೆ.

ಏ.4ರಂದು ಮಧ್ಯಾಹ್ನ 12ಗಂಟೆಗೆ ಪೂಜೆ ಸಲ್ಲಿಸಿ, ಇಟ್ನಾ ಗ್ರಾಮದಿಂದ ಹೊರಟು ಹಾಲುಗಡಿ ಗ್ರಾಮದ ಜಪದಕಟ್ಟೆಯಲ್ಲಿ ಸಂಜೆ 4 ಗಂಟೆವರೆಗೆ ಎಡೆಪೂಜೆ, ತಳಗೆ ಪೂಜೆ, ಮಹಾಮಂಗಳಾರತಿ ನೆರವೇರಿಸಿದ ಬಳಿಕ ಅಮ್ಮನವರ ಉತ್ಸವ ಮೂರ್ತಿ ಶ್ರೀ ಚಿಕ್ಕದೇವಮ್ಮನವರ ಬೆಟ್ಟಕ್ಕೆ ಹೊರಡಲಿದೆ.

ಬೈಕ್‌ಗೆ ಆಟೋ ಡಿಕ್ಕಿ: ಸವಾರ ಸಾವು

ಕೆ.ಆರ್.ನಗರ, ಏ.1– ಬೈಕ್‌ಗೆ ಆಟೋ ಡಿಕ್ಕಿ ಹೊಡೆದ ಪರಿಣಾಮ ಸವಾರ



ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಕುಂಬಾರಕೊಪ್ಪಲು ಗ್ರಾಮದ ಬಳಿಯ ಮೈಸೂರು–ಹಾಸನ ಮುಖ್ಯ ರಸ್ತೆಯಲ್ಲಿ ಶುಕ್ರವಾರ ಬೆಳಗ್ಗೆ ನಡೆದಿದೆ.

ಸಾಲಿಗ್ರಾಮ ತಾಲೂಕಿನ ಹನಸೋಗೆ ಗ್ರಾಮದ ನಿವಾಸಿ ಹಾಗೂ ಹಾರಂಗಿ ನೀರಾವರಿ ಇಲಾಖೆಯ ಸಹಾಯಕ ಕಾರ್ಯ ಪಾಲಕ ಅಭಿಯಂತರ ಹೆಚ್.ಆರ್.ಪ್ರಕಾಶ್(59) ಸಾವನ್ನಪ್ಪಿದವರು. ಇವರು ಬೈಕ್‌ನಲ್ಲಿ ತಮ್ಮ ಜೀಪ್ ಚಾಲಕ ಮೂರ್ತಿ ಅವರೊಂದಿಗೆ ತೆರಳುತ್ತಿದ್ದರು. ಈ ವೇಳೆ ಹಿಂದಿನಿಂದ ಬಂದ ಆಟೋ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಕೆಳಗೆ ಬಿದ್ದು ತೀವ್ರ ಗಾಯಗೊಂಡ ಪ್ರಕಾಶ್ ಸ್ಥಳದಲ್ಲೇ ಸಾವನ್ನಪ್ಪಿದ್ದರೆ, ಮೂರ್ತಿ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ದಾಖಲಾಗಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪಟ್ಟಣ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಪ್ರಕಾಶ್ ಮೃತದೇಹವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವಾರಸುದಾರರಿಗೆ ಒಪ್ಪಿಸಲಾಯಿತು. ಈ ಸಂಬಂಧ ಕೆ.ಆರ್.ನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಬಿಜೆಪಿ ದುರಾಡಳಿತ ಖಂಡಿಸಿ ಎಸ್‌ಡಿಪಿಐ ಪ್ರತಿಭಟನೆ



ಹುಣಸೂರು, ಏ.1(ಕೆಕೆ)– ಬಿಜೆಪಿ ಸರ್ಕಾರದ ದುರಾಡಳಿತ ಖಂಡಿಸಿ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಕಾರ್ಯಕರ್ತರು ನಗರದ ಸಂವಿಧಾನ ಸರ್ಕಲ್‌ನಲ್ಲಿ ಪ್ರತಿಭಟನೆ ನಡೆಸಿದರು.

ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಮಜಾಜ್ ಅಹಮದ್ ಮಾತನಾಡಿ, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಒಂದಲ್ಲ ಒಂದು ಅರಾಜಕತೆ ಸೃಷ್ಟಿಸುವ ಮೂಲಕ ಅಲ್ಪ ಸಂಖ್ಯಾತರನ್ನು ಕಡೆಗಣಿಸುತ್ತಿದೆ ಎಂದರು. ರಾಜ್ಯ ಸರ್ಕಾರ ಪಠ್ಯ ಪುಸ್ತಕದಿಂದ ಟಿಪ್ಪು ಸುಲ್ತಾನ್ ಸಾಧನೆಗಳನ್ನು ಕೈಬಿಡಲು ಹುನ್ನಾರ ನಡೆಸುತ್ತಿದೆ. ಮುಸ್ಲಿಂ ವ್ಯಾಪಾರಿಗಳಿಗೆ ಬಹಿಷ್ಕಾರ, ಸಂಘ ಪರಿವಾರದ ನಾಯಕರ ಕೇಸ್‌ಗಳನ್ನು ಹಿಂಪಡೆಯುವುದು, ಹಲಾಲ್ ಮಾಂಸದ ಬಹಿಷ್ಕಾರ, ಸರ್ಕಾರಿ ಶಾಲೆಗಳಲ್ಲಿ ಭಗವದ್ಗೀತೆ ಹೇರುವ ಹುನ್ನಾರ, ಅಲ್ಪ ಸಂಖ್ಯಾತರ ಶಾದಿ ಮಹಲ್ ಯೋಜನೆ ಕೈಬಿಟ್ಟ ವಿಚಾರ, ಕೊಲೆ ಸಂತ್ರಸ್ತರಿಗೆ ಪರಿಹಾರ ನೀಡುವುದರಲ್ಲಿ ತಾರತಮ್ಯ ನೀತಿ (ದಿನೇಶ್, ಶಮೀರ್, ಅಲ್ತಾಫ್), ಕಾಶ್ಮೀರಿ ಫೈಲ್ಸ್ ಚಿತ್ರ ಪ್ರದರ್ಶನಕ್ಕೆ ಒತ್ತಾಯ ಸೇರಿದಂತೆ ಹಲವು ವಿಚಾರಗಳಲ್ಲಿ ಕೇಂದ್ರ ಮತ್ತು ರಾಜ್ಯದ ಬಿಜೆಪಿ ಸರ್ಕಾರಗಳು ಅರಾಜಕತೆ ಆಡಳಿತ ನಡೆಸುತ್ತಿದ್ದು, ಇದನ್ನು ಖಂಡಿಸಿ ಇಂದು ಸಾಂಕೇತಿಕವಾಗಿ ಪ್ರತಿಭಟನೆ ಮಾಡುವ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇವೆ ಎಂದರು.

ಪ್ರತಿಭಟನೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸೈಯದ್ ಅಕ್ಬರ್, ಕಾರ್ಯದರ್ಶಿ ಸತೀಶ್, ಕೋಶಾಧಿಕಾರಿ ಲಿಯಾಖತ್ ಅಲಿ, ತಾಲೂಕು ಅಧ್ಯಕ್ಷ ಮಹಮದ್ ತಬ್ರೇಜ್, ಕಾರ್ಯದರ್ಶಿ ಮುಸ್ತಾಫಖಾನ್, ನಗರಸಭಾ ಸಾಮಾಜಿಕ ನ್ಯಾಯ ಸಮಿತಿ ಅಧ್ಯಕ್ಷ ಸೈಯದ್ ಯೂನಸ್, ಸಮೀನಾ ಇಮ್ರಾನ್, ಇಮಾನ್ಸ್ ಕೌನ್ಸಿಲ್‌ನ ಅಧ್ಯಕ್ಷ ಮಾಫ್ತಿಮುದ್ದಬೀರ್ ಸಾಹೇಬ್, ಅಕ್ಮಲ್, ತಾಲೂಕು ಆದಿಜಾಂಬವ ಸಂಘದ ಅಧ್ಯಕ್ಷ ಜೆ.ಮಹದೇವ್ರ ಇತರರಿದ್ದರು.

ಅನುಶ್ರೀ ಕುಟುಂಬದವರಿಗೆ ಸುನೀಲ್ ಬೋಸ್ ಸಾಂತ್ವನ



ತಿ.ನರಸೀಪುರ, ಏ. 1 (ಎಸ್‌ಕೆ) – ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲು ತೆರಳಿ ದುರಂತ ಸಾವಿಗೀಡಾದ ತಾಲೂಕಿನ ಅಕ್ಕೂರು ಗ್ರಾಮದ ವಿದ್ಯಾರ್ಥಿನಿ ಅನುಶ್ರೀ ಮನೆಗೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದ ವಸತಿ ಯೋಜನೆ ಜಾಗೃತಿ ಸಮಿತಿ ಮಾಜಿ ಅಧ್ಯಕ್ಷ ಸುನೀಲ್ ಬೋಸ್ ವೈಯಕ್ತಿಕವಾಗಿ ಧನ ಸಹಾಯ ನೀಡಿದರು.

ಈ ವೇಳೆ ಮಾತನಾಡಿದ ಅವರು, ಅನುಶ್ರೀ ಕುಟುಂಬಕ್ಕೆ ಆಕೆಯ ಸಾವಿನಿಂದ ತುಂಬಲಾರದ ನಷ್ಟ ಉಂಟಾಗಿದೆ. ಕಡು ಬಡತನದಲ್ಲಿ ಮಗಳಿಗೆ ಕಷ್ಟ ಪಟ್ಟು ಶಿಕ್ಷಣ ಕೊಡಿಸುತ್ತಿದ್ದ ತಂದೆ–ತಾಯಿ ಆಕೆಯ ಅಗಲಿಕೆಯಿಂದ ಕಂಗಾಲಾಗಿದ್ದಾರೆ. ಅನುಶ್ರೀ ತಂದೆ ಕೆಂಪರಾಜು ಮಗಳ ಸಾವಿನ ದುಃಖವನ್ನು ತಡೆದುಕೊಂಡು ಮತ್ತೊಬ್ಬ ಮಗನಿಗೆ ಉತ್ತಮ ಶಿಕ್ಷಣ ಕೊಡಿಸಲು ಮುಂದಾಗಬೇಕಿದೆ ಎಂದರು. ಸರ್ಕಾರವು ಸಹ ಮಗನ ಶಿಕ್ಷಣದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕೆಂದು ಅವರು ಒತ್ತಾಯಿಸಿದರು.

ಸರ್ಕಾರದ ವತಿಯಿಂದ ಒಂದು ಲಕ್ಷ ರೂ.ಗಳ ಪರಿಹಾರ ಧನ ನೀಡಲಾಗಿರುವುದು ಸ್ವಾಗತಾರ್ಹವಾಗಿದ್ದರೂ, ಒಂದು ಲಕ್ಷ ರೂ.ಗಳ ಮೊತ್ತ ಸಾಲದು. ಹಾಗಾಗಿ ಸರ್ಕಾರ ಮೃತಪಟ್ಟ ಅನುಶ್ರೀ ಕುಟುಂಬಕ್ಕೆ ಹೆಚ್ಚಿನ ಪರಿಹಾರ ಧನ ನೀಡುವಂತೆ ಹಾಗೂ ಮತ್ತಿತರೆ ಸೌಲಭ್ಯಗಳನ್ನು ಕಲ್ಪಿಸಿ ಕೊಡುವಂತೆ ಬೋಸ್ ಆಗ್ರಹಿಸಿದರು.

ಕ್ಷೇತ್ರದ ಶಾಸಕರು ಮುಂದೆ ನಿಂತು ಮೃತಳ ಕುಟುಂಬಕ್ಕೆ ದೊರಕಬೇಕಾದ ಸವಲತ್ತುಗಳನ್ನು ಕೊಡಿಸಿಕೊಡಲು ಮುಂದಾಗುವಂತೆ ಅವರು ಮನವಿ ಮಾಡಿದರು. ಈ ವೇಳೆ ಮುಖಂಡರಾದ ಕೆ.ಎಸ್. ಗಣೇಶ್, ಅಕ್ಕೂರು ಗುರುಮೂರ್ತಿ, ಅನೂಪ್ ಗೌಡ, ಬಸವರಾಜು ಮತ್ತಿತರರಿದ್ದರು.

ಬಾಬೂಜಿ ಜಯಂತಿ ಅದ್ದೂರಿ ಆಚರಣೆಗೆ ಸಿದ್ಧತೆ

ಅಧಿಕಾರಿಗಳಿಗೆ ಶಾಸಕ ಬಿ.ಹರ್ಷವರ್ಧನ್ ಸೂಚನೆ



ನಂಜನಗೂಡು, ಏ.1– ಡಾ.ಬಾಬು ಜಗಜೀವನರಾಂ ಅವರ 115ನೇ ಜಯಂತಿಯನ್ನು ಏ.5ರಂದು ನಗರದಲ್ಲಿ ಅದ್ದೂರಿಯಾಗಿ ಆಚರಿಸಲು ತೀರ್ಮಾನಿಸಲಾಗಿದ್ದು, ಸಕಲ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಶಾಸಕ ಬಿ.ಹರ್ಷವರ್ಧನ್ ಸೂಚಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸಮುದಾಯದ ಮುಖಂಡರ ಸಲಹೆ ಮೇರೆಗೆ ಅಂದು ಬೆಳಗ್ಗೆ ನಗರದ ಜೂನಿಯರ್ ಕಾಲೇಜು ಮೈದಾನದಿಂದ ಶ್ರೀಕಂಠೇಶ್ವರ ಕಲಾಮಂದಿರದವರೆಗೆ ವಿವಿಧ ಜಾನಪದ ಕಲಾ ತಂಡದೊಂದಿಗೆ ಡಾ.ಬಾಬು ಜಗಜೀವನರಾಂ ಭಾವಚಿತ್ರ ಮೆರವಣಿಗೆ ನಡೆಸಲು ಉದ್ದೇಶಿಸಲಾಗಿದೆ. ಮೆರವಣಿಗೆಯಲ್ಲಿ ಡಿಜೆ ಸೌಂಡ್ಸ್‌ಗೆ ನಿರ್ಬಂಧಿಸಲಾಗಿದೆ. ನಗರದ ಶ್ರೀಕಂಠೇಶ್ವರ ಕಲಾಮಂದಿರದಲ್ಲಿ ಅದ್ದೂರಿ ಸಮಾರಂಭ ನಡೆಸಲಾಗುವುದು. ಅಧಿಕಾರಿಗಳು ಶಿವರಾತ್ರಿ ಆಚರಣೆ, ಶ್ರೀಕಂಠೇಶ್ವರ ಜಾತ್ರೆ ಯಶಸ್ವಿಯಾಗಿ ನಡೆಸಿದಂತೆ ಈ ಜಯಂತಿಯನ್ನು ಯಶಸ್ವಿಗೊಳಿಸಲು ಕ್ರಮವಹಿಸಿ ಯಾವುದೇ ಕೊರತೆಯಾಗದಂತೆ ಸಕಲ ಸಿದ್ಧತೆ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಅಂದು ಬೆಳಗ್ಗೆ 6 ರಿಂದ ಸಂಜೆ 6 ಗಂಟೆವರೆಗೆ ನಗರದ ಎಲ್ಲಾ ಬಾರ್‌ಗಳನ್ನು ಬಂದ್ ಮಾಡಿಸುವಂತೆ ತಹಸೀಲ್ದಾರ್ ಶಿವಮೂರ್ತಿ ಅವರಿಗೆ ಸೂಚಿಸಿದರು. ಜಯಂತ್ಯುತ್ಸವದಲ್ಲಿ ಯಾವುದೇ ಗೊಂದಲ ಉಂಟಾಗದಂತೆ ಪೊಲೀಸ್ ಇಲಾಖೆಯವರು ಸೂಕ್ತ ಬಂದೋಬಸ್ತ್ ನಿಯೋಜಿಸಬೇಕು ಎಂದು ಸೂಚಿಸಿದರು. ಡಾ.ಬಾಬು ಜಗಜೀವನರಾಂ ಒಂದು ಸಮುದಾಯಕ್ಕೆ ಸೀಮಿತರಾದವರಲ್ಲ. ಎಲ್ಲಾ ವರ್ಗದ ಜನರಿಗೂ ಸಹ ಅವರ ತತ್ವ ಸಿದ್ಧಾಂತ, ವಿಚಾರಧಾರೆ ಪ್ರೇರಣೆಯಾಗಬೇಕಿದೆ. ಇಂತಹ ಮಹನೀಯರ ಜಯಂತಿಯಲ್ಲಿ ಎಲ್ಲಾ ಸಮುದಾಯದ ಮುಖಂಡರೂ ಸಹ ಭಾಗಿಯಾಗಿ ಜಯಂತಿಯನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಈ ಸಂದರ್ಭ ತಹಸೀಲ್ದಾರ್ ಶಿವಮೂರ್ತಿ, ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ನಗರಸಭಾ ಆಯುಕ್ತ ರಾಜಣ್ಣ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಶ್ರೀನಿವಾಸಪ್ರಸಾದ್, ನಗರಸಭಾ ಸದಸ್ಯರಾದ ಗಾಯತ್ರಿ, ರಂಗಸ್ವಾಮಿ, ಮುಖಂಡರಾದ ದೇವರಾಜು, ಕುಮಾರ್ ಸೇರಿದಂತೆ ಸಮುದಾಯದ ಮುಖಂಡರು ಇದ್ದರು.

ಚಿರತೆ ಸೆರೆ

ಮಲ್ಕುಂಡಿ, ಏ.1(ಚನ್ನಪ್ಪ)– ನಂಜನಗೂಡು ತಾಲೂಕಿನ ಏಚಗಳ್ಳಿ ಗ್ರಾಮದಲ್ಲಿ ಚಿರತೆಯೊಂದು ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಬಿದ್ದಿದೆ. ಗ್ರಾಮದಲ್ಲಿ ಚಿರತೆ ಹಾವಳಿ ಹೆಚ್ಚಾಗಿತ್ತು. ಇದರಿಂದ ರೈತರು ತಮ್ಮ ಜಮೀನುಗಳಿಗೆ ತೆರಳಲು ಭಯಭೀತರಾಗಿದ್ದರು. ಪ್ರತಿದಿನ ಸಾಕು ಪ್ರಾಣಿಗಳ ಬಲಿ ತೆಗೆದುಕೊಳ್ಳುತ್ತಿದ್ದ ಚಾಲಕಿ ಚಿರತೆ ಸೆರೆ ಹಿಡಿಯುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಗ್ರಾಮಸ್ಥರು ಮನವಿ ಮಾಡಿದ್ದರು. ಇದಕ್ಕೆ ಸ್ಪಂದಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಗ್ರಾಮದ ದಿನೇಶ್ ಎಂಬುವರ ಜಮೀನಿನಲ್ಲಿ ಇಟ್ಟಿದ್ದ ಬೋನಿನಲ್ಲಿ ಸುಮಾರು 2 ವರ್ಷದ ಚಿರತೆ ಸೆರೆಯಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯಾಧಿಕಾರಿಗಳು ಚಿರತೆಯನ್ನು ವೈದ್ಯರಿಂದ ತಪಾಸಣೆಗೆ ಒಳಪಡಿಸಿ ಚಾಮರಾಜನಗರದ ಕೆ.ಗುಡಿ ಅರಣ್ಯ ಪ್ರದೇಶಕ್ಕೆ ಬಿಡಲಾಯಿತು ಎಂದು ನಂಜನಗೂಡು ವಲಯ ಅರಣ್ಯಾಧಿಕಾರಿ ರಕ್ಷಿತ್ ತಿಳಿಸಿದ್ದಾರೆ.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಮಾರ್ಬಿಯಸ್ (ಇಂ): ಬೆ.10.45ಕ್ಕೆ, ರಾ.9.50ಕ್ಕೆ, ಜೇಮ್ಸ್ (ಕ): ಮ.1ಕ್ಕೆ, ಅಟ್ಯಾಕ್ (ಹಿಂ): ಮ.3.55ಕ್ಕೆ, ಆರ್‌ಆರ್‌ಆರ್ (3ಡಿ)(ತೆ): ಸಂ.6.20ಕ್ಕೆ.
ಸ್ಕ್ರೀನ್ 2	ಬಾಡಿಗಾಡ್ (ಕ): ಬೆ.10.45ಕ್ಕೆ, ತಲೆದಂಡ (ಕ): ಮ.1.20ಕ್ಕೆ, ಜೇಮ್ಸ್ (ಕ): ಸಂ.4ಕ್ಕೆ, ರಾ.7ಕ್ಕೆ, ಅಟ್ಯಾಕ್ (ಹಿಂ): ರಾ.10ಕ್ಕೆ.
ಸ್ಕ್ರೀನ್ 3	ಹೋಂ ಮಿನಿಸ್ಟರ್ (ಕ): ಬೆ.10.35ಕ್ಕೆ, ಸಂ.4.15ಕ್ಕೆ, ಲೋಕಲ್ ಟ್ರೈನ್ (ಕ): ಮ.1.30ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಸಂ.6.45ಕ್ಕೆ, ಆರ್‌ಆರ್‌ಆರ್ (2ಡಿ)(ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಆರ್‌ಆರ್‌ಆರ್ (2ಡಿ)(ಕ): ಬೆ.10.55ಕ್ಕೆ, ಆರ್‌ಆರ್‌ಆರ್ (2ಡಿ)(ತೆ): ಮ.2.30ಕ್ಕೆ, ಸಂ.6.15ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಆರ್‌ಆರ್‌ಆರ್ (ಹಿಂ): ಬೆ.9.30ಕ್ಕೆ, ಅಟ್ಯಾಕ್ (ಹಿಂ): ಮ.1.10ಕ್ಕೆ, ಆರ್‌ಆರ್‌ಆರ್ (3ಡಿ)(ತೆ): ಮ.3.55ಕ್ಕೆ, ಮಾರ್ಬಿಯಸ್ (ಇಂ): ರಾ.7.35ಕ್ಕೆ, ಆರ್‌ಆರ್‌ಆರ್ (3ಡಿ)(ಹಿಂ): ರಾ.10ಕ್ಕೆ.
ಸ್ಕ್ರೀನ್ 2	ಮಾರ್ಬಿಯಸ್ (ಇಂ): ಬೆ.9.35ಕ್ಕೆ, ಆರ್‌ಆರ್‌ಆರ್ (ತೆ): ಬೆ.11.55ಕ್ಕೆ, ಸಂ.6.10ಕ್ಕೆ, ಬಾಡಿಗಾಡ್ (ಕ): ಮ.3.35ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ರಾ.9.50ಕ್ಕೆ.
ಸ್ಕ್ರೀನ್ 3	ಜೇಮ್ಸ್ (ಕ): ಬೆ.9.50ಕ್ಕೆ, ಮ.3.45ಕ್ಕೆ, ರಾ.9.40ಕ್ಕೆ, ಮಾರ್ಬಿಯಸ್ (ಇಂ): ಮ.1ಕ್ಕೆ, ಅಟ್ಯಾಕ್ (ಹಿಂ): ಸಂ.6.55ಕ್ಕೆ.
ಸ್ಕ್ರೀನ್ 4	ಹೋಂ ಮಿನಿಸ್ಟರ್ (ಕ): ಬೆ.10.10ಕ್ಕೆ, ಸಂ.6.45ಕ್ಕೆ, ತಲೆದಂಡ (ಕ): ಮ.3.55ಕ್ಕೆ, ಲೋಕಲ್ ಟ್ರೈನ್ (ಕ): ಮ.12.55ಕ್ಕೆ, ಆರ್‌ಆರ್‌ಆರ್ (ತೆ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಲೋಕಲ್ ಟ್ರೈನ್ (ಕ): ಬೆ.10.30ಕ್ಕೆ, ಸಂ.4.15ಕ್ಕೆ, ಜೇಮ್ಸ್ (ಕ): ಮ.1.15ಕ್ಕೆ, ಅಟ್ಯಾಕ್ (ಹಿಂ): ರಾ.7ಕ್ಕೆ, ಆರ್‌ಆರ್‌ಆರ್ (2ಡಿ) (ತೆ): ರಾ.9.30ಕ್ಕೆ.
ಸ್ಕ್ರೀನ್ 2	ಬಾಡಿಗಾಡ್ (ಕ): ಬೆ.10.30ಕ್ಕೆ, ಆರ್‌ಆರ್‌ಆರ್ (ತೆ): ಮ.12.40ಕ್ಕೆ, ಹೋಂ ಮಿನಿಸ್ಟರ್ (ಕ): ಸಂ.4.05ಕ್ಕೆ, ಜೇಮ್ಸ್ (ಕ): ಸಂ.6.35ಕ್ಕೆ, ಅಟ್ಯಾಕ್ (ಹಿಂ): ರಾ.9.30ಕ್ಕೆ
ಸ್ಕ್ರೀನ್ 3	ಆರ್‌ಆರ್‌ಆರ್ (2ಡಿ)(ಕ): ಬೆ.10.30ಕ್ಕೆ, ಹೋಂ ಮಿನಿಸ್ಟರ್ (ಕ): ಮ.2ಕ್ಕೆ, ಮಾರ್ಬಿಯಸ್ (ಇಂ): ಸಂ.4.30ಕ್ಕೆ, ರಾ.10ಕ್ಕೆ, ಆರ್‌ಆರ್‌ಆರ್ (ಕ): ಸಂ.6.35ಕ್ಕೆ,
ಸ್ಕ್ರೀನ್ 4	ಹೋಂ ಮಿನಿಸ್ಟರ್ (ಕ): ಬೆ.10.30ಕ್ಕೆ, ತಲೆದಂಡ (ಕ): ಮ.1ಕ್ಕೆ, ಮನ್ಮಥ ಲೀಲೈ(ತ): ಮ.3.45ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಸಂ.6ಕ್ಕೆ, ಜೇಮ್ಸ್ (ಕ): ರಾ.9.15ಕ್ಕೆ

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಲವ್ ಮಾಕ್ಟೇಲ್ 2 (ಕ): ಸಂ.6ಕ್ಕೆ, ಡಿಯರ್ ಸತ್ಯ (ಕ): ಮ.12.35ಕ್ಕೆ, ರಾಧೆಶ್ಯಾಮ್ (ತೆ): ಬೆ.10.05ಕ್ಕೆ, ಬೆ.11.30ಕ್ಕೆ, ಮ.12.10ಕ್ಕೆ, ಮ.1ಕ್ಕೆ, ಮ.2.25ಕ್ಕೆ, ಮ.3.05ಕ್ಕೆ, ಮ.3.55ಕ್ಕೆ, ಸಂ.5.20ಕ್ಕೆ, ಸಂ.6.50ಕ್ಕೆ, ರಾ.8.15ಕ್ಕೆ, ರಾ.9.45ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಮ.2.50ಕ್ಕೆ, ರಾ.9.45ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ಬೆ.11.30ಕ್ಕೆ, ಸಂ.6.25ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.3.15ಕ್ಕೆ, ರಾ.9.45ಕ್ಕೆ, ಭೀಷ್ಮಪರ್ವಂ (ಮ): ರಾ.9ಕ್ಕೆ, ಪದ (ಮ): ಸಂ.6.40ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.20ಕ್ಕೆ, ಮ.12.30ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.


ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	**(ದೂ: 2521923)**
ಆರ್‌ಆರ್‌ಆರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಆರ್‌ಆರ್‌ಆರ್ (ಕ)	1 ಪ್ರದರ್ಶನಗಳು
ಆರ್‌ಆರ್‌ಆರ್ (ತೆ)	3 ಪ್ರದರ್ಶನಗಳು
ಉಮಾ ಚಿತ್ರಮಂದಿರ	**(ದೂ: 2520009)**
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಆರ್‌ಆರ್‌ಆರ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಹೋಂ ಮಿನಿಸ್ಟರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜೇಮ್ಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಅಟ್ಯಾಕ್ (ಹಿ)	4 ಪ್ರದರ್ಶನಗಳು
ಸಂಗಂ	
ಜೇಮ್ಸ್ (ಕ)	4 ಪ್ರದರ್ಶನಗಳು
ಲಿಡೋ	
ಹೋಂ ಮಿನಿಸ್ಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಆರ್‌ಆರ್‌ಆರ್ (ಕ)	4 ಪ್ರದರ್ಶನಗಳು

ರಸೆಲ್ ಅಬ್ಬರಕ್ಕೆ ಪಂಜಾಬ್ ತತ್ತರ



▸ ಕೆಕೆಆರ್‌ಗೆ 6 ವಿಕೆಟ್‌ಗಳ ಭರ್ಜರಿ ಜಯ ▸ ಉಮೇಶ್ ಯಾದವ್ ಪಂದ್ಯಶ್ರೇಷ್ಠ

ಮುಂಬೈ, ಏ.1– ಆಂಡ್ರೆ ರಸೆಲ್ ಅಬ್ಬರದ ಅರ್ಧಶತಕ ಹಾಗೂ ಉಮೇಶ್ ಯಾದವ್ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಕೋಲ್ಕತ್ತಾ ನೈಟ್ ರೈಡರ್ಸ್ ಪಂಜಾಬ್ ಕಿಂಗ್ಸ್ ವಿರುದ್ಧ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

ಇಲ್ಲಿನ ವಾಂಖೇಡೆ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ 18.2 ಓವರ್‌ಗಳಲ್ಲಿ 137 ರನ್‌ಗೆ ಆಲೌಟಾಯಿತು. ಪಂಜಾಬ್ ಬ್ಯಾಟ್ಸ್‌ಮನ್‌ಗಳು ಯಾವುದೇ ಹಂತದಲ್ಲೂ ಕೆಕೆಆರ್ ಬೌಲರ್‌ಗಳಿಗೆ ಸವಾಲು ಆಗಲಿಲ್ಲ. ಭಾನುಕ ರಾಜಪಕ್ಸ 31 ರನ್ ಹಾಗೂ ಇನ್ನಿಂಗ್ಸ್ ಕೊನೆಯಲ್ಲಿ ಸಮಯೋಚಿತ ಬ್ಯಾಟಿಂಗ್ ನಡೆಸಿದ ರಬಡ 25 ರನ್ ಗಳಿಸಿದ್ದು ಬಿಟ್ಟರೆ ಉಳಿದವರಿಂದ ನಿರೀಕ್ಷಿತ ಆಟ ಮೂಡಿ ಬರಲಿಲ್ಲ. ಉಳಿದಂತೆ ಶಿಖರ್ ಧವನ್ 16, ಮಾಯಂಕ್ ಅಗರ್ವಾಲ್ 1, ಲಿಯಾಮ್ ಲಿವಿಂಗ್‌ಸ್ಟೋನ್ 19, ರಾಜ್ ಬಾವಾ 11, ಹರ್‌ಪ್ರೀತ್ ಬ್ರಾರ್ 14, ಓಡೆನ್ ಸ್ಮಿತ್ 9 ರನ್ ಗಳಿಸಿದರು. ಕೆಕೆಆರ್ ಪರ ಉಮೇಶ್ 4, ಟಿಮ್ ಸೌಥಿ 2, ಶಿವಂ ಮಾವಿ, ರಸೆಲ್ ಹಾಗೂ ಸುನೀಲ್ ನರೇನ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.



138 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಕೋಲ್ಕತ್ತಾ ಸಹ ತಂಡದ ಮೊತ್ತ 51ರನ್ ಆಗುವಷ್ಟರಲ್ಲಿ ಪ್ರಮುಖ 4 ವಿಕೆಟ್ ಕಳೆದು ಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಒಂದಾದ ಆಂಡ್ರೆ ರಸೆಲ್ ಹಾಗೂ ಸ್ಯಾಮ್ ಬಿಲ್ಲಿಂಗ್ಸ್ ಪಂಜಾಬ್ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು. ಪಂದ್ಯದಲ್ಲಿ ಅಬ್ಬರಿಸಿದ ರಸೆಲ್ ಮೈದಾನದ ಮೂಲೆ ಮೂಲೆಗೆ ಸಿಕ್ಸರ್ ಸಿಡಿಸಿದರು. ಕೇವಲ 31 ಎಸೆತಗಳಲ್ಲಿ 2 ಬೌಂಡರಿ, 8 ಸಿಕ್ಸರ್ ಒಳಗೊಂಡ ಅಜೇಯ 70 ಗಳಿಸಿದ ರಸೆಲ್ ತಂಡವನ್ನು ಗೆಲುವಿನ ದಡ ಸೇರಿಸಿದರು. ಉಳಿದಂತೆ ಅಜಿಂಕ್ಯಾ ರಹಾನೆ 12, ಶ್ರೇಯಸ್ ಅಯ್ಯರ್ 26, ಸ್ಯಾಮ್ ಬಿಲ್ಲಿಂಗ್ಸ್ 24 ರನ್ ಗಳಿಸಿದರು. ಅಂತಿಮವಾಗಿ ಕೆಕೆಆರ್ 14.3 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 141ರನ್ ಗಳಿಸುವ ಮೂಲಕ ಗೆಲುವಿನ ನಗೆ ಬೀರಿತು. ಪಂಜಾಬ್ ಪರ ರಾಹುರ್ ಚಾಹರ್ 2, ರಬಾಡ, ಓಡೆನ್ ಸ್ಮಿತ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಉಮೇಶ್ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



ನಾಡಿನ ಸಮಸ್ತ ಜನತೆಗೆ
ಯುಗಾದಿ
ಹಬ್ಬದ ಶುಭಾಶಯಗಳು
ಆರ್. ಲಿಂಗಪ್ಪ
ಮಾಜಿ ಮೇಯರ್
ರವಿಕುಮಾರ್
ಮಾಜಿ ಮೇಯರ್
ವಿವೇಕಾನಂದ
ಮಾಜಿ ಅಧ್ಯಕ್ಷರು ಜಂಗಲ್ ಲಾಡ್ಜ್
ಟಿ. ಸೋಮು
ಮಾಜಿ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ



ನೂತನ ಶುಭಕೃತ್ ಸಂವತ್ಸರವು ಎಲ್ಲರಿಗೂ ಶುಭವನ್ನು ಉಂಟು ಮಾಡಲಿ.
ಯುಗಾದಿ ಹಬ್ಬದ ಶುಭಾಶಯಗಳು
ಎಲ್.ನಾಗೇಂದ್ರ
ಶಾಸಕರು, ಚಾಮರಾಜ ಕ್ಷೇತ್ರ ಮೈಸೂರು